A CIRCUMNAVIGATION TO THE WORLD OF DANCE AND PERFORMING ARTS : A COMPLETE JOURNAL

ನೂಪುರ ಭ್ರಮರಿ

... ನರ್ತನ ಜಗತ್ತಿಗೊಂದು ಪರಿಭ್ರಮಣ

ಸಂಪಾದಕರು : ಮನೋರಮಾ ಬಿ.ಎನ್.
ಪ್ರಸರಣಾಧಿಕಾರಿ : ವಿಷ್ಣುಪ್ರಸಾದ್ ನಿಡ್ಡಾಜೆ
ಕಛೇರಿ ನಿರ್ವಹಣೆ : ನಾರಾಯಣ ಭಟ್ ಬಿ.ಜಿ
ನೆರವು : ಸಾವಿತ್ರಿ ಭಟ್ ಮತ್ತು ಸನ್ಮಿತ್ರರು
ಪ್ರಕಾಶನ : ಶ್ರೀ ಸಾನ್ನಿಧ್ಯ ಪ್ರಕಾಶನ (ರಿ.), ಮಡಿಕೇರಿ
ಆವರಣ ಪುಟ : ಪ್ರವೀಣ್ ಹೆಗಡೆ ಬಣಗಿ, ಬೆಂಗಳೂರು
ಪುಟವಿನ್ಯಾಸ ಮತ್ತು ಮುದ್ರಣ : ಲಾವಣ್ಯ ಪ್ರಿಂಟರ್ಸ್, ಬೆಂಗಳೂರು

RNI No :KARKAN/2009/29752

ಮಾಘ–ಫಾಲ್ಗುಣ 2013

ಸಂಪುಟ : 7 ಸಂಚಿಕೆ : 1

# ಶಿಶಿರ ಶೃಂಗಾರ

## ಅಂತರಂಗ.....


- ಮಂಜೀರ ........................................ 2
- 'ವಿಮರ್ಶಾ ವಾಙ್ಮಯಿ'– ವರ್ಷದ ಅತ್ಯುತ್ತಮ ವಿಮರ್ಶೆ–2012 ಪ್ರಶಸ್ತಿಗೆ ಕೊರ್ಗಿ ಶಂಕರನಾರಾಯಣ ಉಪಾಧ್ಯಾಯ ........................................ 6
- ಲಲಿತ ಲಹರಿ : ಪದ್ಯಪಾನದೊಳಗಿನ ಮಹಾನಟ ........................................ 11
- ಹಸ್ತ ಮಯೂರಿ : ಕಟಕಾವರ್ಧಮಾನಹಸ್ತ ........................................ 15
- ಲಲಿತ ಲಹರಿ : ಶೃಂಗಾರ (ಅಷ್ಟ)ನಾಯಕರ ಚಿತ್ತವೃತ್ತಿ ........................................ 16
- 'ನೂಪುರ ಭ್ರಮರಿ'ಯ ಜೀವಮಾನ ಸಾಧನೆ ಪ್ರಶಸ್ತಿಗೆ ದೊರಕಿದ ರತ್ನ : ಲೀಲಾ ರಾಮನಾಥನ್....18
- ನುಡಿನಮನ ಅಂಜಲಿ : ನೃತ್ಯ ಲೋಕದಿಂದ ಮರೆಯಾದ ಮಾಣಿಕ್ಯ ಪ್ರೊ॥ ಜಯಾ ........................................ 23
- ದೀವಟಿಗೆ : ಮಿಂಚು ಹರಿಸುವ ಮಾಯಾವಿ : ಶಂಕರ್ ಕಂದಸ್ವಾಮಿ ........................................ 26
  ಕೂಚಿಪುಡಿ ಮತ್ತು ಕರಾವಳಿ ಯಕ್ಷಗಾನದ ತೌಲನಿಕ ಅಧ್ಯಯನದ ಆಕರವಾಗಬಲ್ಲ ಭರವಸೆ 'ಯಕ್ಷ ವಸಂತ' ........................................ 27
- ನಿಮ್ಮ ಬರೆಹ ನಮ್ಮ ಓದು ........................................ 30
- ಅಕ್ಷರ ಭ್ರಮರಿ : ಕರ್ನಾಟಕದ ನೃತ್ಯ ಕಲಾವಿದರ ಸಂಶೋಧನ ಸಂಬಂಧೀ ಅಭಿಪ್ರಾಯ ಸಮೀಕ್ಷೆ........32


All rights reserved. Reproduction in any manner, electronic or otherwise, in whole or in part without prior written permission is prohibited. Views and Opinions expressed by authors in the articles published in NOOPURA BHRAMARI are their own,not of Noopura Bhramari.
Visit our website : **www.noopurabhramari.com**
for the latest news, views and other updates.
ನೂಪುರ ಭ್ರಮರಿಗೆ ಲೇಖನ–ವಿವರ–ವಿಚಾರ–ಅಭಿಪ್ರಾಯ ಇತ್ಯಾದಿಗಳನ್ನು ಬರೆಯುವವರು
ಪ್ರತೀ ಎರಡನೇ ತಿಂಗಳ 1ನೇ ತಾರೀಕಿನ ಒಳಗಾಗಿ ಕಳಿಸಬೇಕಾಗಿ ಕೋರಿಕೆ.



# ಮಂಜೀರ

**ಮ**ತ್ತೊಂದು ಸಡಗರ ಅರಸಿ ಬಂದಿದೆ. ಕಳೆದ ವರುಷದ ಸಂಶೋಧನ ವಿಚಾರಸಂಕಿರಣವು ಸಮ್ಮೇಳನದ ರೂಪ ಪಡೆದು; ಅಯಾಚಿತವಾಗಿ ಅಖಿಲ ಭಾರತಮಟ್ಟಕ್ಕೇ ವಿಸ್ತರಿಸಿದ್ದು; ಭಾರತ ದಾಚೆಗೂ ಇರುವ ನೃತ್ಯ ಸಂಶೋಧಕರನ್ನು ಸೆಳೆದದ್ದು; ನೃತ್ಯಕ್ಷೇತ್ರಕ್ಕೆ ಅರ್ಪಣೆಯಾಗಲಿರುವ ಹೊಸ ಸಂಶೋಧನೆಗಳು ಪ್ರಬಂಧಗಳು ಮತ್ತು ಅದರೊಂದಿಗಿನ ಪ್ರಾತ್ಯಕ್ಷಿಕೆ, ಪ್ರದರ್ಶನ, ನೃತ್ಯಪ್ರದರ್ಶನದ ಸ್ಪರ್ಧೆ ಗಳಿಂದಾಚೆಗೂ ಚಿಂತಿಸಲು ಅನುಕೂಲಿಸಿ ನಿತ್ಯಸತ್ಯಗಳನ್ನು ಮತ್ತೊಮ್ಮೆ ಮನಗಾಣುವಂತೆ ಮಾಡಿದ ಭಾಷಣ–ರಸಪ್ರಶ್ನದ ಸ್ಫುರಣ–ಸರಣ, ಭಾರತದ ಮೊದಲ ನೃತ್ಯ ಸಂಶೋಧನ ನಿಯತಕಾಲಿಕೆಯೆಂಬ ಹೆಗ್ಗಳಿಕೆಯ 'ನೂಪುರಾಗಮ'ದ ಅನಾವರಣ, ಕರ್ನಾಟಕದ ಹಲವು ಪ್ರಾಂತಗಳ ನೃತ್ಯಕಲಾವಿದರು/ ಚಿಂತಕರ ಸಂಶೋಧನಾಭಿಪ್ರಾಯದ ಸಮೀಕ್ಷೆಯ ಲೋಕಾರ್ಪಣ,..ಹೀಗೆ ಒಂದಲ್ಲ; ಎರಡಲ್ಲ; ಹಲವು ನಿಟ್ಟಿನಲ್ಲಿ ಇದು ನೂಪುರ ಭ್ರಮರಿಗೂ, ಅದರೊಂದಿಗಿನ ಸಮಸ್ತ ಬಳಗಕ್ಕೂ ಮತ್ತು ಒಟ್ಟಾರೆ ನೃತ್ಯಚಿಂತನೆಯ ಹಾದಿಗೂ ಸೀಮೋಲ್ಲಂಘನದ ಸಂಭ್ರಮ. ಒಟ್ಟಿನಲ್ಲಿ ವರುಷದಿಂದ ವರುಷಕ್ಕೆ ಬೆಳವಣಿಗೆಯ ಓಘವನ್ನು ಪ್ರಗತಿಪಥದಲ್ಲಿ ಕಾಣುವಾಗ ನಮಗೊಂದು ಗಮ್ಯ ಕಾಯುತ್ತಲಿದೆ ಎಂಬ ಅನಿಸಿಕೆ ದೃಢವಾಗುತ್ತಲಿದೆ.

ಇದೆಲ್ಲವೂ ಅಷ್ಟು ಸುಲಭಸಾಧ್ಯವಾದುದಲ್ಲ ಎಂಬುದನ್ನು ಪ್ರತಿ ವರುಷದ ವಿಶೇಷ ಸಂಚಿಕೆಯಲ್ಲಿ ಹೇಳುತ್ತಲೇ ಬಂದಿರುವುದನ್ನು ಮತ್ತೊಮ್ಮೆ ಪುನರುಕ್ತಿಸುವುದು ಇಲ್ಲಿ ಉಚಿತವಲ್ಲ. ಏಕೆಂದರೆ ಕನಸುಗಳು, ಯೋಜನೆಗಳು ಬೆಳೆದಷ್ಟು ಅದಕ್ಕೆ ಸಮಾನಾಂತರವಾಗಿ ಸವಾಲುಗಳು ಎದುರಾಗುತ್ತಲೇ ಹೋಗುತ್ತವೆ. ಅವಸರ, ಹುಂಬತನಗಳಿದ್ದರೆ ಸಾಗುವ ವೇಗಕ್ಕೆ ಸಲಿಲಸಂಚಾರ ದುರ್ಲಭವಾಗುತ್ತದೆ. ಜೊತೆಗೆ ಸಾಕಷ್ಟು ಅಡ್ಡಿ, ಆತಂಕ, ಕೊರತೆ, ಸಂದೇಹ, ತೊಂದರೆ, ದ್ರೋಹಚಿಂತನಗಳು ಪ್ರತಿವರುಷವೂ ನಾಮುಂದು ತಾಮುಂದು ಎಂದೇ ಧಾಂಗುಡಿಯಿಟ್ಟು ತೊಡರುಗಾಲು ಹಾಕುತ್ತವೆ. ವೈಯಕ್ತಿಕ ಅವಕಾಶಗಳನ್ನು ಆಳುತ್ತವೆ. ಕಾರ್ಯಗಳು ಇನ್ನೇನು ಕಾರ್ಯಗತವಾಗುವುದೇನೋ ಎಂಬ ಲಕ್ಷಣದ ಬೆನ್ನಿಗೇ ಭೂತಾಕಾರದ ಬಸವಳಿಯುವಿಕೆ ಬಲೆ ಬೀಸುತ್ತಿರುತ್ತದೆ. ನೃತ್ಯದ ಬೆಂಬಿಡದ ಅಪಸವ್ಯದ ಸಂಕಲೆಗಳ ಕರಿನೆರಳು ಮತ್ತಷ್ಟು ದಟ್ಟವಾಗಿ ಅಣಕಿಸುವಾಗೆಲ್ಲಾ ವ್ಯರ್ಥಪ್ರಯತ್ನವಾಗಬಹುದಾದ ವ್ಯಂಗ್ಯ ಕುಟುಕುತ್ತಿರುತ್ತದೆ. ಹಾರ್ದಿಕ ಶ್ರೀಮಂತಿಕೆಯೇನಿದ್ದರೂ ಆರ್ಥಿಕ ಬಡತನದ ಎದುರಿಗೆ ಮಂಡಿಯೂರಬೇಕಾದ ಕಾಲದಲ್ಲಿ ಬಳುವಳಿ ಬದಿಗಿರಲಿ; ಸಾರ್ಥಕ್ಯವಾಗಬಹುದಾದ ಭಾವನೆಗಳೇ ಹೆಪ್ಪುಗಟ್ಟುವ ಸಮಯವದು. ಆದಾಗ್ಯೂ ಮುಂದಿಟ್ಟಿರುವ ನಡೆಯ ನಸುಕು ಹರಿದು ನೇಸರನನ್ನು ಕಾಣುವ ಧ್ಯೇಯದಲ್ಲಿ ಭಿನ್ನತೆಗಳಿಂದಾಚೆಗೂ ಸಮಷ್ಟಿಯ ಆತ್ಮತುಷ್ಟಿಯನ್ನರಸಿ ಪುಷ್ಟಗೊಳ್ಳುವುದು ನಮಗೆ ಅದೇಕೋ ದಿವ್ಯಸನ್ನಿಧಾನ. ಇಂತಹ ಬದುಕಿನ ಬದಲಾವಣೆ ಎಷ್ಟರಮಟ್ಟಿಗೆ ವಿಹಿತ ಎಂದು ನಮ್ಮನ್ನೇ ನಾವು ಕೇಳಿಕೊಂಡಾಗಲೂ ಬದಲಾವಣೆಯೆನ್ನುವುದನ್ನೇ ಕೊಡುಗೆಯಾಗಿ ಕಂಡುಕೊಂಬ ಹಟವೇ ಆಪ್ಯಾಯಮಾನ. ತಪ್ಪಿದ ಹೆಜ್ಜೆಗಳನ್ನು ಮತ್ತಷ್ಟು ಎಚ್ಚರಿಕೆಯ ಬಿಗುವಿನೊಂದಿಗೆ ಸರಿಪಡಿಸಿಕೊಳ್ಳಬೇಕಾದ ಜಾಣ್ಮೆಯ ನಡಿಗೆ ಮತ್ತಷ್ಟು ಅನೂಚಾನ. ಜೀವನಾನುಸಂಧಾನವೇ ಧ್ಯಾನವಾದ ಮನೋವಿಧಾನ. ಒಟ್ಟಿನಲ್ಲಿ ಬದಲಾವಣೆಯ ಬಾಳಿನೊಗ್ಗರಣೆ ಜೀವನಪಾಕವನ್ನೂ ಪಕ್ವವಾಗಿಸುವ ಸಿಹಿಹೂರಣವೇ ಆಗುತ್ತಿರುವುದು ದೈವಚಿತ್ತ ಕಾರ್ಯಕಾರಣ. ಹೀಗೆ, ಪ್ರತಿಯೊಂದರ ಆದಿಗೂ ನಮ್ಮ ಶ್ರಮ ವಿಶ್ರಮವಾಗದೆ ಆವರಣವನ್ನು ಹಿಗ್ಗಿಸುತ್ತಾ ಸವಾಲಿಗೆ ಸವಾಲೆಂಬಂತೆ ಮುನ್ನುಗ್ಗುತ್ತಿರುವುದು ನಮ್ಮ ಬದುಕಿನ ಚಿಂತನೆಗಳನ್ನು, ಕಸುವುಗಳನ್ನು ಗಟ್ಟಿಗೊಳಿಸುತ್ತಲಿದೆ ಎಂಬಲ್ಲಿಗೆ ನಮ್ಮೊಳಗಿನ ಚೈತನ್ಯಕ್ಕೆ ನಾವು ಅನಂತ ಆಭಾರಿಗಳೇ ಸರಿ.

ಅಷ್ಟಕ್ಕೂ ಬದಲಾವಣೆಯ ಹರಿಕಾರರೆನಿಸಿಕೊಳ್ಳುವುದಕ್ಕಾಗಲೀ, ಶಕೆ ಬರೆಯುವುದಕ್ಕಾಗಲೀ ನಾವು ಹೊರಟವರಲ್ಲ ಎಂಬುದು ಯತಾರ್ಥವಾದರೂ; ಒಂದಾನೊಂದು ಕಾಲದಿಂದ ಕಾಡಿದ ಕಳವಳಗಳು, ತಳಮಳಗಳು ಮತ್ತೊಮ್ಮೆ ಮರುಕಳಿಸದೆ, ಮಸಳಿಸದಿರಲಿ ಎಂಬ ಆಶಯವಂತೂ ಅವ್ಯಾಹತವಾಗಿ ಹೆಜ್ಜೆಗಳನ್ನು ಬದಲಾವಣೆಯ ಬೆಳಕಿಗೆ ಪ್ರೇರೇಪಿಸುತ್ತಲಿದೆ. ಜೊತೆಗೆ ಮತ್ತೊಂದಷ್ಟು ಸಮಾನಹೃದಯೀ ಮಂದಿಯ ಮನಮಂದಿರಗಳ ಆಶೋತ್ತರಗಳನ್ನು

ಆಧರಿಸಿ ನಿಲ್ಲುವ ಧನ್ಯತೆಯನ್ನು ಆವಾಹಿಸಿಕೊಳ್ಳುವುದಂತೂ ಇನ್ನೂ ಚೆಂದವೇ ಸೈ. ಆ ಮೂಲಕ ಬದುಕಿನ ಬರೆವಣಿಗೆಯಲ್ಲಿ ಬವಣೆಗಳನ್ನು ಬದಿಗೆ ಸರಿಸಿ ನಿಂದು ಬಲ್ಮೆ, ಬಿಸಿಚಿಲುಮೆ, ಭವನೊಲುಮೆಯನ್ನೇ ಅಕ್ಷರಮಾಲೆಗಳಾಗಿ ಕಟೆಯುವ ಚಟ ದಿಟವಾಗಿಯೂ ನಮ್ಮ ಹಟವೇ ಆಗುತ್ತಲಿದೆ. ತೇಯ್ದುಕೊಂಡರೂ ಪರಿಮಳವಾಗುವ ಸೊಗಸು ನಿಜಮಂತ್ರವಾಗಿದೆ.

ಹಾಗೆಂದು ಸಂಘಟನೆ–ವಿಘಟನೆಗಳ ಕವಲುಹಾದಿಯ ನಡುವೆಯೂ ಕೈಬೀಸಿ ಕರೆಯುತ್ತಾ; ಕೈ ಜೋಡಿಸಿದವರನ್ನು ಜೊತೆಗೊಯ್ಯುವ ಪಥಪ್ರಥಮರಾಗುವಾಗಲೇ ಬೆಣ್ಣೆ ಮೆತ್ತಿ ಎಣ್ಣೆ ತಿಕ್ಕಿಹೋಗುವವರನ್ನು ಗಮನಿಸದೇ ಇದ್ದರೆ ಆದೀತೆ? ಸಂಘಟಿಸುವಿಕೆಯ ಬಲ ವಿಚ್ಛಿದ್ರವಾಗಿಸುವ ಆತಂಕದ ಅರಿಗಳೆದುರಾದರೆ ಅಟ್ಟಿ ಕಟ್ಟುವ ಚತುರತೆಯನ್ನು ಜಾಣಿಸದಿದ್ದರೆ ಜೊಳ್ಳು ಉದುರೀತೇ? ಮೋದದ ಮಾದರಿಯನ್ನರಿಯದೆ ಬೋಧೆಯಿಲ್ಲದಂತೆ ಮಾಡಿದ ಬಾಲಾಪರಾಧಗಳೂ ಸಹ ಪ್ರಮಾದಗಳೆನಿಸದೆ ಬಂದೀಖಾನೆಯೊಳಗೆ ಹೊಗುತ್ತದೆ ಎಂಬುದಂತೂ ಬಲ್ಲವರಿಗೆ ವೇದ್ಯ. ಆದರೆ ಮುಂಗೈಬಲವನ್ನಷ್ಟೇ ಕೊಟ್ಟು ದೇಶಾವರಿ ನಗೆ ಬೀರುವವರಿದ್ದರೆ ನಾವೆಂದಿಗೂ ಅವರನ್ನು ಬಳಸಿನಿಲ್ಲಲಾರೆವು. ಪ್ರಾಮಾಣಿಕತೆಯ ಪ್ರಮಾಣವಿಲ್ಲದಿರೆ ಪರಿತಾಪಗಳಿಗೆ ಬೆಲೆಯೇ ಇಲ್ಲ ಎಂದು ನಂಬುವವರು ನಾವು. ಕೇಳ್ಮೆಯ ಸಹನೆಯಿಲ್ಲದೆ ಕಣ್ಕಟ್ಟು ಮಾಡುವವರಿಗೆ ನಮ್ಮ ಕಿವಿಯೂ ಕಾಯ್ದೆರೆಯುವುದಿಲ್ಲ. ಪ್ರಯೋಜನೈಕದೃಷ್ಟಿಯನ್ನೇ ನೆಚ್ಚಿದವರಿಗೆ ಮುಲಾಜಿನ ಸಲಾಮುಗಳಿಲ್ಲ. ಔದಾರ್ಯವಿಲ್ಲದಿರೆ ಆದರವೇ ಇಲ್ಲ. ಅವರವರ ಭಾವಕ್ಕೆ, ಅವರವರ ಭಕುತಿಗೆ ದೇವರೊಲಿಯುವನು ಎಂಬುದು ಎಷ್ಟು ನಿಜವೋ ಅವರವರ ತೋಷಕ್ಕೆ, ಅವರವರ ಕೋಶ ಹಿಗ್ಗುತ್ತದೆ; ಹಿಸುಕಲ್ಪಡುತ್ತದೆ ಎಂಬುದೂ ಅಷ್ಟೇ ನಿಜ. ತಾಳ್ಮೆ ಎಂದಿಗೂ ದೌರ್ಬಲ್ಯವಲ್ಲ ಎಂಬುದು ಅರಿವಾದರೆ ಲೋಕಕ್ಷೇಮ. ಮಿಂಚಿದ ಕಾಲ ಚಿಂತಿಸಿದರೆ ದಕ್ಕೀತೇ ಎಂಬ ಪೂರ್ವಸೂರಿಗಳ ನಾಣ್ಣುಡಿ ಆಲೋಚನಾತಂತ್ರವಾದರೆ ಅಂಕೆ–ಶಂಕೆಗಳೆಲ್ಲವೂ ಶಮ.

ಆದರ್ಶದ ಬಡಾಯಿ ಎಷ್ಟೇ ಕೊಚ್ಚಿದರೂ ಕೆಲವೊಂದು ರಾಜಿಗಳು ನೃತ್ಯದಂಥ ಅ'ವರ್ಣ'ನೀಯ ಕ್ಷೇತ್ರಕ್ಕೆ ಅನಿವಾರ್ಯವೇ ಹೌದು. ಒಂದೊಮ್ಮೆ ಪರಂಪರೆಯನ್ನು ದಾಟಿಸುವುದಷ್ಟೇ ಕೆಲಸವಾಗಿದ್ದಿದ್ದರೆ ಇಂತಹ ರಾಜಿಗಳ ಪ್ರಮೇಯ ಒದಗುತ್ತಿರಲಿಲ್ಲವೇನೋ ! ಆದರೆ ದಾಟಿಸುವುದಕ್ಕಿಂತಲೂ ದಟ್ಟವಾಗಿಸುವುದನ್ನು ನಂಬಿದವರು ನಾವು. ಹಾಗಾಗಿ ಆ ಸಂಕೀರ್ಣ ಹಂತಕ್ಕೆ ಬೇಕಾದ ಸಕಲ ಕರಣಾದಿಗಳನ್ನೂ ಕಾರಣನಿಮಿತ್ತವಾಗಿ ಸಂದರ್ಭೋಚಿತ ಔಚಿತ್ಯಸಮೇತ ಪ್ರಜ್ಞಾಪೂರ್ಣವಾಗಿ ಅಚ್ಚುಕಟ್ಟಾಗಿ ಹೆಗಲೇರಿಸಿ ಅಂತರಂಗಕ್ಕಿಳಿಸಬೇಕಾಗುತ್ತದೆ; ಚಿಕ್ಕ–ಪುಟ್ಟ ತ್ಯಾಗ ಅನುಸರಣೀಯವಾಗುತ್ತದೆ. ಆದರೆ ಅದಕ್ಕೆಲ್ಲಾ ಹೆಚ್ಚುಗಾರಿಕೆಯನ್ನು ತೋರಿಸದಿರುವುದೇ ದೊಡ್ಡತನದ ಲಕ್ಷಣ.

ಅನುಭವ ವರಿಷ್ಠತೆಯ ನಿಕಷವೆಂದರೆ ಅಂತರಂಗದೊಳಗಿನ ಅಧ್ಯಾತ್ಮದ ಹದ, ಕಾಲ–ದೇಶ ಸಮನ್ವಯ ಪ್ರಜ್ಞೆಯೇ ಹೊರತು ವಯಸ್ಸಿನ ಹಿರಿಮೆಯಲ್ಲ. ಇದೇ ನಮ್ಮ ನಡುವಿನ ಸ್ನೇಹ–ಸಾಧನೆಗಳ ಮೂಲಧಾತು. ಇದನ್ನು ಅರ್ಥವಿಸಿದ ನಿಸ್ಪೃಹತೆಗೆ ಅನಂತ ಅಭಿವಂದನೆಗಳು ಸಲ್ಲುತ್ತವೆ.

ಉಕ್ತಿಯೊಂದು ಮತ್ತೆ ಮತ್ತೆ ಅನುರಣಿಸುತ್ತದೆ. 'ನಮ್ಮ ಮಿತಿಗಳನ್ನು ಮೀರಿದಾಗಲೇ ನಮ್ಮ ಮಿತಿಗಳು ಅರ್ಥವಾಗುತ್ತವೆ'. ಜೊತೆಗೆ ಮಿತಿ ಮೀರಿ ನಡೆದರೆ ಮತಿಹೀನವೂ ಆಗುತ್ತದೆ. ಆದ್ದರಿಂದಲೇ ಮಿತಿಯ ಮತಿಯನ್ನು ಅರಿತು ನಡೆಯುವಲ್ಲಿ ನಮ್ಮೊಂದಿಗೆ ಜೊತೆಯಾಗುವ ಸಕಲ ಸಮಸ್ತ ಮಹನೀಯರಿಗೂ ಮನಃಪೂರ್ವಕವಾದ ಆಮಂತ್ರಣವಿದೆ.

ಬಗೆದದ್ದು ತಾರೆ; ಉಳಿದದ್ದು ಆಕಾಶ. ಚಂದಿರನ ತಂಪುತಿಂಗಳು ಮತ್ತಷ್ಟು ಪೂರ್ಣಿಮೆಯನ್ನು ಪಸರಿಸಲಿ; ಬೆಳಕಿನ ಸೇವೆ ಬೆಳಗಿ ಬರಲಿ.

ಪ್ರೀತಿಯಿಂದ
**ಸಂಪಾದಕರು**



**Noopura Bhramari** (R.) **Dance Researchers' Forum**

in association with **BHARATIYA VIDYA BHAVAN**, Bangalore

***Presents***

## National Level Conference- 2013

***On***

# Dance Research : PROXIMITY & PRACTICALITY

**Venue :** **KHINCHA AUDITORIUM**
**Bharatiya Vidya Bhavan, Race Course Road, Bengaluru**

**Date :** **15 February 2013**

**Inaugural Function and Release of 'NOOPURAAGAMA' Research Journal, Souvenir and Website Re-launch**

**Inauguration** : **Prof. P.V. KRISHNA BHAT**
(MLC, Karnataka Govt. ; Former Director, IGNCA, SRC, Bangalore)

**Conference president and Key note address by** : Dr. H.S. Gopal Rao (Renowned Historian, Epigraphist)

**Chief Guest** : Prof. Suryanath Kamath (Historian, Former Director, Karnataka Itihasa Academy, Chief Editor (Rtd) Karnataka Gazeetter)

**President** : Prof. T. V. Venkatachalashastri, (Senior Researcher, Scholar, Mysore)

**RESEARCH PAPERS PRESENTATION**

**Themes** : Dance History, Re-construction of old techniques, Media participation

**Sub themes** : Works of classicality, a commentary, that which is of educational significance, voicing a contemporary scenario, having social relevance, or related to music, folk or other allied arts etc.

**1ST SESSION**

**11 AM.** Natya and Nritya - As terminology ; as concept
**by Dr. Shobha Shashikumar, Bengaluru**

Evolution of Himmela/Pakkabvadya (Music Ensemble) and Rangaparivara - special reference with Karnataka (In Kannada)
**by Manorama B.N, (Noopura Bhramari)**

Raga and Rasa – an interface in Abhinaya (with reference to Ashta Nayikas)
**by Padmini Shridhar, Bengaluru**

**2ND SESSION**

Hasta's according to various treatises and their application in Bharatanatyam
**by Padmini Kumar, Bengaluru**

Vyabhichari Bhavas in Rasa Theory : Significance and applications in Bharathanatyam Choreography
**by Swathi Subhramanyam, Corvallis, US.**

Histroy, Definition and Classification of Nayika : Anya Sambhoga Dukhita
**by Dwaritha Vishwanath, Bengaluru**

Varieties of Duti as in Pandari Vitthala's Dutikarmaprakasha
**by SHALINI VITTAL, Bengaluru**

Purushabhinaya in Bharathanatyam : Opportunities and Challenges (In Kannada)
**by A.N. SUDHIR KUMAR, Bengaluru**

Dancing of Tevaram hymns in Tanjore Big temple
**by DEEPTHA SUNDARAM, Goa**

Evolution of Desi dance in Tuluunadu - A Study (In Kannada)
**by DEEPAK KUMAR, Puttur.**

The Evolution of Odissi Dance and Manipuri Dance : A Comparative Perspective
**by KABERI SEN, Kolkata.**

Evolution of Shalabanjika Sculptures in Karnataka
**by Dr. KARUNA VIJAYENDRA, Bengaluru**

**5.30PM- 6.30PM.**
**VALEDICTORY FUNCTION**
**Award presentation and Prize distribution of**
**State level dance quiz and elocution competition.**

**CHIEF GUESTS :**
**Sri. ANANTH KUMAR**
MP, Bengaluru South.

**Sri. GOVINDA M. KARAJOLA**
Minister, Deaprtment of Kannada and Culture, Karnataka Govt.

**Smt. TEJASWINI ANANTHKUMAR**
President, Adamya Chetana Trust, Bengaluru.

**PRESIDENT :**
**Sri. H.N. SURESH**
Director, Bharatiya Vidya Bhavan, Bengaluru.

**Life time achievement award with the Title '*Noopura Kala Kalahamsa* ' to**
**Smt. LEELA RAMANATHAN**
Artistic director, Meenakshi Sundaram Centre for Performing arts, Bangalore.

**Best Dance Critic Award-2012 with the title 'Vimarsha Vangmayi' to**
**Vidwan KORGI SHANKARANARYANA UPADHYAYA,** Bengaluru.

**6.30PM- 9PM :**
***'Sundari Sanje'- in memory of renowned danseuse Sundari Santhanam***

**Reconstruction of**
**'Chitra Purvaranga of Natyashastra'**



**Research based Dance productions**
**' Navarasa Krishna'**

**Lyrics: Shatavadhani Dr. R. Ganesh**
**Music direction: Vid. Balasubhramanya Sharma**
**Dance direction and choreography: Dr. Shobha Shashikumar**
**Technical Assistance: Dr. Karuna Vijayendra**



# ‘ನೂಪುರ ಭ್ರಮರಿ’ಯ ವರ್ಷದ ನೃತ್ಯ ವಿಮರ್ಶಕ ಪುರಸ್ಕಾರ
## ‘ವಿಮರ್ಶಾ ವಾಙ್ಮಯಿ’ ಬಿರುದಿನೊಂದಿಗೆ
## ಶ್ರೀ ಕೊರ್ಗಿ ಶಂಕರನಾರಾಯಣ ಉಪಾಧ್ಯಾಯ ಇವರಿಗೆ



ನರ್ತನ ಮತ್ತು ಪ್ರದರ್ಶಕ ಕಲೆಗಳ ಕುರಿತ ಪ್ರತಿಷ್ಠಿತ ದ್ವೈಮಾಸಿಕ ಮತ್ತು ಪ್ರತಿಷ್ಠಾನ ‘ನೂಪುರ ಭ್ರಮರಿ’ – ನೃತ್ಯಕ್ಷೇತ್ರದ ವಿಮರ್ಶಕರನ್ನು ಗುರುತಿಸುವ, ಗೌರವಿಸುವ ಮತ್ತು ವಿಮರ್ಶನ ಕ್ಷೇತ್ರದ ಜವಾಬ್ದಾರಿಯನ್ನು ಹೆಚ್ಚಿಸುವ ಉದ್ದೇಶದಿಂದ ಕರ್ನಾಟಕ ನಾಡಿನಲ್ಲಿ ಮೊತ್ತ ಮೊದಲ ಬಾರಿಗೆ ಆರಂಭಿಸಿದ ಪ್ರಶಸ್ತಿಯಿದು. ವಿಮರ್ಶೆಯ ಕ್ಷೇತ್ರಕ್ಕೆ ಯೋಗ್ಯ ಮನ್ನಣೆ ದೊರಕಿಸಿಕೊಡುವ ನಿಟ್ಟಿನಲ್ಲಿ ಮೌಲ್ಯಯುತ ನಿರ್ಣಯ ಮತ್ತು ಮೌಲ್ಯಮಾಪನದಿಂದ ಪ್ರಶಸ್ತಿಯು ಪ್ರತಿಷ್ಠಿತವೆಂದೂ ಮತ್ತು ಕಳೆಗುಂದುತ್ತಿರುವ ವಿಮರ್ಶೆಯ ಕ್ಷೇತ್ರವನ್ನು ಬಲಪಡಿಸುವಲ್ಲಿ ಇಟ್ಟಿರುವ ಉತ್ತಮ ಹೆಜ್ಜೆಯೆಂದು ಗುರುತಿಸಲ್ಪಟ್ಟಿದೆ. ಬಹುಶ್ರುತ ವಿದ್ವಾಂಸರಾದ ಶತಾವಧಾನಿ ಡಾ. ಆರ್.ಗಣೇಶರು ಈ ಪ್ರಶಸ್ತಿ ಸಮಿತಿಯ ಅಧ್ಯಕ್ಷರು ಮತ್ತು ಅವರೊಂದಿಗೆ ಯೋಗ್ಯ ನಿರ್ಣಾಯಕರು ಪ್ರಶಸ್ತಿಯ ಸಮಿತಿಯಲ್ಲಿದ್ದಾರೆ. 2011ನೇ ಸಾಲಿನ ಪ್ರಶಸ್ತಿ ಅನನ್ಯ ಪತ್ರಿಕೆಯ ಸಂಚಾಲಕಿ–ವಿಮರ್ಶಕಿ ಪ್ರಿಯಾರಾಮನ್ ಹಾಗೂ 2012ನೇ ಸಾಲಿನ ಪ್ರಶಸ್ತಿ ಉಡುಪಿಯ ಕಲಾವಿಮರ್ಶಕಿ ಪ್ರತಿಭಾ ಸಾಮಗ ಅವರಿಗೆ ಈ ಪ್ರಶಸ್ತಿ ಸಂದಿರುತ್ತದೆ.

**2013ನೇ ಸಾಲಿನಲ್ಲಿ ಈ ಪ್ರಶಸ್ತಿಯಿಂದ ಪುರಸ್ಕೃತಗೊಳ್ಳಲಿರುವವರು ಕೊರ್ಗಿ ಶಂಕರನಾರಾಯಣ ಉಪಾಧ್ಯಾಯ.** ಸದ್ಯ ಬೆಂಗಳೂರಿನ ಜೆಪಿನಗರ ವಾಸಿಯಾದರೂ ಮೂಲತಃ ಕರಾವಳಿಯ ಕುಂದಾಪುರದ ಕೊರ್ಗಿ ಎಂಬ ಊರಿನವರು. ಉಪಾಧ್ಯಾಯರ ಮನೆತನ ಸಂಸ್ಕೃತ – ಕನ್ನಡ ಭಾಷಾಪ್ರೌಢಿಮೆಗೆ ಹೆಸರುವಾಸಿ. ತಂದೆ ತಾಯಂದಿರು ದಿವಂಗತರಾದ ಸೂರ್ಯನಾರಾಯಣ ಉಪಾಧ್ಯಾಯ ಮತ್ತು ಕಲ್ಯಾಣಿ. ಕಳೆದ ವರುಷವಷ್ಟೇ ನಮ್ಮನ್ನಗಲಿದ ಹೆಸರಾಂತ ಸಂಸ್ಕೃತ ವಿದ್ವಾಂಸ, ದ್ವಿವೇದಿ, ಯಕ್ಷಗಾನ ಅರ್ಥದಾರಿ, ವಿಮರ್ಶಕ, ಕವಿ ಕೊರ್ಗಿ ವೇಂಕಟೇಶ್ವರ ಉಪಾಧ್ಯಾಯರು ಇವರ ಅಣ್ಣ. ನಿವೃತ್ತ ಬಿಎಸ್‌ಎನ್‌ಎಲ್ ಉದ್ಯೋಗಿಯಾಗಿರುವ ಕೊರ್ಗಿಯವರಿಗೆ ಸಾಹಿತ್ಯ ಸಂಗೀತ ನಾಟಕ ನೃತ್ಯ ಯಕ್ಷಗಾನಗಳು ಆಸಕ್ತಿಯ ಕ್ಷೇತ್ರಗಳು. ಮಡದಿ ಲಕ್ಷ್ಮಿ ಉಪಾಧ್ಯಾಯರು ಪತಿಯ ಸಾಹಿತ್ಯ, ಸಂಗೀತ, ನೃತ್ಯಾದಿ ಎಲ್ಲ ಸಂದರ್ಭವಿಶೇಷಗಳಲ್ಲೂ ಸಮಭಾಗಿ, ಸಹಚಾರಿಣಿ, ಸರಳೆ, ದಿಟ್ಟೆ, ಸಹೃದಯಿ. ಮಗ ಪ್ರಜ್ಞಾನ ಲೀಲಾಶುಕ ಉಪಾಧ್ಯಾಯ (ಸೂರ್ಯ) ಚಾರ್ಟಡ್ ಅಕೌಂಟೆಂಟ್ ಓದಿದ್ದರೂ; ಆ ವೃತ್ತಿಯನ್ನು ಕೈಬಿಟ್ಟು, ಮೃದಂಗ, ವಯೋಲಿನ್ ಇತ್ಯಾದಿ ವಾದ್ಯವಾದನಗಳಲ್ಲಿ ತೊಡಗಿಸಿಕೊಂಡು, ಸಂಖ್ಯಾಬಂಧವೆಂಬ ಅವಧಾನದ ಒಂದು ವಿಭಾಗದ ಪೃಚ್ಛಕತ್ತ್ವದಲ್ಲಿಯೂ ಹೆಸರುವಾಸಿಯಾದ ಕಲಾತಪಸ್ವಿ. ಬೆಂಗಳೂರಿನಂತಹ ಪ್ರದೇಶಗಳಲ್ಲಿಯೂ ಲಾಭದ ಲೆಕ್ಕಾಚಾರವನ್ನು, ಜೀವನ ವ್ಯವಸ್ಥೆಯ ತಳುಕುಬಳುಕುಗಳನ್ನು ಬದಿಗಿಟ್ಟು ಸಹೃದಯೀ ಸಮಾಲೋಚನೆಗಳಿಗೆ ಓಡಾಡುವ ಇಡೀ ಸಂಸಾರ ; ಮನೆಯ ಕೆಳಮಹಡಿ ಪೂರ್ತಾ ತಮ್ಮ ಆಲೋಚನೆಯ ಯಕ್ಷಗಾನ, ಸಂಗೀತ, ನೃತ್ಯ, ತಾಳಮದ್ದಳೆ, ಅವಧಾನದಂತಹ ಕಾರ್ಯಕ್ರಮಗಳಿಗೆ ಅನುಕೂಲವಾಗಲೆಂಬಂತೆಯೇ ಪುಟ್ಟ ವೇದಿಕೆ, ಸಭಾಂಗಣವನ್ನು, ಮೇಲ್ಮಹಡಿಯಲ್ಲಿ ಗ್ರಂಥಾಲಯವನ್ನೂ ಮೀಸಲಿರಿಸಿದೆ. ಒಟ್ಟಿನಲ್ಲಿ ಇಡಿಯ ಸಂಸಾರವೇ ಕಲೆಯ ಬೇರೆ ಬೇರೆ ಆಯಾಮಗಳಲ್ಲಿ ಗುರುತರವಾದ ನಿರಾಡಂಬರ ಕೆಲಸವನ್ನು ಮಾಡುತ್ತಿದೆ ಎಂಬುದು ಕೆಲವೇ ಮಂದಿಯಲ್ಲಾದರೂ ಜನಜನಿತ.

ಸ್ವಯಂ ವಯೋಲಿನ್ ವಾದಕರೂ ಆಗಿರುವ ಕೊರ್ಗಿ ಶಂಕರನಾರಾಯಣ ಉಪಾಧ್ಯಾಯರಿಗೆ 57ರ ಹರೆಯ. ವಯಸ್ಸನ್ನೂ ನಾಚಿಸುವ ವೈಚಾರಿಕ, ವಿಮರ್ಶಕ ಪ್ರೌಢಿಮೆ ಅವರ ವಿಚಾರ, ವಿಮರ್ಶೆ, ನಡೆನುಡಿಗಳಲ್ಲಿ ಧ್ವನಿಸುತ್ತದೆ. ಭಾಷೆಯೂ ಅಷ್ಟೇ; ಸ್ವಚ್ಛ, ಸುಂದರ ಸಂಸ್ಕೃತಪೋಷಣೆಯ ನಡುವಿನ ಅಚ್ಚಗನ್ನಡ; ಓದಿಕೊಂಡುಹೋದಂತೆಲ್ಲಾ ಅಲ್ಲಲ್ಲಿ ಬೆರಗುಗೊಳಿಸುವ ರೂಪಕ/ಅಲಂಕಾರಗಳ ಒನಪು; ಸಾರ್ಥಕತೆಯ ಸೂಚನೆಯುಳ್ಳ ಸಲಹೆ–ಕುಟುಕುಗಳ ಸುಮನೋಹರ ಗುಟುಕು. ಪ್ರತೀ ಪದ, ಅಕ್ಷರಗಳಿಗೂ ಅದರದ್ದೇ ಆದ ಬೆಲೆ–ನೆಲೆ–ಸಾಮ್ಯ–ಆನಂದವಿದೆ ಎಂದು ಶಬ್ದ ಶಕ್ತಿಯನ್ನು ಅರಿತು ಭಾಷೆಯನ್ನು ಉಪಯೋಗಿಸುವ ಕೊರ್ಗಿಯವರಿಗೆ ಅಕ್ಷರ ಅಕ್ಷರವನ್ನೂ ಅಳೆದು ತೂಗಿನೋಡುವ ಪ್ರಾಯೋಗಿಕ ಅರ್ಥವಂತಿಕೆ ಪ್ರಯಾಸರಹಿತ ಸಿದ್ಧಿ. ಇವೆಲ್ಲದಕ್ಕೂ ಪೂರಕವಾಗಿ ನೃತ್ಯಾದಿ ಕಲೆಗಳ ಕುರಿತ ಪಾಂಡಿತ್ಯ, ಅಭಿಜಾತ ಕಲೆ–ಸಾಹಿತ್ಯದ ಓದು, ಅಲಂಕಾರ–ವ್ಯಾಕರಣಾದಿಗಳ ಬಳಕೆಯ ಸೊಗಸು, ಕಲೆ ಮತ್ತು ಸಂದರ್ಭದ ಔಚಿತ್ಯಪ್ರಜ್ಞೆ, ವ್ಯಕ್ತಿ, ವಸ್ತು ಯಾರೇ, ಯಾವುದೇ ಆಗಿರಲಿ ತಮಗನಿಸಿದ್ದನ್ನು ಸ್ಪಷ್ಟವಾಗಿ ತೋರಬಲ್ಲ ಜಾಣ್ಮೆ, ಔಚಿತ್ಯ, ಹೇಳಬಲ್ಲ ತಾಳ್ಮೆ, ಕೇಳ್ಮೆ ಅವರಿಗೆ ಸಿದ್ಧಿಸಿವೆ.

ಅವರು ವಿಮರ್ಶೆ ಬರೆಯಲು ಪ್ರಾರಂಭಿಸಿದ್ದು ಸಂಗೀತದ ಸಹಚರ್ಯದಲ್ಲಿ; ಸುಮಾರು 2002ರ ಸುಮಾರಿಗೆ ! ಆಗೆಲ್ಲಾ ವಿಜಯಕರ್ನಾಟಕದ ಬೆಂಗಳೂರು ಪುರವಣಿಗೆ ಬರೆಯುತ್ತಿದ್ದ ಅವರಿಗೆ ಅಯಾಚಿತವಾಗಿ ಪ್ರೇಕ್ಷಕತ್ವ ಒದಗಿಬಂದಿದ್ದು ಸುಂದರೀ ಸಂತಾನಂ ಅವರ ಗೀತಗೋವಿಂದದ ಅಭಿವ್ಯಕ್ತಿ 2003ರಲ್ಲಿ. ಕರ್ನಾಟಕದ ಭರತನಾಟ್ಯದ ಸೀಮೆಯಲ್ಲೇ ಅಷ್ಟರ ವರೆಗೂ ತೋರಿಬರದಿದ್ದ ಸೌಂದರ್ಯ ಸಾಕ್ಷೀಭೂತವಾದದ್ದೇ ತಡ, ಬರೆಯುವ ನಿರ್ಧಾರವನ್ನು ಪ್ರಕಟಪಡಿಸಿಯೇಬಿಟ್ಟರು. ಆದರೇನು, ನಾಟಕ, ಯಕ್ಷಗಾನದ ಸಹವಾಸ ಸಾಕಷ್ಟಿದ್ದರೂ ನೃತ್ಯವಿಮರ್ಶೆ ಬರೆಯಲು ನೃತ್ಯ ಆಳ-ಅಗಲಗಳ ರವಷ್ಟು ಪರಿಚಯವಿಲ್ಲವಲ್ಲ ಎಂಬ ಅಳುಕು. ಅಂತೂ ಶತಾವಧಾನಿ ಗಣೇಶರಿಂದ ಮೊಬೈಲ್‌ನಲ್ಲಿಯೇ ಪಾಠ ಹೇಳಿಸಿಕೊಂಡವರಿಗೆ ಸ್ಪಷ್ಟವಾದದ್ದು 'ವಿಮರ್ಶೆಗೆ ಬೇಕಾದದ್ದು ಅನುಭವ; ಪ್ರದರ್ಶನದ ಕುರಿತ ಅನಿಸಿಕೆಯೇ ಹೊರತು ತಾಂತ್ರಿಕ ಜಾಟಿಲ್ಯದ ಮಾಹಿತಿಯಲ್ಲ'. ಸರಿ; ಬರೆದು ಮುಗಿಸಿ ಪ್ರಕಟವಾದದ್ದೇ ತಡ ಕ್ಷಣಮಾತ್ರದಲ್ಲೇ ವಿದ್ವಾಂಸ/ಓದುಗವಲಯದ ಭರಪೂರ ಮೆಚ್ಚುಗೆಯೂ ದೊರಕಿದೆ. ಅಂದಿನಿಂದ ಮೊದಲ್ಗೊಂಡ ನೃತ್ಯ ವಿಮರ್ಶೆಯ ಸಾಂಗತ್ಯ ಅವ್ಯಾಹತವಾಗಿ ಮುಂದುವರೆದಿದೆ.

ಅವರ ಬರೆವಣಿಗೆಯಂತೆಯೇ ವ್ಯಕ್ತಿತ್ವ ಕೂಡ ಗುರುಸಮಾನವಾದದ್ದು. ಒಂದೇ ಬಾರಿಗೆ ವಿದ್ಯಾರ್ಥಿಯಾಗಿಯೂ, ಗುರುವಾಗಿಯೂ ಕೇಳುವ-ಹೇಳುವ ಗುಣ, ತಪ್ಪಿದ್ದರೆ ಅಷ್ಟೇ ನಿಷ್ಠುರವಾಗಿ ಹೇಳುವ ಸೈದ್ಧಾಂತಿಕ ಬಲದ ಸಾಧ್ಯತೆ; ತಮಗೆ ತಿಳಿದಿದ್ದನ್ನು ಯಾವುದೇ ಪ್ರತಿಫಲಗಳ ಆಸೆ-ಬೀಸುಗಳಿಲ್ಲದೆ ಮುಕ್ತವಾಗಿ ಹಂಚಿಕೊಳ್ಳುವ, ಮಾರ್ಗದರ್ಶಿಸುವ ಪ್ರೀತಿ, ಆಸ್ಥೆ; 'ಕೊಟ್ಟಷ್ಟೂ ತುಂಬಿಕೊಳ್ಳುತ್ತದೆ' ಎಂಬ ವಿವೇಚನೆಯೊಂದಿಗೆ ಚಿಗುರೊಡೆದ ಸಸಿಗಳನ್ನು ನೀರೆರೆದು ಪೋಷಿಸುವ ಹೃದಯ ವೈಶಾಲ್ಯತೆಯೇ ಅವರ ಅನನ್ಯತೆ. ಸದಾ ನಗುತ್ತಾ, ನಗಿಸುತ್ತಾ ತಮ್ಮ ಹಾಸ್ಯ/ತುಂಟತನದ ಸ್ವಭಾವಗಳಿಂದ, ಮಾತಿನ ಓಘ ದಿಂದ ಜನಮನವನ್ನು ಸೆಳೆಯುವ, ಜಾಣತನದ ಪ್ರಶ್ನೆಗಳಿಂದ ಕುತೂಹಲಿಗಳಾಗಿಸುವ ಕೊರ್ಗಿ ಶಂಕರನಾರಾಯಣ ಉಪಾಧ್ಯಾಯರು ಅವಧಾನಗಳ ಪೃಚ್ಛಕವಲಯದಲ್ಲಂತೂ ಬಹುಖ್ಯಾತರು.

ಇವೆಲ್ಲವುದಕ್ಕೆ ಸಮರ್ಥ ಸಾಕ್ಷಿಯೆಂಬಂತೆ ಡಾ. ಎಸ್.ಎಲ್. ಭೈರಪ್ಪ ಅವರ 'ಮಂದ್ರ' ಕಾದಂಬರಿಯ ನಾಟಕ ರೂಪಾಂತರ, ಮುದ್ರಾರಾಕ್ಷಸ ಹಾಗೂ ಮಧ್ಯಮ ವ್ಯಾಯೋಗದ ಕನ್ನಡ ಅನುವಾದ, ಬೆಳಗೆರೆ ಕೃಷ್ಣಶಾಸ್ತ್ರಿಗಳ 'ಯೇಗ್ದಾಗೆಲ್ಲಾ ಐತೆ' ಕೃತಿಯ ನಾಟಕ ರೂಪ/ನಿರ್ದೇಶನ/ಅಭಿನಯ, ಡಾ. ಪದ್ಮಾಸುಬ್ರಹ್ಮಣ್ಯಂ ಅವರ ಭರತನೃತ್ಯದ ಅಕ್ಷರೀಕರಣದ ವಿಶಿಷ್ಟವೆನಿಸುವ ಕೃತಿ 'ನೃತ್ಯರಸೋದಯ' – ಇವು ಕೊರ್ಗಿಯವರ ಕೆಲವು ಸಾಹಿತ್ಯ ಹಾಗೂ ರಂಗಭೂಮಿಯ ನಿರ್ಮಿತಿಗಳು. ಸ್ವತಃ ಡಾ.ಪದ್ಮಾ ಅವರು ನೃತ್ಯ ರಸೋದಯವನ್ನು ಕೊರ್ಗಿ ಅವರಿಂದಲೇ ಓದಿಸಿ ಕೇಳಿಕೊಂಡು ಪ್ರಶಂಸೆಗಳ ಮಹಾಪೂರವನ್ನೇ ಹರಿಸಿದ್ದಾರೆ.

ಶತಾವಧಾನಿ ಡಾ. ಆರ್. ಗಣೇಶ್ ಅವರ ನೂರಕ್ಕೂ ಮಿಕ್ಕಿ ಅವಧಾನಗಳಲ್ಲಿ ಭಾಗವಹಿಸಿರುವ ಉಪಾಧ್ಯಾಯರು ಕರ್ನಾಟಕ ನಾಟಕ ಅಕಾಡೆಮಿಯ ಸುವರ್ಣ ರಂಗಪ್ರಶಸ್ತಿ ಪುರಸ್ಕೃತರು. ಇವರ 'ಋತುಪರ್ಣ' ಕವನ ಸಂಕಲನಕ್ಕೆ ಕನ್ನಡ ಸಾಹಿತ್ಯ ಪರಿಷತ್ ಪ್ರಶಸ್ತಿ ಲಭಿಸಿದೆ. 'ಪುಣ್ಯಕೋಟಿ', 'ಧರ್ಮನಂದಿನಿ' 'ಮಹರ್ಷಿದಧೀಚಿ' ಮುಂತಾದ ರಂಗರೂಪಕಗಳನ್ನು ರಚಿಸಿರುವ ಶಂಕರನಾರಾಯಣ ಉಪಾಧ್ಯಾಯರು ಲೀಲಾಶುಕ ಕವಿಯ ಕೃಷ್ಣಕರ್ಣಾಮೃತವನ್ನೂ ಕನ್ನಡಕ್ಕೆ ಪದ್ಯವಾಗಿ ಅನುವಾದಿಸಿದ್ದಾರೆ. ಹಲವಾರು ಯಕ್ಷಗಾನ ಪ್ರಸಂಗಗಳನ್ನು ಕೂಡಾ ಬರೆದಿದ್ದಾರೆ. ನೂಪುರ ಭ್ರಮರಿಯ ಆಯಕಟ್ಟಿನ ಸಂದರ್ಭ ಗಳೂ ಕೂಡ ಅವರ ಈ ಘನವಂತಿಕೆಯ ಪ್ರಯೋಜನವನ್ನು ಸಾಕಷ್ಟು ಬಾರಿ ಪಡೆದಿದ್ದು ಋಣಿಯಾಗಿದೆ.



ವಿಮರ್ಶಕರಾಗಿ ಸಂಗೀತ ಹಾಗೂ ನೃತ್ಯ ಕಾರ್ಯಕ್ರಮಗಳ ವಸ್ತುನಿಷ್ಠ ಅವಲೋಕನವನ್ನು ಮಾಡುತ್ತಾ ಬಂದಿರುವ ಉಪಾಧ್ಯಾಯರ ಬರೆಹಗಳು ಹಲವಾರು ಪತ್ರಿಕೆಗಳ ಅಂಕಣ ಬರೆಹಗಳಾಗಿ ಮೂಡಿಬಂದಿದ್ದಾವೆ. ಹಾಗೆಂದು ಉಪಾಧ್ಯಾಯರು ಹಮ್ಮು-ಬಿಮ್ಮು-ಓಲೈಕೆ- ಸ್ನೇಹಸಂಪರ್ಕದ ರಾಜಿಗೆಲ್ಲ ಬರೆಯುವವರಲ್ಲ. ಕಲಾಪ್ರದರ್ಶನವು ಪ್ರಾಮಾಣಿಕವಲ್ಲವಾದರೆ ಅದರಲ್ಲಿ ಎಳ್ಳಷ್ಟೂ ಕರುಣೆ ತೋರಲಾರರು. ಪುಟಮಿತಿಯಲ್ಲಿರಬೇಕೆಂಬ ಆಗ್ರಹಗಳಿಗೆ ಬರೆಯಲಾರರು; ನಿರ್ದಾಕ್ಷಿಣ್ಯವಾಗಿ ಕುಟುಕಲಾರರು. ಎಷ್ಟೇ ದೊಡ್ಡವರಿರಲಿ; ಸಣ್ಣವರಿರಲಿ, ಆ ಹೊತ್ತಿಗೆ ಕಲಾವಿದ ಒದಗಿಸುವ ಪ್ರಾಮಾಣಿಕತೆಯೆಂಬ ಪ್ರಮಾಣ, ಪ್ರೇಕ್ಷಕಪ್ರಭುವಿನ ಆತ್ಮತೃಪ್ತಿಯೇ ಅವರ ಮಾನದಂಡ. ಹಾಗೆಂದು ಅವರಿಗೆ ನೋಡಿದ್ದನ್ನೆಲ್ಲ ಬರೆಯಬೇಕೆಂಬ ಹಟವಿಲ್ಲ; ತೋಚಿದ್ದನ್ನೆಲ್ಲಾ ಬರೆಯುವುದೂ ಇಲ್ಲ; ಆದರೆ ಬರೆಯಲು ಕಾಡಿದ್ದನ್ನು ಬರೆಯದೇ ಬಿಡುವುದೂ ಇಲ್ಲ; ಮತ್ತು ಇಂಥದ್ದೇ ಪತ್ರಿಕೆ-ನಿಯತಕಾಲಿಕೆಗಳಾಗಬೇಕೆಂಬ ಬಿನ್ನಾಣವಾಗಲೀ, ಸ್ವಪ್ರಯೋಜನದೃಷ್ಟಿಯಾಗಲೀ, ಕಾಂಚಾಣಕಾಮವಾಗಲೀ ಇಲ್ಲ. ಕೆಲವನ್ನು ಹೃದಯಕ್ಕಿಳಿಸಿದರೆ; ಮತ್ತೂ ಕೆಲವನ್ನು ಬುದ್ಧಿಯ ಕೆಲಸಕ್ಕೆ



ಕೊಡಿಸುತ್ತಾರೆ. ಹಲವು ಅನುಭವಕ್ಕಾದರೆ ಕೆಲವಷ್ಟೇ ಅಕ್ಷರದ ಜಾದೂಗಾರಿಕೆಯಲ್ಲಿ ಅರಳುತ್ತದೆ.

ತಮಗಿಷ್ಟವಾದ ಕಾರ್ಯಕ್ರಮ ಯಾವುದೇ ಆಯಾಮದ್ದಿರಲಿ, ಯಾರದ್ದೇ ಆಗಿರಲಿ, ಕಣ್ಣಳತೆಯ ಎಷ್ಟೇ ದೂರದಲ್ಲಿರಲಿ, ಪ್ರತಿಫಲಾಪೇಕ್ಷೆ–ಕರೆಯೋಲೆಯ ಸೋಂಕಿಲ್ಲದೆ ಕುಟುಂಬ ಸಮೇತವಾಗಿ ತೆರಳುವ, ಕಲೆಯ ಪರಮೋದ್ದೇಶದ ಆನಂದವನ್ನೇ ಗುರಿಯಾಗಿಸುವ ಸಹೃದಯಿ, ಅಧ್ಯಾತ್ಮನಿಷ್ಠ. ಕಲಾವಿದರ ಸಾಧ್ಯತೆ–ತೊಂದರೆಗಳ ಬಗ್ಗೆ ಸಾಕಷ್ಟು ಅರಿವಿದ್ದು ವಸ್ತುನಿಷ್ಠತೆಗೆ ಎಲ್ಲೂ ಲಗಾಮು ಹಿಡಿಯದೆ ಹೇಳಬೇಕಾದದ್ದನ್ನು ಚುಟುಕಾಗಿ ತಿಳಿಸಿಹೇಳುವ ವಿನಯಶೀಲ. ಅದೇ ರಸಗವಳದಲ್ಲಿ ಮಿಂದೆದ್ದರೆ ಕಲಾವಿದನೆಡೆಗೆ ಧನ್ಯತೆ–ಸಾರ್ಥಕತೆಯ ನೋಟದೊಂದಿಗೆ ಭೋರ್ಗರೆವ ಭಾಷೆಯಲ್ಲಿ ಪ್ರಶಂಸೆಗಳ ಗರಿಯನ್ನು ಅಕ್ಷರಶಃ ಕಲಾವಿದನ ತುರುಬಿಗಿಡುತ್ತಾರೆ. ಅದು ಕೇವಲ ಬಾಯ್ಮಾತಿಗಲ್ಲ ಎಂಬುದು ಇಲ್ಲಿ ಅವರ ಆಸ್ವಾದನೆಯ ಗುಣಮಟ್ಟಕ್ಕೆ ಸಾಕ್ಷಿ. ಒಂದರ್ಥದಲ್ಲಿ 'ಕೊರ್ಗಿಯವರಿಗೆ ಕೊರ್ಗಿಯವರೇ ಸಾಟಿ' !

ಬರೆಯುವುದು ಬೆರಳೆಣಿಕೆಯಾದರೂ ಬಹಳ ವರ್ಷ ಬೆಲೆಬಾಳುವಂತದ್ದಾಗಿರಬೇಕು ಎಂಬುದು ಉಪಾಧ್ಯಾಯರ ಅಂತರಂಗ. ಅದಕ್ಕೆ ಮೇರುಸಾಕ್ಷಿಯೆಂಬಂತಿದೆ 'ನೃತ್ಯ ರಸೋದಯ'. ನರ್ತನ ವೈಭವವನ್ನು ಕಣ್ಣಾರೆ ತುಂಬಿಕೊಂಡ ಒಬ್ಬ ಕವಿ, ವಿಮರ್ಶಕ ಬರೆಯಬಹುದಾದ ಎಲ್ಲ ಸಾಧ್ಯತೆಗಳನ್ನು ಮೀರಿ ಬೆಳೆದ ಈ ಕೃತಿ; ಭಾರತೀಯ ನರ್ತನಸಂಪ್ರದಾಯದಲ್ಲಿ ಕವಿತ್ವ, ಪ್ರಬಂಧ, ವಿಮರ್ಶೆ, ಲೇಖನವೆಲ್ಲವನ್ನೂ ಗರ್ಭೀಕರಿಸಿಕೊಂಡ ವಿನೂತನವೆನಿಸುವ ಸರಳ, ಸುಂದರ ನರ್ತನ ವ್ಯಾಖ್ಯಾನ.

ಕಳೆದ 2 ವರುಷಗಳಿಂದಲೂ ವರ್ಷದ ಉತ್ತಮ ವಿಮರ್ಶಕ ಪುರಸ್ಕಾರದ ನಾಮನಿರ್ದೇಶನದ ಪಟ್ಟಿಯಲ್ಲಿದ್ದವರಲ್ಲಿ ಕೊರ್ಗಿಯವರು ಒಬ್ಬರಾದರೂ ಪುರಸ್ಕಾರ ಸ್ವೀಕರಿಸುವ ಘಳಿಗೆ ಈ ವರ್ಷ ಒದಗಿಬಂದಿದೆ. ಪಟ್ಟಿಯಲ್ಲಿ ಸುಮಾರು 30 ಮಂದಿ ಲೇಖಕರ ಭರ್ಜರಿ ಸ್ಪರ್ಧೆಯಿದ್ದರೂ ; 2012ರ ನೂಪುರ ಭ್ರಮರಿ ಪತ್ರಿಕೆಯಲ್ಲಿ ಬರೆದ 3 ವಿಮರ್ಶೆಗಳನ್ನು ಗಮನಿಸಿ ಪ್ರಶಸ್ತಿ ಸಮಿತಿ ಉಪಾಧ್ಯಾಯರನ್ನು ಆಯ್ಕೆ ಮಾಡಿರುವುದು ಪತ್ರಿಕೆ, ಪ್ರತಿಷ್ಠಾನದ ಪಾಲಿಗೆ ಹೆಮ್ಮೆಪಡುವಂತಹ ವಿಷಯ. ಈ ಹಿನ್ನೆಲೆಯಲ್ಲಿ ಅವರೊಂದಿಗೆ ಬರೆವಣಿಗೆಯ ಮೂಲಕವೇ ಮಾತನಾಡಿದ ತುಣುಕುಗಳು ಅವರದ್ದೇ ಭಾಷೆಯ ಒಟ್ಟಂದದಲ್ಲಿ ಚಿಕ್ಕ, ಚೊಕ್ಕದಾಗಿ...ನಿಮಗಾಗಿ. ಅಂತೆಯೇ ಅವರದ್ದೊಂದು ಚಿಕ್ಕ ವಿಮರ್ಶೆಯೂ ನಿಮ್ಮ ಅವಗಾಹನೆಗೆ ಬೇಡವೇ? ಆದ್ದರಿಂದಲೇ ಉಪಾಧ್ಯಾಯರ ಭಾಷೆ, ಶೈಲಿ, ಬೆಳವಣಿಗೆಗಳ ಸಾದೃಶ್ಯರೂಪದ ಪರಿಚಯವಾಗಿ ಅವರು ಸುಂದರೀ ಸಂತಾನಂ ಕುರಿತಾಗಿ ಬರೆದ ಪ್ರಥಮ ವಿಮರ್ಶೆಯ ಮೂಲಕವಾಗಿ ಇಲ್ಲಿ ನೀಡುತ್ತಿದ್ದೇವೆ.

ಈ ಮೂಲಕ ಹೊಸ ಪರಂಪರೆಯನ್ನು ನೃತ್ಯಬರೆವಣಿಗೆಯ ಕ್ಷೇತ್ರದಲ್ಲಿ ಹುಟ್ಟುಹಾಕುತ್ತಿದ್ದೇವೆ.ಬರೆದದ್ದು ಮರೆಯಾಗದೆ ಲೇಖನಗರ್ಭದಿಂದ ಮತ್ತೊಮ್ಮೆ ಚಿಗಿದು ನಿಲ್ಲುವ ನಿತ್ಯ ಚೈತನ್ಯ ಸಾರ್ವಕಾಲಿಕ ಪ್ರಮೇಯಕ್ಕೆ ಇದು ಸಾಕ್ಷಿ. ಒಂದರ್ಥದಲ್ಲಿ ಇದು ಸುಂದರೀ ಸಂತಾನಂ ಅವರಿಗೆ ಅವರದ್ದೇ ಹುಟ್ಟುಹಬ್ಬದ ದಿನದಂದು (15 ಫೆಬ್ರವರಿ) ಅರ್ಪಿಸುವ ಶ್ರದ್ಧಾಂಜಲಿಯೂ ಹೌದು...! ನೃತ್ಯ ಸಂಶೋಧನ ಸಮ್ಮೇಳನದಲ್ಲಿ ಈ ಪುರಸ್ಕಾರವನ್ನು ಕೊಡುತ್ತಿರುವ, ಪ್ರಕಟಿಸುತ್ತಿರುವ ನಮಗೆ ದಕ್ಕಿರುವ ಭಾಗ್ಯವೂ ಹೌದು..!

ಬರೆಯಲು ಹೊರಡುವ ಪ್ರಾರಂಭಿಕ ದಿನದಿಂದ ಇಂದಿನ ವರೆಗಿನ ವಿಮರ್ಶೆಯ ಪಯಣದಲ್ಲಿ ಶಂಕರನಾರಾಯಣ ಉಪಾಧ್ಯಾಯರು ಸಾಕಷ್ಟು ಪಳಗಿದ್ದಾರೆ. ಆದರೆ ಈ ವಿಮರ್ಶೆ 'ಅಭಿಜಾತವೆನಿಸುವ ನೃತ್ಯವನ್ನು ನೋಡಿದ ಸಹೃದಯನ ಮೊದಲ ಅಭಿವ್ಯಕ್ತಿಯ ಉತ್ಕೃಷ್ಟ ಕೃತಿ. ನೃತ್ಯದ ತಾಂತ್ರಿಕ ವಿವರಗಳ ಕುರಿತು ಅರಿವಿಲ್ಲದಿರುವುದು ವಿಮರ್ಶೆಯ ಕೊರತೆಯೇ ಅಲ್ಲ. ಇದನ್ನು ನೋಡಿದರೆ ಖಂಡಿತವಾಗಿಯೂ ಮೊದಲನೆಯ ವಿಮರ್ಶೆ ಎಂಬ ಮಾತು ನಂಬಲಿಕ್ಕಾಗುವುದಿಲ್ಲ' ಎನ್ನುವ ಹೆಚ್ಚುಗಾರಿಕೆಯ ಪ್ರಶಂಸೆಯನ್ನೇ ವಿದ್ವಜ್ಜನರಿಂದ ಪಡೆದಿದ್ದು ; ಉಪಾಧ್ಯಾಯರ ಪ್ರತಿಭೆ, ವ್ಯುತ್ಪತ್ತಿಯ ಅರಿವಾಗುತ್ತದೆ. ವಿಮರ್ಶೆ ಪಾರಿಭಾಷಿಕ ಪದಗಳಲ್ಲಿ ಮುಳುಗದೆ ಅನುಭವನಿಷ್ಠವಾಗಬೇಕು; ಓದುಗನಿಗೆ ನೃತ್ಯಪ್ರದರ್ಶನ ಕಣ್ಣಿಗೆ ಕಟ್ಟುವಂತಿರಬೇಕು; ಆಗಲೇ ರಸನಿಷ್ಠವಾದ ಬರೆವಣಿಗೆ, ಪ್ರದರ್ಶನಗಳು ಹುಟ್ಟು ಪಡೆಯುತ್ತವೆ; ವಿಮರ್ಶಕಾರನಿಗೆ ಬೇಕಿರುವುದು ಕಲೆಯೆಡೆಗಿನ ಸಹೃದಯತೆಯೇ ವಿನಾ ತಾಂತ್ರಿಕ ಅಂಶಗಳ ಪರಿಚಯದ ಬಾಹುಳ್ಯವಲ್ಲ ಎನ್ನಲು ಇದು ಒಳ್ಳೆಯ ನಿದರ್ಶನ.

**– ಸಂಪಾದಕರು.**

1. **'ವಿಮರ್ಶಾ ವಾಙ್ಮಯಿ' ಪುರಸ್ಕಾರಕ್ಕಾಗಿ ಅಭಿನಂದನೆಗಳು. ಅಂದಹಾಗೆ ಇಂದಿನ ನೃತ್ಯ ವಿಮರ್ಶೆಯ ಸ್ಥಿತಿ–ಗತಿ ಸಾಗುವ ಕ್ರಮವನ್ನು ಹೇಗೆ ಅಭಿಪ್ರಾಯಿಸುತ್ತೀರಿ ?**

ಇಂದಿನ ದಿನಮಾನದಲ್ಲಿ ನೃತ್ಯ ಮಾತ್ರವಲ್ಲ, ಅಭಿಜಾತವಾದ ಕಲಾ–ಸಾಹಿತ್ಯದ ಕುರಿತು ವಿಮರ್ಶೆಯ ಮಾತು ಹಾಗಿರಲಿ; ಚಿಂತನ/ವಿಚಾರಗಳ ರೂಢಿಯೇ ಕಣ್ಮರೆಯಾಗುತ್ತಿದೆ. ಮನೋರಂಜನೆಯ ಮಾಧ್ಯಮ ಆಭಿಜಾತ್ಯದಿಂದ ಲಾಘವದತ್ತ ಹೊರಳಿದ್ದರ ಪರಿಣಾಮವೇ ಇದು ಎಂಬುದು ಸ್ಪಷ್ಟ. 'ವಿಮರ್ಶಾ' ಎನ್ನುವ ಪ್ರಕಾರ ಅವಲೋಕನ–ಅನಿಸಿಕೆ–ವರದಿಯ ರೂಪ ಪಡೆದುಕೊಂಡಿದೆ. ಪತ್ರಿಕೆಯಂತಹ ಮಾಧ್ಯಮವು ನೃತ್ಯ ಸಂಗೀತಗಳ ವಿಭಾಗಕ್ಕೇ ಮೀಸಲಿಡುವ ಸ್ಥಳವೂ ಜಾಹೀರಾತು–ಟಿಆರ್‌ಪಿಗಳ ಭೂತಚ್ಛಾಯೆಯಲ್ಲಿ ಮಸುಳಿಹೋಗುತ್ತಿದೆ. ಇಂತಿಷ್ಟು ವಾಕ್ಯಗಳಲ್ಲಿ/ಶಬ್ದಗಳಲ್ಲಿ ಬರೆಯಬೇಕಾದ ನಿರ್ಬಂಧ ವಿಮರ್ಶೆ ಆಗುವುದಾದರೂ ಹೇಗೆ? ಹಾಗೂ ಹೀಗೂ ಬರೆಯುವವರು ಅಭಿಜಾತ ಕಲಾಕ್ಷೇತ್ರವನ್ನು ಗಂಭೀರವಾಗಿ ಗಣಿಸದೆ, ತಮ್ಮ ಬರೆಹ ಕಲಾವಿದನಿಗೆ ಮಾಡುವ ಅನುಗ್ರಹ ಎಂಬ ಆಗ್ರಹ ಹೊಂದಿರುತ್ತಾರೆ. ಹಾಗಾಗಿ ವಿಮರ್ಶೆ 'ಗತಿ'ಶೀಲವಾಗದೆ 'ಸ್ಥಿತಿ'ಶೀಲವಾಗಿದೆ ಎನ್ನದೆ ಗತ್ಯಂತರವಿಲ್ಲ.

2. **ಹಾಗಾದರೆ ವಿಮರ್ಶಕನಿಗೆ ಮತ್ತು ಒಳ್ಳೆಯ ನೃತ್ಯ ವಿಮರ್ಶೆಗೆ ಇರಬೇಕಾದ ಗುಣ–ಲಕ್ಷಣಗಳೇನು?**

ವಿಮರ್ಶಕನಿಗೆ ಮೊತ್ತಮೊದಲು ಇರಬೇಕಾದದ್ದು ಸಹೃದಯತೆ. ಸಹೃದಯಪ್ರೇಕ್ಷಕತ್ವವನ್ನು ಆದ್ಯಂತ ಆವಾಹಿಸಿಕೊಳ್ಳಬೇಕು. ಹಾಗಿದ್ದರೆ ಮಾತ್ರ ಒಂದು ಪ್ರಯೋಗದ/ಪ್ರದರ್ಶನದ ಪರಿಶ್ರಮ ಅರಿವಾದೀತು. ಸುಮ್ಮನೆ ಶಬ್ದಗಳಲ್ಲಿ 'ರಸ', 'ಭಾವ' ಎನ್ನದೆ, ಅದನ್ನು ಬೇರುಮಟ್ಟದಿಂದ ಅನುಭವಿಸುವ ಕಲಾಜೀವಿಕೆ ಇರಬೇಕು. ಇದರಿಂದ ಪೂರ್ವಾಗ್ರಹವೂ ದೂರಾಗುತ್ತದೆ; ತಾನು ನೋಡುತ್ತಿರುವ ಪ್ರದರ್ಶನದ, ಕಲಾಪರಿವೇಷದ ಪ್ರಾಥಮಿಕವಾದ ಲಕ್ಷಣಪರಿಜ್ಞಾನವಾದರೂ ಇರಲೇಬೇಕು. ಕೇವಲ ಶಾಸ್ತ್ರಪಾಂಡಿತ್ಯವಲ್ಲದೆ ರಂಗಸಾಧ್ಯತೆಯ ಬಗೆಗೂ ಒಳನೋಟವಿದ್ದಷ್ಟೂ ಅಭಿಪ್ರಾಯ ಮಾಗುತ್ತದೆ.

3. **ನಿಮ್ಮ ವಿಮರ್ಶೆಗಳ ವಿಶೇಷವನ್ನು ಹೇಗೆ ಕಂಡುಕೊಂಡಿದ್ದೀರಿ?**

ಯಾವುದೇ ಕಲಾವಿಮರ್ಶೆಯ ವಸ್ತು, ಆಶಯ ಸವಕಲೆನಿಸುವ ಪರಿಭಾಷೆಗಳ ಕೋಟೆಯಲ್ಲಿ ಕಳೆದುಹೋಗಬಾರದು; ನಮ್ಮನ್ನು ನಾವೇ ಮೋಸಮಾಡಿಕೊಳ್ಳಬಾರದು. ಅಷ್ಟಕ್ಕೂ ಓದುಗನಿಗೆ ವಿಮರ್ಶೆಯ ಮೂಲಕ ಬೇಕಾಗಿರುವುದು ಅಕ್ಷರಗಳಲ್ಲಿ ಕಲಾಭೂಮಿಕೆಯ ಮರುಪ್ರಸ್ತುತಿಯೇ ವಿನಾ ಪಾರಿಭಾಷಿಕ ಪದಗಳ ವಿವರಣೆಯಲ್ಲ. ನನಗಂತೂ ಶೀರ್ಷಿಕೆಯಿಂದ ಮೊದಲ್ಗೊಂಡು ಲೇಖನದುದ್ದಕ್ಕೂ ಶಬ್ದಶಕ್ತಿಯ ಗರಿಷ್ಠಪ್ರಯೋಗವಾಗಬೇಕೆಂಬ ಹಟವಿದೆ. ಹೊಸ–ಹೊಸತನ್ನು ಟಂಕಿಸಬೇಕೆಂಬ ಹಂಬಲವಿದೆ. ಪ್ರತೀ ಬರೆವಣಿಗೆಗಳಲ್ಲೂ ಚಲಾವಣೆಯಲ್ಲಿಲ್ಲದ ಅಥವಾ ಪ್ರಚಲಿತಕ್ಕೆ ಬರದ ಶಬ್ದಗಳನ್ನು ಬಳಸುವ ಇಲ್ಲವೇ ಸೃಷ್ಟಿಸುವ ಜಾಯಮಾನವಿದೆ. ಸಂಗೀತ–ನೃತ್ಯಗಳ ರುಚಿಯೊಂದಿಗೆ ಸಾಹಿತ್ಯದ ರುಚಿಯನ್ನು ಓದುಗನಿಗೆ ರೂಢಿಸಬೇಕು ಎನ್ನುವುದು ಇಲ್ಲಿನ ಆಶಯ. ವಿಮರ್ಶೆಯಿಂದಾಗಿ ಓದುವವರಲ್ಲಿ ಪದವ್ಯುತ್ಪತ್ತಿ, ವಾಕ್ಯಸರಣಿ, ಭಾಷೆಯ ಸೌಷ್ಠವ–ಗಾಂಭೀರ್ಯದ ಪ್ರಜ್ಞೆ, ಆಸಕ್ತಿ ಮೂಡಿದರೆ ಅದು ವಿಮರ್ಶೆಯ, ವಿಮರ್ಶಕನ ಧನ್ಯತೆ.

4. **ಕಲಾವಿಮರ್ಶೆಯ ದಾರಿ ಎತ್ತ ಹೊರಳಬೇಕು? ಎಂತಹ ವಿಮರ್ಶೆ ಬರಬೇಕೆನಿಸುತ್ತದೆ?**

ವಿಮರ್ಶೆ ಕಲಾಪೋಷಕವಾಗಿದ್ದಷ್ಟೂ ಕಲೆಯ ಆಯಸ್ಸು ಹೆಚ್ಚಾಗುತ್ತದೆ. ವಿಮರ್ಶೆ ಇರುವುದು ವಿಮರ್ಶಕನ ವೈದುಷ್ಯದ ಅನಾವರಣಕ್ಕಲ್ಲ ಎಂಬ ವಿನಯ ಕಾಣುವಂತೆ ಅಭಿಪ್ರಾಯಮಂಡನೆ ಇದ್ದರೆ, ಅದೇ ಅಹೋಭಾಗ್ಯ. ಇಷ್ಟಕ್ಕೂ ವಿಮರ್ಶೆ ಎಂಬುದು ಒಬ್ಬ ವ್ಯಕ್ತಿಯ ಪರಿಶೀಲನ. ಅದನ್ನು ಸಾಧ್ಯವಾದಷ್ಟು ಬಹ್ವೀಕರಿಸುವ ಔದಾರ್ಯ ಕಲಾಶಾಸ್ತ್ರ ಪರಿಮಿತಿಯಲ್ಲಿ ಮೂಡುವಂತಿರಬೇಕು.

5. **ಕಲಾವಿಮರ್ಶೆಯ ಕ್ಷೇತ್ರ ಎಷ್ಟು ಆರೋಗ್ಯಕರವಾಗಿದೆ? ವಿಮರ್ಶಕನಿಗೆ ಎದುರಾಗುವ ತೊಡಕು–ತೊಂದರೆಗಳೇನು?**

ವಿಮರ್ಶಕನನ್ನು ತಮಗೆ ಬೇಕಾದಂತೆ ಬರೆಸುವ ಪ್ರಾಯೋಜಕ/ಕಲಾವಿದರ ಆತ್ಮಸ್ಥೈರ್ಯದ ಶೈಥಿಲ್ಯ ನಿಜವಾದ ವಿಮರ್ಶೆ ಮೂಡದಂತೆ ಪ್ರಬಲವಾದ ಲಾಬಿಯನ್ನೇ ಮಾಡುತ್ತಿದೆ. ತುಷ್ಟೀಕರಣ ಮತ್ತು ಪುಷ್ಟೀಕರಣದ ವ್ಯತ್ಯಾಸವನ್ನು ಪ್ರಯೋಗಕಾರರು ಸವಾಲಾಗಿ ಒಪ್ಪಿಕೊಳ್ಳದಿರುವುದೇ ತೊಂದರೆ.

6. **ವಿಮರ್ಶೆ ಮತ್ತು ವಿಮರ್ಶಕರ ಬಗೆಗೆ ಇಂದಿನ ಕಲಾಸಮಾಜ ಮತ್ತು ಮಾಧ್ಯಮದ ದೃಷ್ಟಿ ಹೇಗಿದೆ? ಕಾರಣ? ಯಾವುದು ನಿಜವಾದ ವಿಮರ್ಶಕನ ಸವಾಲೆನಿಸಬಲ್ಲದು?**

ವಿಮರ್ಶಾಕ್ಷೇತ್ರಕ್ಕೆ ಇಂದಿನ ಮಾಧ್ಯಮದಲ್ಲಿ ತಾವಿಲ್ಲ. ಕಣ್ಣಿನ ತಂಪಿನ ಕಡೆ ಮಾಧ್ಯಮ ಕಣ್ಣುಹಾಯಿಸುತ್ತದೆಯೇ ಹೊರತು ಬುದ್ಧಿಯ ಬೆಚ್ಚಗಿನ ಕಡೆಗೆ ಅಲ್ಲ. ಇಷ್ಟಕ್ಕೂ ವಿಮರ್ಶೆ/ಅಭಿಪ್ರಾಯ/ಅವಲೋಕನ ತಮ್ಮ ಪರವಾಗಿ ಬಂದರಷ್ಟೇ ನಾಳೆ ನಮ್ಮ 'ಮಾರ್ಕೆಟ್' ಕುದುರುತ್ತದೆ ಎಂಬ ಪ್ರಚಾರಭ್ರಾಂತಿ ಹೆಚ್ಚಿನ ಕಲಾವಿದರನ್ನು ವಿಮರ್ಶೆಯ ಕುರಿತು ಅಸಹಿಷ್ಣುಗಳನ್ನಾಗಿ ಮಾಡಿದೆ. ಇದಕ್ಕೆ ತಮ್ಮ ಕಾಯಕದ ಪಂಚಾಂಗ ಪೆಡಸಾಗಿರುವುದೂ ಕಾರಣ ಇದ್ದೀತು. ಕಲಾವಿದನ ಸತ್ತ್ವ ಸಮೃದ್ಧವಿದ್ದಷ್ಟೂ ಆತ ವಿಮರ್ಶೆಯ ಬೆಂಗದಿರಿಗೆ ಮೈಯೊಡ್ಡಬಲ್ಲ. ಅಂತಹ ಸತ್ತ್ವಸಂಪನ್ನರ ಸಂಖ್ಯೆ ಹೆಚ್ಚಿದಷ್ಟೂ ವಿಮರ್ಶಕನ ಸವಾಲೂ ಹೆಚ್ಚುತ್ತದೆ.

7. **ಭವಿಷ್ಯದ ವಿಮರ್ಶಕರಿಗೆ ನಿಮ್ಮ ಹಿತನುಡಿಗಳನ್ನು ತಿಳಿಸಿ.**

ತಾನೊಂದು ವಿಮರ್ಶನ ಮಾಡುತ್ತೇನೆಂದು ತೊಡಗುವವ ಆಯಾ ಅಭಿಜಾತಕಲಾಂಗಣದ ಪ್ರಾಥಮಿಕ ಪರಿಭಾಷಾ ಲೋಕದ ಪರಿಚಯ ಹೊಂದಿರಬೇಕು. ರಂಗದ ಮೇಲೆ ಹರಿಯುವ ನಾಟ್ಯಕ್ರಿಯೆ ತನ್ನ ಹೃದಯರಂಗದಲ್ಲೂ ಹರಿವ ಹಠವನ್ನು ಅನುಭವಿಸುವ ಸಹೃದಯತೆ ಹೊಂದಿರಬೇಕು. ಕಲಾವಿದನ ಪರಿಚಯದ ಆಧಾರಶ್ರುತಿಯಲ್ಲಿ ವಿಮರ್ಶೆ ಮೈಯೊಡೆಯದಂತೆ ಅಂತರವನ್ನು ಕಾಯ್ದುಕೊಳ್ಳಬೇಕು. ತನ್ನ ನೋಟ ಕಲೆಯ ಉತ್ತರೋತ್ತರ ಪ್ರವರ್ಧಮಾನತೆಗೆ ಉತ್ತೇಜಕವಾಗುವಂತೆ ಭಾಷೆಯನ್ನು ಬಳಸುವ ಸೌಹಾರ್ದ ದೃಷ್ಟಿ ರೂಪಿಸಿಕೊಳ್ಳಬೇಕು. ತನಗಿಂತ/ಕಲಾವಿದನಿಗಿಂತ ಕಲೆಯ ಗಾತ್ರ, ಪಾತ್ರ ಅಮೇಯ ಎನ್ನುವ ಎಚ್ಚರ ಇರಬೇಕು.

## ಮಧುರಾನುಭೂತಿಯ ಅನನ್ಯ ಭರತನೃತ್ಯ–ಗೀತಗೋವಿಂದ

❑ **ಕೊರ್ಗಿ ಶಂಕರನಾರಾಯಣ ಉಪಾಧ್ಯಾಯ**

**(ಕೃಪೆ : ವಿಜಯ ಕರ್ನಾಟಕ, 15–03–2003)**



ಜಯದೇವಕವಿಯ 'ಗೀತಗೋವಿಂದ' ನೃತ್ಯಕ್ಷೇತ್ರೀಯರಿಗೆ ಅನಿವಾರ್ಯ ಎಂಬಷ್ಟು ಒದಗಿಬರುವ ಶೃಂಗಾರಕಾವ್ಯ. ಅಷ್ಟನಾಯಿಕೆಯರ ಲಕ್ಷಣನಿರೂಪಣೆಗೆ ಅತ್ಯಂತ ಹತ್ತಿರದ ಕೈಯಳತೆಯಲ್ಲಿ ಸಿಗುವ ಅಷ್ಟಪದಿಯ ಸರಸಸಾಹಿತ್ಯ ನರ್ತಕರಿಗೆ ಪರಮ ವಂದ್ಯವೆನಿಸುವಷ್ಟು ಪರಿಚಿತ. ಆದರೆ ರಾಧಾಕೃಷ್ಣರ ಅವ್ಯಾಜನಿರ್ಮಲ ಪ್ರೇಮಾಂತಃ ಕರಣವನ್ನು ಆದ್ಯಂತವಾಗಿ ಕಥಾಸೂತ್ರದಲ್ಲಿ ಹೆಣೆದು ಆ ಪಾತ್ರಗಳ ಔನ್ನತ್ಯವನ್ನು ನೃತ್ಯಪರಿಭಾಷೆಯಲ್ಲಿ ಪ್ರಸ್ತುತಪಡಿಸಿ, ಪ್ರೇಕ್ಷಕರ ಮನಸ್ಸಲ್ಲೂ ಪ್ರಸನ್ನವಾಗಿ ಪ್ರತಿಷ್ಠಾಪಿಸಿ, ಗೀತಗೋವಿಂದಕ್ಕೆ ರಂಗ ಸಮಗ್ರತೆಯನ್ನು ತಂದುಕೊಟ್ಟವರು ಶ್ರೀಮತೀ ಸುಂದರೀ ಸಂತಾನಂ. ಅವರು ಇತ್ತೀಚೆಗೆ ಬಸವನಗುಡಿಯ 'ಅಭಿನವ' ಸಭಾಂಗಣದಲ್ಲಿ 'ಗೀತ ಗೋವಿಂದಂ' ಭರತನೃತ್ಯದ ಸೋಲೋ ಕಾರ್ಯಕ್ರಮ ನೀಡಿ ನೃತ್ಯಪಾತ್ಯಕ್ಕೆ ಯಶಸ್ಸಿನ ಇನ್ನೊಂದು ಅಧ್ಯಾಯವನ್ನು ಸೇರಿಸಿದರು.

ಕೃಷ್ಣ–ರಾಧೆ–ಸಖಿ ಪಾತ್ರಗಳನ್ನು ಆಂಗಿಕಸಂಜ್ಞೆಗಳ ಮೂಲಕ ನಿರ್ದೇಶಿಸುತ್ತಾ 'ಲಲಿತಲವಂಗ' ದಿಂದ ಮೊದಲ್ಗೊಂಡು 'ಕುರುಯದುನಂದನ'ದ ತನಕ ರಾಧಾ–ಕೃಷ್ಣರ ಪ್ರೇಮದ ಉತ್ಕಟತೆಯನ್ನು ಹೃದಯಸಂಸ್ಕಾರದ ಪರಿಪಾಕ ದಲ್ಲಿ ಸಾತ್ತ್ವಿಕ–ಆಂಗಿಕಗಳ ಪರಿಪೂರ್ಣ ಸಮನ್ವಯದಲ್ಲಿ ಕಲಾವಿದೆ ನಿರೂಪಿಸಿದ ರೀತಿ ಭರತನೃತ್ಯದ ಪರಿಷ್ಕೃತ ವ್ಯಾಖ್ಯೆಯಂತಿತ್ತು. ಮಿಂಚಿನ ವೇಗದಲ್ಲಿ ಪಾತ್ರದಿಂದ ಪಾತ್ರಕ್ಕೆ ಭಾವಾಂತರಗೊಳ್ಳುತ್ತಿದ್ದರೂ, ವಿಷಾದವನ್ನೋ ಹಸಾದವನ್ನೋ ಗೆರೆ ಬಿಡಿಸಿ ತೋರಿದಷ್ಟು ಸ್ಪಷ್ಟವಾಗಿ ಸ್ಫುಟವಾಗಿ ಅಭಿವ್ಯಕ್ತಿಸುತ್ತಿದ್ದುದು ಸಾಧನೆಯ ಕಠಿನತೆಯ ಕನ್ನಡಿಯಾಗಿತ್ತು.

ಪ್ರೇಮ–ವಿರಹಗಳ ಏಕತಾನದಲ್ಲಿ ಲಗಾಟಿ ಹೊಡೆಯಬಹುದಾದ ಅಪಾಯದ ಕಥಾಕಥನಕ್ಕೆ ಹೃದ್ಯವೆನಿಸುವಂತೆ ಸನ್ನಿವೇಶಗಳನ್ನು ಪರಿಕಲ್ಪಿಸಿದ್ದು ಕಲಾವಿದೆಯ ರಸಜ್ಞತೆಗೆ ದ್ಯೋತಕ. ರಾಧಾಕೃಷ್ಣರ ಪ್ರೇಮಪ್ರಯಾಣದಲ್ಲಿ ವಿರಹೋತ್ಕಂಠಿತಾ, ಖಂಡಿತಾ, ಅಭಿಸಾರಿಕಾ ಇತ್ಯಾದಿ ನಾಯಿಕೆಯರ ಭೂಮಿಕೆಗೆ ಸಮಾನಾಂತರವಾಗಿ ನಾಯಕಭೂಮಿಕೆಯ ನೃತ್ಯಚಿತ್ರವನ್ನು ತೋರಿದ್ದು ಗಮನಾರ್ಹ.

ಕತೆಯ ಆವರಣದಲ್ಲಿ ಪಾತ್ರಗಳ ಭಾವಾಭಿನಯ ನಿರಂತರ ಸಾಗುವಾಗ ಪ್ರತಿಯೊಂದು ಸ್ಥಿತಿ/ಗತಿಯಲ್ಲಿ ಶಾಸ್ತ್ರನಿಬದ್ಧ ನೃತ್ತಹಸ್ತ–ಅಂಗಹಾರ–ಚಾರಿ–ಕರಣಾದಿಗಳನ್ನು ಶಿಲ್ಪಶುದ್ಧವಾಗಿ ಮಾಡಿ ತೋರುತ್ತಿದ್ದರೂ, ಪಾತ್ರದ ಭಾವಾಭಿನಯ ಚಲನೆಯಲ್ಲಿ ಈ ಎಲ್ಲ ಲಕ್ಷಣವೃತ್ತಿಗಳು ಏಕೀಭವಿಸಿ ನೃತ್ತ–ನೃತ್ಯಗಳು ಅವಿನಾಭಾವವಾಗಿ, ರಾಧಾಕೃಷ್ಣರ ಅಂತರಂಗದ ರಂಗಸ್ಥಳಕ್ಕೆ ನೋಡುಗರನ್ನು ಕರೆದೊಯ್ದು ನಿಲ್ಲಿಸುತ್ತಿದ್ದವು. ಗೀತಗೋವಿಂದದ ಸ್ಥಾಯಿಯಾದ ಶೃಂಗಾರವನ್ನು ಅಲೌಕಿಕ ಎನಿಸುವಂತೆ ಚಿತ್ರಿಸದೆ, ತೀರಾ ಸಾಮಾನ್ಯರ ನಿತ್ಯವ್ಯವಹಾರದ ತುಣುಕುಮಿಣುಕುಗಳ ಮಿತಿಯಲ್ಲಿ ಚಿತ್ರಿಸಿಕೊಟ್ಟು ಕೊನೆಗೆ ಸ್ವಾಧೀನಪತಿಕೆಯಾಗಿ ರಾಧೆಯನ್ನು ಕಟೆದದ್ದು ಸರಸೋದಾರವಾಗಿತ್ತು. ಶಬ್ದಕಾವ್ಯವಾದ ಗೀತಗೋವಿಂದ, ಕಲಾವಿದೆಯ ಅದ್ಭುತ ಅಭಿನಯದ ಮೂಲಕ ಭಾವಕಾವ್ಯವಾಗಿ ರಂಗದಲ್ಲಿ ಮೂಡಿಬಂತು. ಪೂರ್ಣಾವಧಿಯ ರಂಗಪ್ರದರ್ಶನಕ್ಕೆ ಗೀತಗೋವಿಂದವನ್ನು ಉಲ್ಲೇಖಾರ್ಹವಾಗಿ ಅಳವಡಿಸಿದ ಸುಂದರಿಯವರ ಪರಿಶ್ರಮ ಸಾರ್ಥಕ, ಅಭಿನಂದನೀಯ.

ಇಂತಹ ಸ್ಮರಣೀಯ ಕಾರ್ಯಕ್ರಮವನ್ನು ಡಾ.ಪದ್ಮಾಸುಬ್ರಹ್ಮಣ್ಯಂ ಅವರ ಹಿರಿಯ ಶಿಷ್ಯೆಯಾದ ಸುಂದರೀಸಂತಾನಂ ಅವರಿಂದ ಮೂಡಿಸಲು ಏರ್ಪಾಟು ಮಾಡಿದ ಪ್ರಸಿದ್ಧ ಕಥಕ್ ಕಲಾವಿದರಾದ ನಿರುಪಮಾ–ರಾಜೇಂದ್ರ ಉದ್ಗರಿಸಿದಂತೆ, ಗೀತಗೋವಿಂದ ರೂಪಕ ಒಂದು 'ರಸಾನಂದ'. ಸುಶ್ರಾವ್ಯವಾಗಿ ಭಾವದೀಪಕವಾಗಿ ಹಾಡಿದ ಮಾನಸಿ, ಪದೋಚಿತವಾಗಿ ತಬಲಾ ನುಡಿಸಿದ ತುಳಸಿರಾಂ, ರಸಪೋಷಕವಾಗಿ ಕೊಳಲು ನುಡಿಸಿದ ಸತ್ಯನಾರಾಯಣರ ಹಿಮ್ಮೇಳ ಕರ್ಣಾನಂದಕುತೂಹಲವಾಗಿತ್ತು.

ಗೀತಗೋವಿಂದದ ಅಷ್ಟಪದಿಗಳನ್ನು ಆಯ್ದು ಕಥಾಗತಿಗೊಪ್ಪುವಂತೆ ಜೋಡಿಸಿದ್ದಲ್ಲದೇ, ಕಾರ್ಯಕ್ರಮದಲ್ಲಿ ಉದ್ಬೋಧಕವಾಗಿ ನಿರೂಪಣೆಯನ್ನು ನಿರ್ವಹಿಸಿದವರು ಶತಾವಧಾನಿ ಡಾ. ಆರ್. ಗಣೇಶ್.

## ಲಲಿತ ಲಹರಿ

# 'ಪದ್ಯಪಾನ'ದೊಳಗಿನ 'ಮಹಾನಟ'



ಮಹಾನಟನ ಅತ್ಯದ್ಭುತ ರೂಪದ ಛಾಯಾನೋಟ ನಿಮಗೆ ಈಗಾಗಲೇ ಮುಖಪುಟದಲ್ಲೇ ದಕ್ಕಿದೆ. ನಟರಾಜನ ಕಲ್ಪನೆಗಿಂತಲೂ ಮುಂಚಿನದ್ದಾದ ಮಹಾನಟನ ಕಲ್ಪನೆ ಕರ್ನಾಟಕದ ಶಿಲ್ಪಪ್ರತಿಭಾಪಾಕಶಾಲೆಯ ಪಾಯಸ. ಈ ಪಾಯಸದ ಹನಿಹನಿಯನ್ನು ಕಾವ್ಯಸಂದರ್ಭದ ಮೂಲಕ ಸವಿಯುವ ಭಾಗ್ಯ ನಮಗೀಗ. ನರ್ತನಗೈವ ಶಿವನ ಕಲ್ಪನೆಯನ್ನು ಜಗತ್ತಿಗೆ ಕೊಟ್ಟ ನಮ್ಮ ನಾಡಿನ ಕಲ್ಪನಾಸಾಮರ್ಥ್ಯವನ್ನು ಕೊಂಡಾಡಿದ್ದಾರೆ ನಮ್ಮ ಕಾಲದ ಹಲವು ಪ್ರವರ್ಧಮಾನ ಕವಿಪುಂಗವರು. ಆ ಮೂಲಕ ಅಭಿಜಾತ ಕಾವ್ಯವನ್ನೂ, ಹೊಸದೆನಿಸುವ 'ಮಹಾಶಂಭುನಟನ' ಅಥವಾ 'ಶಂಭುಮಹಾನಟನ' ಎಂಬ ಛಂದಸ್ಸಿನ ವ್ಯಾಪ್ತಿಯ ವೃತ್ತನಿರ್ಮಿತಿಯನ್ನೂ, ಜೊತೆಗೆ ನರ್ತನಕ್ಕೆ ಒದಗಬಲ್ಲ ಸಾಹಿತ್ಯವನ್ನೂ ಪೋಷಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ ಎಂಬುದು ನಮ್ಮ ಕಾಲದ ಹೆಮ್ಮೆಗಳಲ್ಲೊಂದು. ಒಂದರ್ಥದಲ್ಲಿ ಬಾದಾಮಿಯ ಈ ಮಹಾನಟನ ಮೇಲೆ ಬರೆಯಲಾದ ಮೊತ್ತಮೊದಲ ಕಾವ್ಯಗುಚ್ಛ ಇದೇ ಎನ್ನುವುದಾದರೆ ಅದರೊಳಗೆ ಎರಡು ಮಾತಿರಲಿಕ್ಕಿಲ್ಲ.

ಪದ್ಯಪಾನದ ಬಳಗ ಕೈಗೊಂಡ ಬದಾಮಿ – ಐಹೊಳೆಯ ಪ್ರವಾಸದ ಸಾರ್ಥಕ್ಯವೆಂಬಂತ ಪ್ರಯತ್ನವಿದು. ಫಲವಾಗಿ ಮಹಾನಟನ ಅದ್ಭುತರೂಪಸಮುದ್ರದೊಳಗೆ ಪದ್ಯಪಾನವೂ ಮತ್ತೇರಿ ಮಿಂದೆದ್ದಿದೆ. ಅವರ ಪೈಕಿ ಬಹುಮಂದಿ ಅವಧಾನದ ಪೃಚ್ಛಕರು, ಯುವ ಕವಿಸಾಹಸಿಗಳು ಎಂಬುದು ಗಮನಿಸಲ್ಪಡುವ ವಿಚಾರ. ಕವಿಮನಸ್ಸಿನ ಸೃಷ್ಟಿಶೀಲತೆಯು ಪ್ರಸ್ತುತ ದಿನಮಾನಗಳ ಅರಿವಿನೊಂದಿಗೆ ಸಾಗುವ ಹೆಜ್ಜೆಯನ್ನು ಅರ್ಥೈಸಿಕೊಳ್ಳಲು ಇದೊಂದು ಒಳ್ಳೆಯ ನಿದರ್ಶನ. ಈ ಹಿನ್ನೆಲೆಯಲ್ಲಿ ಹಲವು ಕವಿಮನಸ್ಸುಗಳ ಕಮನೀಯವಾದ ಕಾವ್ಯಗುಚ್ಛವನ್ನು ನಿಮ್ಮ ಕೈಗಿಡಲು ನೂಪುರ ಭ್ರಮರಿ ಬಳಗ ಸಂತಸಪಡುತ್ತದೆ. ಮಹಾನಟನ ಕುರಿತಾದ ಹೆಚ್ಚಿನ ಸಂಶೋಧನೆಯ ಓದಿಗೆ ಡಾ. ಕರುಣಾ ವಿಜಯೇಂದ್ರ ಅವರು ಕಳೆದ ವರ್ಷದ ರಾಜ್ಯಮಟ್ಟದ ನೃತ್ಯ ಸಂಶೋಧನ ಸಮ್ಮೇಳನದಲ್ಲಿ ಮಂಡಿಸಿ; ನಮ್ಮದೇ ಆದ 'ನೂಪುರಾಗಮ'ವೆಂಬ ದೇಶದ ನೃತ್ಯ ಇತಿಹಾಸದಲ್ಲೇ ವಿನೂತನಪ್ರಯತ್ನವೆಂಬ ಮೊದಲ ನೃತ್ಯ ಸಂಶೋಧನ ನಿಯತಕಾಲಿಕೆಯಲ್ಲಿ ಪ್ರಕಟವಾದ ಲೇಖನವನ್ನು ಪರಾಮರ್ಶಿಸಬಹುದು. ಬನ್ನಿ, ಅವರೆಲ್ಲರಿಗೂ ಪತ್ರಿಕೆಯ ಪರವಾಗಿ ಮತ್ತು ಸಹೃದಯಮನಪುರಸ್ಸರವಾದ ಅಭಿವಂದನೆಗಳನ್ನು ಆಸ್ವಾದನೆಯ ರೂಪದಲ್ಲಿ ಸಲ್ಲಿಸೋಣ.

– ಸಂಪಾದಕಿ.

**ಸಾ**ಮಾನ್ಯವಾಗಿ ನರ್ತನ ಮಾಡುತ್ತಿರುವ ಶಿವನನ್ನು ನಟರಾಜ ಎಂದೇ ಸಂಬೋಧಿಸುವುದು ಪ್ರಚಲಿತ. ಆದ್ದರಿಂದಲೇ ಬಾದಾಮಿಯ ಶಿವನನ್ನು ನಟರಾಜ ಎಂದು ಉಲ್ಲೇಖಿಸಿ ಪದ್ಯರಚನೆಗೆ ಸ್ವಾಗತವಿತ್ತವರು ಬೆಂಗಳೂರಿನ ಕೆ.ಬಿ.ಎಸ್.ರಾಮಚಂದ್ರ. ಅವರಿಗೆ ರಂಗನಾಥ ಪ್ರಸಾದ್ ಈ ಶಬ್ದತೊಂದರೆಯನ್ನು ಸರಿಮಾಡಿಕೊಂಡು ಮಹಾನಟನೆಂದು ಸೂಚಿಸಲು ಹೇಳಿರುವುದೂ ಪದ್ಯರೂಪದಲ್ಲೇ ಇದೆ.

ನಟರಾಜನಲ್ಲವೀ ಮನುರೂಪಿ ಶಿವ ತಾನು
ಸುಟಿಯಾದ ಮಾನಟನಿವನು।
ನಟರಾಜನೆಂಬಭಿಧಾನವರ್ವಾಚೀನ
ಭಟ ರಾಮಚಂದ್ರ ತಿದ್ದಯ್ಯೋ॥

ಬೆಂಗಳೂರಿನ ರಂಗನಾಥ ಪ್ರಸಾದ್ ಅವರ ಪದ್ಯಕ್ಕೆ ಶತಾವಧಾನಿ ಡಾ.ಆರ್.ಗಣೇಶ್‌ರ ಪದ್ಯರೂಪದ ಪ್ರಶಂಸೆಯ ಪ್ರತ್ಯುತ್ತರ; ಜೊತೆಗೆ ಮಹಾನಟನ ಕುರಿತಾದ ಸುಮಧುರವೆನಿಸುವ ಒಂದು ವ್ಯಾಖ್ಯಾನ ಕೂಡಾ ಪದ್ಯದ ಗತ್ತಿನಲ್ಲೇ ಇರುವುದು ಇಲ್ಲಿನ ಸ್ವಾರಸ್ಯ.

ಅತಿಸುಂದರಂ ಪದ್ಯಮತಿಬಂಧುರಂ ಸದ್ಯ–
ಸ್ಸ್ತುತಿಪಾತ್ರಮಾಯ್ತಯ್ ಪ್ರಸಾದು!!
ಕ್ರತುರೂಪಿ ಶಿವನ ನರ್ತನರೂಪಿ ಭವನ ಅಂ–
ಕಿತಮೇ ಮಹಾನಟ, ಸ್ವಾದು!!!

**ಶತಾವಧಾನಿ ಡಾ. ಆರ್.ಗಣೇಶರು ಮಹಾನಟನ ಮಾಹಾತ್ಮ್ಯವನ್ನೂ ಆತನ ಅಷ್ಟಾದಶಭುಜಗಳ ಹಾಸು–ಬೀಸನ್ನೂ ಗಮನದಲ್ಲಿರಿಸಿ ಕೊಂಡು ಶಂಭುನಟನವೃತ್ತಕ್ಕೆ ಮತ್ತೂ ಒಂದು ಗುರು ಹಾಗೂ ಮೂರು ಲಘುಗಳನ್ನು ಮೊದಲಿಗೇ ಸೇರಿಸಿ, ಒಟ್ಟು ಇದು ಮೂವತ್ತು ಅಕ್ಷರಗಳ ದಂಡಕಗತಿಯ ಒಂದು ಬಂಧವೆಂದು ಕರೆದು ಪದ್ಯರಚಿಸಿದ್ದಾರೆ.**

ಮಹಾಭರತಲೀಲೆಗೆನುತುಂ ಭರತದೊಳ್ ಮಲೆವ ಸಾಗರದ ಪಾಂಗೆನೆ ರಸಾಗರನೆ ದಲ್
ವಿಹಾಸಮಿಹಿಕಾಮಹಿತಸತ್ತ್ವಗುಣಮಾತ್ರಮಿರೆ ತಾಮಸಕಲಾಪಮೆನುವಂಥ ಲಯಮಂ।
ವಿಹೀನಮಿರೆ ಕಾಲಮತಿದೀನಮಿರೆ ದೇಶಮುಪದೇಶಮೆನೆ ಮೋದಸುಧೆಯೊಂದೆ ನಲಿಯಲ್
ಮಹಾನಟನಿವಂ ಕರಣಮಾತ್ರಕರಣಂ ಸಗಿರಿಜಾಪ್ರಕರಣಂ ಕವಿಚಲುಕ್ಯವರಣಂ॥

'ಮಹನೀಯವಾದ ಭರತಮುನಿಪ್ರಣೀತ ನಾಟ್ಯಶಾಸ್ತ್ರದ ಲೀಲೆಯನ್ನು ತೋರ್ಪಡಿಸಬೇಕೆಂದು ಸಮುದ್ರದ ಭರತ ಹೇಗೆ ಉಕ್ಕೇರಿ ಬರುವುದೋ ಹಾಗೆ ರಸಾಲಯವಾಗಿರುವಂತಹ ಶಿವನ ನಗು ಬೆಳ್ಳಗಿರುತ್ತದೆ. (ಅವನ ಅಟ್ಟಹಾಸವೇ ರಾಶೀಕೃತವಾಗಿ ಹಿಮಾಲಯ ವಾಯಿತು ಎಂದು ಬಾಣಭಟ್ಟನೇ ಹೇಳುವುದಿದೆ. ಶಿವನ ಬೆಳ್ಳಗಿನ ಅಟ್ಟಹಾಸದಿಂದಲೇ ಪ್ರತಿದಿನವೂ ಹಿಮಾಲಯ ತನ್ನ ಗಾತ್ರ ಬೆಳೆಸಿ ಕೊಳ್ಳುತ್ತದೆ ಎಂದೂ ಕಾಳಿದಾಸ ಹೇಳಿದ್ದಾನೆ.) ಸತ್ತ್ವಗುಣದ ಲಕ್ಷಣವೇ ಬಿಳುಪು. ಅವನ ಹಿಮದಂತಹ ಬೆಳ್ಳಗಿನ ನಗೆ ಯಿಂದಲೇ ಹಿಮಾಲಯವನ್ನು ತುಂಬಿಕೊಡುವ ಶಿವನು ತಾಮಸವೆಂಬಂತ (ಕಪ್ಪು) ಲಯವನ್ನು ಹೇಗೆ ಮಾಡಬಲ್ಲ? ಇದು ಅಸಾಧ್ಯ. ಆದ್ದರಿಂದ ಅದು ಕೇವಲ ಲಯಲೀಲೆಯಲ್ಲ. ರಸಲೀಲೆ ! ಲಯವನ್ನು ಎಣಿಕೆ ಮಾಡುವ ಕಾಲವೂ ಆ ಸಂದರ್ಭಕ್ಕೆ ಇರುವುದಿಲ್ಲ. ದೇಶಕಾಲಗಳು ನಾಶವಾದರೇನೇ ಪ್ರಲಯ. ಮಹಾಕಾಲನಲ್ಲೇ ಕಾಲದ ಅಸ್ತಿತ್ವ ಹಾಗಾಗಿ ಕಾಲ ದೀನವಾಯಿತು; ದೇಶ ವಿರುವಂತದ್ದು ಆತನ ನಾಟ್ಯದಲ್ಲಿ ತೋರಿಸುವ ಉಪದೇಶದಲ್ಲೊಂದೇ. ಆದ್ದರಿಂದ ಆನಂದ ಮಾತ್ರ ಇರುವಂತದ್ದು. ಆನಂದಸುಧೆ ನಲಿಯಬೇಕೆಂದರೆ ಕಾಲ–ದೇಶಗಳನ್ನು ಮರೆಯಬೇಕು. ಇಂತಹ ಮಹಾನಟನಿಗೆ ಕರಣಗಳೇ ಕರಣಗಳು(equipments). ಅವನು ಮಾಡುವಂತಹ ನಾಟ್ಯ ಸದಾ ಪಾರ್ವತಿಯನ್ನು ಸೇರಿ ಕೊಂಡಿರುವಂತದ್ದು. ಅದು ಕವಿಗಳ, ಚಲುಕ್ಯರಾಜರ ವರ್ಣನೆ, ಆಯ್ಕೆ ಎಂಬಲ್ಲಿ ಶಿವನ ನರ್ತನ ಮಹಾಕವಿಗಳ ಬೊಗಸೆಗೆ ಮಾತ್ರ ದೊರಕುವ ಅಂಶ ಎಂದು ಶ್ಲೇಷೆಯನ್ನೂ ಹೆಣೆಯಲಾಗಿದೆ.

**ಇದಕ್ಕೆ ಬೆಂಗಳೂರಿನ ಚಂದ್ರಮೌಳಿಯವರು ಜಸನ ಭಾಜಸನ ಭಾಜಸ: ಜಗಣ,ಸಗಣ ಇತ್ಯಾದಿ..ಇದು ಜಗಣ, ಭಗಣ, ನಗಣಗಳು ಎರಡು ಸಲ ಮತ್ತು ಸಗಣ ಮೂರುಸಲ ಬಂದಿರುವ ಚತುರ್ವಿಧಗಣಗಳ ದಶಗಣಯುಕ್ತ ತ್ರಿದಶಾಕ್ಷರ ವೃತ್ತ. ಇನ್ನು ದಂಡಕ ಸಾಮಾನ್ಯವಾಗಿ ತಗಣಗಳ ಅಸಂಖ್ಯಮಾಲೆಯಿಂದಲೇ ಪ್ರಸಿದ್ಧ. ಈ ವೃತ್ತವನ್ನು ಮಹಾಶಂಭುನಟನ ಅಥವಾ ಶಂಭುಮಹಾನಟನ ಎಂದು ಕರೆಯ ಬಹುದೇನೋ; ದಂಡಕವೆನ್ನಲಾರೆ ಎಂದು ಮಹಾನಟನ ಹೆಸರಿನಲ್ಲೇ ವೃತ್ತವೊಂದರ ನಿರ್ಮಿತಿಯನ್ನು ಮಾಡಿ ; ಅದೇ ವೃತ್ತದಲ್ಲಿ ಪ್ರತ್ಯುತ್ತರ ವನ್ನಿತ್ತಿದ್ದಾರೆ. ಮಹಾನಟನ ಲಯವೈಶಿಷ್ಟ್ಯದ ಆರ್ಭಟಗಳನ್ನು ವರ್ಣಿಸುತ್ತಾ; ರಾ.ಗಣೇಶರ ಪ್ರಯೋಗಗಳ ಬಗ್ಗೆ ಅಚ್ಚರಿಯ ಸಂತಸ ವನ್ನೂ ಸೂಚಿಸಿರುವ ಅವರಿಗೆ ಡಾ. ರಾ. ಗಣೇಶರಿಂದ (ರಾ.ಗ) 'ವೃತ್ತಗಳ ಸಾಲಿಗೆ ಒಳ್ಳೆಯ ನಾಮಕರಣ' ಎಂದು ಪ್ರಶಂಸೆಯೂ ದಕ್ಕಿದೆ.**

ಇದೇನುಲಯಮೇವಿಲಯಮೇ ನಿರತಸಾಗಿಹುದು ಮಾಯವಿದುಪಾಯವಿದು ಬೊಮ್ಮನದೆನಲ್
ಪುದಿರ್ದುಭವಭಾಂಡಗಳ ಸೃಷ್ಟಿಸಿಬಿಸುಟ್ಟನಟನಾರ್ಭಟವಿದೇನಿದು ಗಣೇಶಕವನಂ
ಅದೆಷ್ಟುನಿಡಿದೈತ್ರಿದಶದಕ್ಕರ ನವೀನವೆನಲೀ ಜಸನ ಭಾಜಸನ ಭಾಜಸಗಳಿಂ
ಮದೀಯಮತಿಗಂ ತಿಳಿಯದಂತಿದೆ ಪುರಾತನತೆಯೋ ಪೊಸತೊ'ರಾಗ'ರ ಪ್ರಯೋಗವೆನಲೇಂ

**ಇದೇ ಬಗೆಯಲ್ಲಿ ಹಲವು 'ಪದ್ಯಪಾನಿ'ಗಳು ತಮ್ಮ ಕವಿತ್ವವನ್ನು ಬೆಳೆಸುತ್ತಾ ಸಾಗಿದ್ದಾರೆ. ಅದರಲ್ಲಿ ರವೀಂದ್ರ ಹೊಳ್ಳ ಕೋಟೇಶ್ವರ ಅವರ ಪದ್ಯ ಹಾಸ್ಯರಸಾಸ್ಪದವಾಗಿದ್ದು; 'ಗಣೇಶ, ವಿಘ್ನನಿವಾರಕ, ಪದ್ಯಪಾನಕೇನಾನುಂ ಬಂದಿರ್ದಾದೊಡಂ, ಮನ್ನಿಸೆನ್ನಮ್ ಸ್ವಾಮಿ, ತಮಾಶೆಗಂ ಪೇಳ್ದೆನೈಸೆ' ಎಂದು ಕುಟುಕು ಕ್ಷಮೆಯೂ ಇದೆ.**

ಪಿತನೋ ನರ್ತನದಿಂ ಸು–
ಸ್ಥಿತಿಯೊಳ್ ಸಂರಕ್ಷಿಸಿರ್ಪನವನಾ ಕಾಯಂ!
ಸುತನೋ ಮೋದಕ ಮೋದಿದ
ಕತದಿಂ ಪೊಡೆಯ ಬೆಳೆಸಿರ್ಪುದೇನೀ ನ್ಯಾಯಂ

**ಬೆಂಗಳೂರಿನ ಸೋಮಶೇಖರ್ ಅವರೂ ಕೂಡಾ ತಮ್ಮ ಪದ್ಯಗಳನ್ನು ಸೇರಿಸಿದ್ದು ಶಿವನ, ಶಿಲ್ಪಿಯ ಮಹಿಮೆಯನ್ನು ಹಾಡಿ ಹೊಗಳಿದ್ದಾರೆ.**

ಮೆರಗಂ ಸೂಸುತ ದೇಶಕಾಲಗಳನುಂ ಪಾರ್ವಾ ಕಲೋತ್ತುಂಗವಂ
ಕರಣಂಗಳ್ ಭರತಾಖ್ಯಮಿರ್ದಪಗಳಂ ತೋರಲ್ಕಿದಂ ತಾಂ ಸಮೀ–
ಕರಣಂ ಗೈಯುತ ಭಂಗಿಗಳ್ ರಚಿಸಿದಾ ಒಂದೇ ಶಿಲಾಮೂರ್ತಿಯೊಳ್
ಹರನಾ ಲೀಲೆಯ ರೌದ್ರಶಾಂತತೆಯನಂ ಮೇಣಂಗಳಂ ಕೆತ್ತುವೊಲ್

**ಸೋಮಶೇಖರ್ ಅವರ ಮತ್ತೊಂದು ಪದ್ಯದ ಕಲ್ಪನೆಯಂತೂ ಸ್ವಾರಸ್ಯಪೂರ್ಣವಾಗಿದ್ದು; 'ಮುನಿಸಿಕೊಂಡ ಪಾರ್ವತಿಯನ್ನು ರಮಿಸಲು ಶಿವನು ಕರಣಗಳನ್ನು ತೋರಿ ನರ್ತಿಸಲು; ತನಗೂ ನಾಟ್ಯ ಗೊತ್ತಿದೆ ಎಂದು ತೋರುವುದಕ್ಕೆ ಮುಗ್ಧನಾಗಿ ಗಣಪನೂ ಹೆಜ್ಜೆಯಿಟ್ಟ' ಎಂದಿದ್ದಾರೆ.**

ಮುನಿದಾ ಪಾರ್ವತಿಯಂ ತಾಂ
ಪಿನಾಕಿ ರಮಿಸಲ್ಕೆ ಕರಣಗಳನಂ ತೋರಲ್
ತನಗುಂ ಬರ್ಪುದು ನಾಟ್ಯವ–
ದೆನುತಲಿ ಹೆಜ್ಜೆಯನು ಗಣಪನಿಟ್ಟಂ ಮುಗ್ಧಂ

**ಇದನ್ನು ಕೇಳಿದ (ಸ್ವತಃ ಅಷ್ಟಾವಧಾನಿಗಳಾದ) ಶಂಕರ್ ಸಂಸ್ಕೃತಪದ್ಯವೊಂದರ ಮೂಲಕ ಕೊಂಡಾಡಿದ್ದಾರೆ.**

ಲಾಲಿತಗಂಗಾಪ್ರಸರಾ ಜಯತಿ ಪದನ್ಯಾಸಚತುರತಾ ಶಂಭೋ।
ಕವಿತಿಲಕ ಸೋಮಶೇಖರ ತವಾಪಿ ಲಾಲಿತಸರಸ್ವತೀಪ್ರಸರಾ॥

*O Somashekhara, adornment of poets, Shiva's dance is matched by your poesy. (ಪದನ್ಯಾಸಚತುರತಾ could mean either dance or poesy) The former allows Ganga to flow unbridled and the latter does the same to Sarasvathi !*

**ಜೊತೆಗೆ ತಮ್ಮ ಒಂದು ಸಂಸ್ಕೃತ ಪದ್ಯವನ್ನೂ ಶಂಕರ್ ಇಲ್ಲಿ ಹಂಚಿಕೊಂಡಿದ್ದಾರೆ.**

ಶ್ರಾನ್ತಾಸ್ಮಿ ನೈನಮನುವರ್ತಿತುಮಸ್ಮಿ ಪಟ್ವೀ
ತದ್ಗಚ್ಛ ತಾತಮಿಭವಕ್ತ್ರ ವದೋಪರನ್ತುಮ್
ಗೌರ್ಯಾ ವಚಸ್ತದಧಿಗಮ್ಯ ಸುತಾನ್ಮಹೇಶೋ
ನಾಟ್ಯಾರ್ಧಸಂಹೃತನಿಜಭ್ರಮಿರಸ್ತು ಭೂತ್ಯೈ

"I am tired and cannot keep pace with him. So, go Ganesha and tell your father to slow down" – Let Shiva who, hearing these words of Gowri from the mouth of his son, put a full stop to his fast-paced revolutions in the middle of his dance, bring us prosperity.

**ಇದನ್ನು ಗಮನಿಸಿದ ಶತಾವಧಾನಿ ರಾ. ಗಣೇಶರು ಮತ್ತೊಂದು ಪದ್ಯದ ಮೂಲಕ ಶಂಕರರ ಪ್ರತಿಭೆಯನ್ನು ನರ್ತನಹಾದಿಯ ಅನ್ವರ್ಥರೂಪದಲ್ಲಿ ಕೊಂಡಾಡಿದ್ದಾರೆ.**

ಸದೃಶಂ ಕಿಲ ಶಂಕರಸ್ಯ ವಾಣೀ
ಪ್ರಸರಂತೀ ಶ್ರುತಿಹಾರಿಣೀ ಚಕಾಸ್ತಿ
ಪರಮತ್ರ ವಿಚಿತ್ರಮೇವಮಾಸ್ತೇ
ನಟನತ್ರೋಟನಕೋ ನು ಶಂಕರೋಸೌ

*ಶಂಕರನ ವಾಣೀ ಶ್ರುತಿಹಾರಿಣಿಯಾಗಿ ಒಳ್ಳೆಯ ಪದಗಳಿಂದ ಇಂಪಾಗಿ ಚೆನ್ನಾಗಿದೆ. ಆದರೆ ಇಲ್ಲೊಂದು ವಿಚಿತ್ರವಿದೆ. ಶಿವನ ನೃತ್ಯವನ್ನು ಶಿವನ ಹೆಸರಿನ ಶಂಕರನೇ ನಿಲ್ಲಿಸಿಬಿಡುತ್ತಿರುವನಲ್ಲಾ !*

**ಇದಕ್ಕೆ ಶಂಕರ್ ಅವರ ಪ್ರತಿಪದ್ಯ ಸುಮನೋಹರವಾಗಿದೆ.**

ತಾದೃಶೀ ಕಿಲ ಗಿರೀನ್ದ್ರಸುತಾಯಾಂ
ಪ್ರೀತಿರಿನ್ದುಶಕಲಾಭರಣಸ್ಯ ।
ತತ್ಕೃತೇ ಸ ನಿಜತಾಣ್ಡವಲೀಲಾಂ
ತ್ರೋಟಯನ್ನಪಿ ನ ಯಾತಿ ವಿಷಾದಮ್॥

*ಪಾರ್ವತಿಯ ಮೇಲಿನ ಪ್ರೀತಿ ಶಿವನಿಗಿರುವಂಥದ್ದು ಹೇಗಿದೆಯೆಂದರೆ ಶ್ರಮವೆಂದು ಚಂದ್ರನನ್ನೇ ತಲೆಯ ಮೇಲಿಟ್ಟುಕೊಂಡವನು. ಹೀಗಿರುವಾಗ ಪಾರ್ವತಿಗಾಗಿ ತಾಂಡವವನ್ನೂ ನಿಲ್ಲಿಸಬಲ್ಲ. ಹಾಗಾಗಿ ಅದರಲ್ಲೇನು ಶಿವನಿಗೆ ವಿಷಾದವಿಲ್ಲ !*

ಮಹಾನಟನ ಶಿಲ್ಪದಿಂದ 81 ಮುದ್ರೆಗಳನ್ನು ಕಲಿಯಬಹುದು ಎಂಬುದು ಗಾಯತ್ರಿ ಇಂದಾವರರ ಅಭಿಮತ. ಗಾಯತ್ರಿಯವರ ಪದ್ಯ ಮಹಾನಟನ ಹಸ್ತಾಭಿನಯ ಪ್ರಾವೀಣ್ಯತೆಯನ್ನು ನಿರೂಪಿಸಿದೆ.

ಗುರುವೀತ ಹಸ್ತಾಭಿನಯಕದೇಕಾಂತದಲಿ
ಹಿರಿಮೆಯ ಮಹಾನಟನು ಬಾದಾಮಿಯಲ್
ಕರಣಗಳ ಲಾಸ್ಯವನು ತೋರಿಪನು ನಟರಾಜ
ನೆರೆದಿರುವ ಸಖಿಯರೊಡೆ ಮೆರೆದಿಹ ಚಿದಂಬರದವನ್

ಯುಎಸ್‌ಎನಲ್ಲಿ ನೆಲೆಸಿರುವ ಜಿ. ವೆಂಕಟೇಶ್‌ಮೂರ್ತಿ (ಜೀವೆಂ) ಅವರ ಪದ್ಯಪ್ರಶ್ನೆಯಂತೂ ಬಹಳಷ್ಟು ಸೊಗಸಾಗಿದ್ದು; ಎರಡು ಕಾಲುಗಳಲ್ಲಿ ತಾಂಡವವಾಡುವ ನಿನಗೆ ಕೈಗಳೇಕೆ ಹಲವು ಎಂಬಲ್ಲಿ ಮುಗ್ಧಮನೋಹರತೆ ಬಲುಚೆನ್ನಾಗಿದೆ.

ವಾತಾಪಿಯ ಮಾನಟನೇ
ಮಾತೀ ಕಂದನದುಪೇಕ್ಷೆ ಮಾಡದೆ ಪೇಳ್ಳೈ;
ನೀ ತಾಂಡವವೆರಡೇಕಾ
ಲೊಳ್ ತೋರುವೆ ನಿನಗೆಯಷ್ಟು ಕೈಗಳದೇಕೈ?

ಈ ಪದ್ಯದಲ್ಲೇ ಒಂದಷ್ಟು ಬದಲಾವಣೆಗಳೊಂದಿಗೆ ಹಳಗನ್ನಡದ ಬಿಗಿಯನ್ನಿತ್ತ ರಂಗನಾಥ ಪ್ರಸಾದ್ ಶಿವನಿಗೆ ಪ್ರಶ್ನೆಯನ್ನೆಳೆಸುವ ಪರಿಪಾಠವನ್ನು ಮುಂದುವರೆಸಿದ್ದಾರೆ.

ವಾತಾಪಿಯ ಮಾನಟ ಕೇಳ್
ಮಾತಿದು ತರಳನದೆನುತ್ತುಪೇಕ್ಷಿಸದೆಲೆ ನೀಂ।
ಆ ತಾಂಡವಕೀರ್ಕಾಲ್ಗಳ
ಘಾತವು ಸಾಕೆಂದೊಡೇಕೆ ಬಹುಬಾಹುಗಳೈ॥

ಇವರೀರ್ವರ (ಜೀವೆಂ, ಪ್ರಸಾದ್) ನಡುವಿನ ಪದ್ಯಚರ್ಚೆಯನ್ನು ಹುರಿದುಂಬಿಸಿದ ರವೀಂದ್ರ ಹೊಳ್ಳರಂತೂ ಕವಿಗಳ ಮತ್ತು ಶಿಲ್ಪದ ಕಲಾಕಾರನ ಚತುರತೆಯನ್ನು ಒಟ್ಟಿಗೇ ಬಣ್ಣಿಸಿ ಪದ್ಯಪ್ರಶ್ನೆಗಳಿಗೆ ಉತ್ತರವನ್ನೂ ದಯಪಾಲಿಸಿದ್ದಾರೆ. 'ಇದೇನಿದ್ದರೂ ಕಲಾಕಾರನ ಚಾತುರಿ. ಒಂದೇ canvasನಲ್ಲಿ, ಹಲವು ಹಸ್ತವಿನಿಯೋಗಗಳನ್ನು ಸೆರೆ ಹಿಡಿದಿರುವುದು ಒಂದು ಅದ್ಭುತ ತಂತ್ರವೆನಿಸುತ್ತದೆ. ಶಿಲ್ಪವೆಂಬ ಈ ಕಲಾಮಾಧ್ಯಮದಲ್ಲಿ ನಿಶ್ಚಲತೆಯು ಒಂದು ಮಿತಿಯಾಗಿದ್ದರೂ, ಕಲಾಕಾರ ಆ ಮಿತಿಯಲ್ಲೇ ಒಂದು motion film ಅನ್ನು ಸೆರೆಹಿಡಿದಿದ್ದಾನೋ (by overlapping images) ಎನಿಸುತ್ತಿದೆ' ಎಂಬ ಅಭಿಮತ ಅವರದ್ದು.

ಕಲೆಯಾರಾಧಕನ ಬಯಕೆ
ಗೊಲಿದುಂ ಕನಸೊಳವತೋರ್ದ ಹಸ್ತಸಹಸ್ರಂ
ಚಲದಿಂ ಪಿಡಿದುಂ ಮನದೊಳ್
ಗೆಲದಿಂ ಕೊರೆದಿರ್ದುದೇ ಸಕಾರಣಮಕ್ಕುಂ

ಈ ಉತ್ತರವನ್ನು ಶ್ಲಾಘಿಸುವಂತೆ ಜೀವೆಂ ಅವರ ಮತ್ತೊಂದು ಪದ್ಯವು ಮತ್ತಷ್ಟು ವಿಸ್ತರಣೆ ಪಡೆದಿದ್ದು; 'ನಿನ್ನಂತೆ ಹದಿನೆಂಟು ಭುಜವಿರದ ನನ್ನಲ್ಲಿ ಮುಗಿದ ಕೈಯ್ಯೇ ಗತಿ' ಎಂದು ಬಿನ್ನವಿಸಿದ್ದಾರೆ. ಈ ಪದ್ಯದ ಅರ್ಥಸ್ವಾರಸ್ಯ ಮನನೀಯವಾಗಿದೆ ಎಂಬ ಪ್ರಶಂಸೆ ಡಾ. ರಾ.ಗಣೇಶರದ್ದು.

ಸುಯೋಧನನುಮಾಪತಿಯೆ ಆಯುಧಗಳಂ ಕೊಡಲಿ ಕೈಯಲಗು ನೀಂ ಪಿಡಿದಿರಲ್
ಲಯಾಧ್ವರಮನಾದರಿಸಿ ತಾಂಡವದ ಲೀಲೆಯನು ತೋಷದಲಿ ತೋರುವೆ; ಹರಾ
ಪ್ರಯೋಗದೊಳು ಹಾವದಲಿ ಕೈಗಳನು ಬೀಸುವೊಡೆ ನನ್ನ ಕಡೆ ನೋಟವಿರಿಸಯ್
ದಯಾಳು; ಪದಿನೆಂಟು ಭುಜವಿಲ್ಲವೆನಗೀ ಮುಗಿದ ಕೈಯೆ ಗತಿ ನೀಗದಿರಿದಂ

ಬೆಂಗಳೂರಿನವರಾದ ವಿ. ಆರ್. ಭಟ್ ಅವರ ಪದ್ಯಪ್ರಯತ್ನ ಜನಪದ (ಅಂಶ ಛಂದಸ್ಸು) ಶೈಲಿಯಲ್ಲಿದ್ದು ಸೊಗಸಾಗಿ ಮೂಡಿಬಂದಿದೆ. ಆದರೂ ನಟರಾಜನೆಂದೇ ಇಲ್ಲಿ ಪ್ರಸ್ತಾಪಿಸಲಾಗಿರುವುದನ್ನು ಗಮನಿಸಿದರೆ ಶಬ್ದಪ್ರಚಲಿತತೆಯನ್ನು ಅರ್ಥಮಾಡಿಕೊಳ್ಳಬಹುದು.

ನಟನೆಗೆ ಗುರುವಂತೆ ಸಟಸಟನೇ ಕುಣಿವ್ಯಂತೆ
ಕಟಿಬದ್ಧನಾಗಿ ಆ ಕಲೆಯೊಳಗೆ ।
ಪಟವ ವಿಗ್ರಹವ ಸಿಂಗರಿಸಿ ನಮಿಸುವರಯ್ಯ
ನಟರಾಜ ಕರುಣಿಸೋ ಕೌಶಲವ ॥

**ಶ್ರೀನಿವಾಸ್ ಪಿ.ಎಸ್. ಅವರ ರಚನೆಯೂ ಶಿವನ ನರ್ತನವನ್ನು ವರ್ಣಿಸಿದ್ದು; ರವೀಂದ್ರ ಕೆ. ಅವರ ಸ್ಪರ್ಶದಲ್ಲಿ ಛಂದಸ್ಸಿನ ತೊಂದರೆಗಳನ್ನು ನಿವಾರಿಸಿಕೊಂಡಿದೆ.**

ಕಾಲೆತ್ತಿ ಕೈ ಚಾಚಿ ತಲೆಗೂದಲನು ಹರಡಿ
ಮಲೆಮೇಲೆ ರೋಷದಲಿ ಕುಣಿಯುತಿರಲೀಶ್ವರಂ
ಗಣ–ನಂದಿ ನೂರಿರಲಿ ಗಣಪನೂ ಜೊತೆಗಿರಲಿ
ಹಣೆಬಿರಿದರೆಲ್ಲವೂ ಚಣದಲೇ ನಶ್ವರ

**ಕಾರ್ತಿಕ್ ಕಾಮಣ್ಣ ಅವರ ಪದ್ಯಕ್ಕೆ 'ಸೊಗಸಾದ ಪದ್ಯ' ಎಂಬ ಪ್ರಶಂಸೆ ಸ್ವತಃ ಆರ್. ಗಣೇಶರಿಂದಲೇ ಯುಕ್ತವಾಗಿದೆ. 'ಅಡವು' ಶಬ್ದದ ಬಳಕೆಯ ಹಿನ್ನೆಲೆಯಲ್ಲಿ ನೋಡಿದರೆ ಪ್ರಸ್ತುತ ಭರತನಾಟ್ಯದ ಚಲನೆಗಳ ಪ್ರೇರಣೆ ಕವಿಗಿರುವಂತಿದೆ.**

ಬಡಿದಿರಲ್ ಮದ್ದಲೆಯ
ನುಡಿಸುತಲಿ ಡಮರುಗವ
ಎಡಪಾದ ಪಿಡಿದೆತ್ತಿ ಹರ ಕುಣಿಯಲು
ಅಡವುಗಳ ಮೆಚ್ಚುತಲಿ
ಪಡುತಿಹಳ್ ಶಿವೆ ಸೊಗವ
ನಡೆಯಲಿಹ ನೈಪುಣ್ಯವಾನಂದಿಸಿ!

**ಇಂಥ ಪದ್ಯ ಪ್ರಶ್ನೆ – ಪದ್ಯ ಪ್ರತ್ಯುತ್ತರಗಳ ನಡುವಿನ ಸ್ವಾರಸ್ಯಮಯ ಲೋಕ ಅದೆಷ್ಟು ಸೊಗಸಲ್ಲವೇ !!!**
**ಪದ್ಯದ ಮತ್ತಿನಲ್ಲಿ ಮದ್ಯಕಿಂತಲೂ ಹೆಚ್ಚಿನ ಮತ್ತಿದೆ ಎಂಬುದರಲ್ಲಿ ಅತಿಶಯವೇ ಇಲ್ಲ ಬಿಡಿ.. ಹಾಗಾದರೆ ನೀವೂ ಪದ್ಯಪಾನಿಗಳಾಗುತ್ತೀರೇನು?**
**ಹಾಗಾದರೆ ಮಾಹಿತಿಗೆ ಪದ್ಯಪಾನ ವೆಬ್‌ಸೈಟನ್ನು ಗಮನಿಸಿರಿ. www.padyapaana.com**

# ಹಸ್ತ ಮಯೂರಿ

## ಕಟಕಾವರ್ಧನ ಹಸ್ತ

**(ಮನೋರಮಾ ಬಿ.ಎನ್. ಅವರ ಮುದ್ರಾರ್ಣವ ಗ್ರಂಥದ ಅಂಕಣ ಸರಣಿ)**



**ಲಕ್ಷಣ: ಅಭಿನಯದರ್ಪಣದ ಪ್ರಕಾರ ಕಟಕಾಮುಖ ಹಸ್ತಗಳನ್ನು ಮಣಿಬಂಧದ ಬಳಿ ಸ್ವಸ್ತಿಕಾಕಾರವಾಗಿ ಇಡುವುದೇ ಕಟಕಾವರ್ಧನ. ಇದನ್ನು ನೃತ್ತಹಸವಾಗಿಯೂ ಪರಿಗಣಿಸುತ್ತಾನೆ ನಂದಿಕೇಶ್ವರ. ನಾಟ್ಯಶಾಸ್ತ್ರದಲ್ಲಿ ಅರ್ಧ ಮುಚ್ಚಿದ ಮುಷ್ಟಿಯನ್ನು ಇನ್ನೊಂದು ಮುಷ್ಟಿಯ ಮೇಲಿಟ್ಟರೆ ಕಟಕಾವರ್ಧಮಾನಕವೆನ್ನುತ್ತಾರೆ. ಬಾಲರಾಮಭರತದಲ್ಲಿ ಕಟಕಾವರ್ತ ಎಂಬ ಹೆಸರೂ ಇದೆ. ಹಸ್ತಮುಕ್ತಾವಳಿಯಲ್ಲೂ ಈ ಹಸ್ತವನ್ನು ಉಲ್ಲೇಖಿಸಲಾಗಿದೆ. ಭರತನಾಟ್ಯದ ನಾಟಡವು, ಹಾರಡವು (ಕುದಿತ್ತಮೆಟ್ಟು) ಮುಂತಾದ ಅಡವುಗಳಲ್ಲಿ ಈ ಹಸ್ತದ ಬಳಕೆ ಇದೆ.**

**ಇದರ ಅಧಿದೇವತೆ : ಯಕ್ಷರಾಜ.**

**ವಿನಿಯೋಗ :** ಪಟ್ಟಾಭಿಷೇಕ, ಪೂಜೆ, ಮದುವೆ ಮುಂತಾದವುಗಳಲ್ಲಿ ಉಪಯೋಗ, ಕಿರೀಟಧಾರಣೆ.

**ಇತರೇ ವಿನಿಯೋಗ :** ಶೃಂಗಾರ, ಮನ್ನಣೆ, ವಿವಾಹ, ಆಶೀರ್ವಾದ, ಲಕ್ಷ್ಮಿ–ಗಣಪತಿ–ಸರಸ್ವತಿ–ದುರ್ಗಾದೇವಿಯರ ವಂದನೆ, ಸ್ತ್ರೀಯೋನಿ, ಖಡ್ಗ, ರೆಂಬೆಕೊಂಬೆಗಳು, ಸಮ್ಮಾನಿಸುವುದು, ಚಿನ್ನ–ಬೆಳ್ಳಿ–ತಾಮ್ರದ ತಂಬಿಗೆಗಳು, ಕುಂದವೆನ್ನುವ ಹೂವು, ಕುಮುದ ಪುಷ್ಪಗಳು, ಕೋಪವನ್ನು ಹತ್ತಿಕ್ಕುವುದು, ನಿರ್ಧಾರ ತೆಗೆದುಕೊಳ್ಳುವುದು, ಜಕ್ಕಿನಿ ನಟನ, ದಂಡ ಲಾಸ್ಯ, ಛತ್ರಿಯನ್ನು ಹಿಡಿದುಕೊಳ್ಳುವುದು, ಶಂಖ, ಬಾಳೆಹೂವು, ನಮಸ್ಕಾರ, ಚಿನ್ನ–ಬೆಳ್ಳಿ–ಮಿಶ್ರ ಲೋಹ ಮತ್ತು ಇನ್ನಿತರ ಪಾತ್ರೆಗಳು, ಗಡಿಗೆಯನ್ನು ತೆಗೆದುಕೊಂಡು ಹೋಗುವ ಹಾಲು ಮಾರುವವ, ಹೃದಯ, ಒಗ್ಗಟ್ಟು, ಛತ್ರಿಯನ್ನು ಹಿಡಿಯುವುದು, ಪ್ರಣಯಿಗಳ ತಾಂಬೂಲ ಗ್ರಹಣಾದಿಗಳನ್ನು ತೋರಿಸುವಾಗ ಬಳಸುತ್ತಾರೆ.

ಲಲಿತ ಲಹರಿ

# ಶೃಂಗಾರ (ಅಷ್ಟ) ನಾಯಕರ ಚಿತ್ತವೃತ್ತಿ

❑ ಶತಾವಧಾನಿ ಡಾ. ಆರ್. ಗಣೇಶ್

**ಅಷ್ಟನಾಯಿಕೆಯರ ಅವಸ್ಥೆಗಳಿಗೆ ಪ್ರತಿಕ್ರಿಯಾತ್ಮಕವಾಗಿ ಅಷ್ಟನಾಯಕಾವಸ್ಥೆಯನ್ನು ರೂಪಿಸಬಹುದಾಗಿದ್ದರೂ ಯಾವ ಲಾಕ್ಷಣಿಕರೂ ಅಂತಹ ಅಭೂತಪೂರ್ವ ಸಾಹಸಕ್ಕೆ ಕೈಹಾಕಿರಲಿಲ್ಲ. ಆದರೆ ಶತಾವಧಾನಿ ಡಾ. ಆರ್. ಗಣೇಶರು ನಾಯಕರ ಸಾಲಿಗೆ ಹೊಸ ಸಂವಿಧಾನವನ್ನೇ ನೀಡಿದ್ದು ; ನಾಯಕಭಾವಕ್ಕೆ ಲಕ್ಷಣಗಳನ್ನೂ, ಲಕ್ಷ್ಯಗೀತಗಳನ್ನೂ ರಾಗ–ತಾಳಬದ್ಧವಾಗಿ ರಚಿಸಿದ್ದಾರೆ. ಆ ಮೂಲಕ ಇದುವರೆವಿಗೂ ಲಕ್ಷಣಬದ್ಧವಾಗದ ಆದರೆ ಲಕ್ಷಣೀಕರಿಸಲು ವಿಫುಲಾವಕಾಶವಿರುವ ಅಂಶಗಳನ್ನು ಕ್ರೋಢೀಕರಿಸಲಾಗಿದೆ. ರಾಗ–ತಾಳಗಳನ್ನೂ ಸ್ವತಃ ಶತಾವಧಾನಿ ಗಣೇಶರೇ ಸಂಯೋಜಿಸಿದ್ದು ; ನಾಯಕರ ಕುರಿತಾಗಿ ಕಾಡುತ್ತಿರುವ ಸಾಹಿತ್ಯದ ಕೊರತೆಯನ್ನು ತುಂಬಿಕೊಡುವಲ್ಲಿ ಇದು ನಿಜಕ್ಕೂ ಅಸಾಧಾರಣ ಪ್ರಯತ್ನವೇ ಸರಿ. ಇದು ಸಾಂಸ್ಕೃತಿಕ ಪತ್ರಿಕಾಲೋಕದಲ್ಲಿ ಹಿಂದೆಂದೂ ಇಲ್ಲದಂತೆ ನೂಪುರಭ್ರಮರಿಯ ಪಾಲಿಗೆ ವಿಶೇಷವಾಗಿ ಒದಗಿದ್ದು ನಿಜಕ್ಕೂ ಒಂದು ಹೆಮ್ಮೆ ಮತ್ತು ಅಪೂರ್ವ ಅವಕಾಶ. ಪಾಂಥ, ಭಾಮೀನೀಭೀತನ ನಂತರ ಇದೀಗ ಅಭಿಸಾರಕನ ಸರದಿ. ನಮ್ಮ ಈ ಪ್ರಯತ್ನ ನಿಮ್ಮಿಂದ ಸದ್ವಿನಿಯೋಗವಾಗಲಿ...**

## ಅಭಿಸಾರಕ

ಪ್ರಿಯನ ಸಂದೇಶವನ್ನನುಸರಿಸಿ ಇಲ್ಲವೇ ಕಾಮಪೀಡಿತಳಾಗಿ ಆತನನ್ನು ತಾನಾಗಿಯೇ ಅರಸಿಕೊಂಡು ಹೋಗುವವಳು ಅಥವಾ ತನ್ನ ಪ್ರಿಯನನ್ನು ಸಖಿಯರ ಕಡೆಯಿಂದ ಕರೆಸಿಕೊಳ್ಳುವವಳು ಅಭಿಸಾರಿಕೆ. ಈಕೆ ಹೊರಡುವ ಪ್ರಕೃತಿಸಂದರ್ಭವನ್ನನುಸರಿಸಿ ಜ್ಯೋತ್ಸ್ನಾಭಿಸಾರಿಕೆ, ತಮಿಸ್ರಾಭಿಸಾರಿಕೆ, ದಿವಸಾಭಿಸಾರಿಕೆ ಮತ್ತು ವರ್ಷಾಭಿಸಾರಿಕೆಯೆಂಬ ಉಪವಿಭಾಗಗಳೂ ಇವೆ. ಈಕೆಗೆ ಅಭಿಮುಖವೆನಿಸುವ ನಾಯಕನೇ ಅಭಿಸಾರಕ. ಪ್ರಿಯೆಯನ್ನು ಸೇರಲು ಸಂಕೇತವನ್ನು ಅನುಸರಿಸಿ ಅಥವಾ ಸಂಕೇತಸ್ಥಲಕ್ಕೆ ಅಭಿಮಾನದಿಂದ ತೆರಳುವ ಸಾಮಾನ್ಯವಾಗಿ ಅವಿವಾಹಿತನೋ ಅಥವಾ ಉಪಪತಿಯೋ ಆಗಿರುತ್ತಾನೆ.

ಈ ಕಾವ್ಯಸಂದರ್ಭದಲ್ಲಿ ನೀಡಲಾದ ನಾಯಕನು ಮಧ್ಯಮಗುಣ, ಧೀರಲಲಿತ ಪ್ರವೃತ್ತಿಯನಾಗಿದ್ದು ; ಮನುಷ್ಯ ಸಹಜ ಮಿಶ್ರ ಭಾವನೆಗಳ ಪ್ರತಿರೂಪದಂತೆಯೇ ಕಾಣಿಸಿಕೊಳ್ಳುತ್ತಾನೆ. ಮಳೆ ಬರುವ ಸೂಚನೆಯಿದೆ, ಬಾನು ಗುಡುಗುತ್ತಲಿದೆ. ಇಂತಹ ಸಂದರ್ಭದಲ್ಲಿಯೇ ಸಂಕೇತಸ್ಥಲಕ್ಕೆ ಹೋಗುವ ಅವಸರ ನಾಯಕನಿಗೆ. ಆದರೆ ತನ್ನ ಕಾರ್ಯಕಾರಣವನ್ನು ತಿಳಿದವರು ಆಡಿಕೊಂಡು ನಗುವ ಸಾಧ್ಯತೆಗಳಿದ್ದಾಗ್ಯೂ ಜಗದಲ್ಲಿ ಆಡಿಕೊಳ್ಳುವವರನ್ನು ಕೇಳಲಾರೆನೆನ್ನುತ್ತಾನೆ ಅಭಿಸಾರಕ. ಮನಸ್ಸು ಇಚ್ಛೆಪಟ್ಟು ಸಾಗುವಲ್ಲಿ ಭಯ, ವಿಚಾರಣೆಯ ಹಂಗು ತನಗಿಲ್ಲವೆಂಬ ಧೈರ್ಯ ಆತನದ್ದು. ತನ್ನೊಂದಿಗಿರುವ ಸಖರು ತನ್ನನ್ನು ನೋಡಿ ಸೋಲು ನನಗೇ ಎಂದು ಆಡಿಕೊಂಡರೆ ಆಡಲಿ; ಏನೆಂದು ಬೇಕಾದರೂ ಹೇಳಲಿ; ಸೊಗಸೆಂಬುದು ಪ್ರಿಯೆಯ ರೂಪದಲ್ಲಿ ಅಲ್ಲಿರುವಾಗ, ಅದರ ಮಾಧುರ್ಯವನ್ನು ತಾನು ಬಲ್ಲೆನಾದ್ದರಿಂದ ಇಂತಹ ತರ್ಕ, ಬಿಗುಗಳೇ ನಗೆಪಾಟಲು ಎಂದು ಸಮರ್ಥಿಸಿಕೊಳ್ಳುತ್ತಾನೆ. ಅಷ್ಟಕ್ಕೂ ಆ ಭಾಮಿನೀಮಣಿಯೇ ನಿರ್ಭೀತೆಯಾಗಿರಲು ನನ್ನಂತವನಿಗೆ ಶಂಕೆ, ಅಳುಕುಗಳು ಶೋಭಾಸ್ಪದವಲ್ಲ. ನನ್ನನ್ನು ಆಡಿಕೊಳ್ಳುವ ಭೂಪರೆಲ್ಲರೂ ಅಸೂಯಾತಪ್ತರು; ಪ್ರೀತಿಯಲ್ಲಿ ಲಾಭವೇ ಇರುವಾಗ ನಷ್ಟದ ಮಾತೆಲ್ಲಿ? ಎಂದು ತನಗೆ ತಾನೇ ಸಮಾಧಾನಿಸಿಕೊಳ್ಳುತ್ತಾನೆ. ತನ್ನ ಚರ್ಯೆ, ಸಿಂಗಾರಗಳ ಬಗ್ಗೆ ಮತ್ತೊಮ್ಮೆ ನೋಡಿಕೊಂಡು ಸರಿಯಾಗಿದೆಯೇ, ಅನುರೂಪವೆನಿಸೀತೇ ಎಂದು ಆಗಾಗ ಪರಿಕಿಸುತ್ತಾನೆ. ಅತ್ತಲಿಂದ ಬಾನು ಗುಡುಗುತ್ತಲಿದೆ. ಎಲ್ಲಿ ತನ್ನ ಪ್ರಿಯೇ ತೊಯ್ದು ಹೋದಾಳೋ ಎಂಬ ಆತಂಕ ಬೇರೆ ಕಾಡುತ್ತಲಿದೆ. ವ್ಯರ್ಥ ಯೋಚನೆಗಳ ನಡುವೆ ತಡ ಮಾಡುವುದು ಸರ್ವಥಾ ಸಾಧುವಲ್ಲ; ಆ ಕಾರಣ ಸೂಕ್ತವೂ ಅಲ್ಲ ಎಂದು ಆತನ ಮನ ನುಡಿದಲ್ಲಿಗೇ ಪ್ರಣಯದ ಬೆಂಬತ್ತಿ ಆತನ ಮನಸ್ಸು ಹೆಜ್ಜೆಯನ್ನು ವೇಗವಾಗಿಸುತ್ತದೆ.

ಇಲ್ಲಿ ರತಿ ಸ್ಥಾಯಿಭಾವ. ನಾಯಕನ ಪ್ರಿಯೆ ಇಲ್ಲಿನ ಆಲಂಬನ ವಿಭಾವ. ಆಕೆಯ ಪ್ರೀತಿ–ನಡವಳಿಕೆ, ಸುತ್ತಮುತ್ತಲ ಪ್ರಕೃತಿ, ಜನರ ನಡವಳಿಕೆಗಳು ಈತನಿಗೆ ಉದ್ದೀಪನ ವಿಭಾವ. ಶಂಕೆ, ಆತಂಕ, ಅಭಿಲಾಷೆ, ಚಿಂತನ, ಅಂಜಿಕೆ, ಉತ್ಸುಕತೆ ಈತನಲ್ಲಿ ಕಂಡುಬರುವ ವ್ಯಭಿಚಾರಿಭಾವಗಳು. ಸಸ್ಯಸಂಪತ್ತಿನ ಭೂಮಿ, ನಿರ್ಜನಪ್ರದೇಶ, ಜೀರ್ಣಾವಸ್ಥೆಯ ದೇವಾಲಯ, ದೂತಿಯ ಮನೆ, ಅರಣ್ಯ, ನದೀ ತಟಾಕ, ಉಪವನ, ಉದ್ಯಾನ, ಸ್ಮಶಾನ, ಸಮುದ್ರತೀರ, ಸೇತುವೆ ಈತನ ಅಭಿಸರಣದ ಸ್ಥಾನಗಳು.

ಇಲ್ಲಿನ ಸಾಹಿತ್ಯವು ಕಂದಪದ್ಯದಿಂದ ಪ್ರಾರಂಭವಾಗಿ ನಾಯಕನ ಲಕ್ಷಣಗಳನ್ನು ವ್ಯಾಖ್ಯಾನಿಸುತ್ತದೆ. ನಂತರದ ಲಕ್ಷ್ಯಗೀತೆಯಲ್ಲಿ ನಾಯಕನಿಗೆ ಸಂಬಂಧಿಸಿದ ಉದ್ದೀಪನ ವಿಭಾವಗಳ ಸೂಕ್ಷ್ಮಗಳಿವೆ.

**ರಾಗ : ಮಾಂಡ್ ತಾಳ : ಖಂಡಛಾಪು**

ಅಭಿಸಾರಿಕೆಯಂ ಸೇರ–
ಲ್ಕಭಿಮಾನದೆ ಸೋಪಹಾರನಾಗಿದೊ ಸಾರ–
ಲ್ಕಭಿಲಷಿಸುವ ಸಂಕೇತ–
ಕ್ಕಭಿಮುಖನಭಿಸಾರಕಾಖ್ಯನಾಯಕನೀತಂ ॥

ಎನಗೇಕೆ ಭಯಕಾರಣ– ವಿಚಾರಣ
ಮನದಾಣ್ಮನೆಡೆ ಸಾರಲು– ಯಾವಾಗಲು ॥ಪ॥

ಜಗದಾಡಿಕೆಯಕೇಳೆನಭಿಜಾತರಿಗೆ ಸೋಲೆ–
ನಗಡೆಂದುಕೊಳ್ಳಲಿ ಸಖರೆಲ್ಲರು ।
ಸೊಗಸಲ್ಲಿ ಸಂದಿರೆ ನಗೆಪಾಟಲೀ ತರ್ಕ,
ಬಿಗುಪೇಕೆ ? ನಾ ಬಲ್ಲೆನಾ ಸವಿಯನು ॥ 1 ॥

ಆ ಭಾಮಿನೀಮಣಿಯೆ ನಿರ್ಭೀತೆಯಾಗಿರಲು
ಶೋಭಾಸ್ಪದವೆ ಶಂಕೆ ?– ನಿರಂಕುಶಂಗೆ !
ಈ ಭೂಪರೆಲ್ಲರಸೂಯಾಭಿತಪ್ತರು
ಲಾಭವೊಂದೇ ಬೇಟದಲಿ– ನಷ್ಟವೆಲ್ಲಿ ? ॥ 2 ॥

ಬಿಡು ಬಿಡಿದೊ ತಡವಾದುದೆಡರಾಗಬೇಡ !
ಸಡಗರದ ಸಿಂಗಾರ – ಸರಿತಾನೆ ಎಲ್ಲ !
ಗುಡುಗುತ್ತಲಿದೆ ಬಾನು ; ಬಾಲೆ ನೀರಾದಾಳು !
ಕೊಡು ಕೈಗೆ ಪ್ರಣಯೋಪಹಾರ–ವಿಹಾರ ! ॥ 3 ॥

ADAMYA CHETANA
( Smt. Girija Shastry Memorial Trust)
ANNA | AKSHARA | AAROGYA

With
Best Compliments
From

**Smt. Tejaswini Ananthakumar**
*President*
*Admya Chetana*
*Bengaluru*





# 'ಜೀವಮಾನ ಸಾಧನೆ ಪ್ರಶಸ್ತಿ'ಗೆ ದೊರಕಿದ ರತ್ನ
# ವಿದುಷಿ ಲೀಲಾ ರಾಮನಾಥನ್

**ಪ್ರಾಂ**ಜಲ ಮನಸ್ಸಿನಿಂದ ನೃತ್ಯಕ್ಷೇತ್ರಕ್ಕೆ ಸೇವೆ ಸಲ್ಲಿಸಿದ; ಅಧ್ಯಯನ, ಪ್ರಯೋಗವೆರಡರಲ್ಲೂ ಸಮಾನಾಸಕ್ತಿ ಹೊಂದಿ ಗುರು–ಹಿರಿಯರಿಗೆ, ಸಮಕಾಲೀನರಿಗೆ ಮತ್ತು ಯುವಚೈತನ್ಯಗಳಿಗೆ ಸ್ಫೂರ್ತಿದಾಯಿಕವಾಗಿ ದುಡಿಯುತ್ತಿರುವ ಹಿರಿಯರಿಗೆ ನೂಪುರ ಭ್ರಮರಿ ನೃತ್ಯ ಸಂಶೋಧಕರ ಚಾವಡಿಯು ನೀಡುವ ಪುರಸ್ಕಾರವಿದು. ನಿರ್ಣಾಯಕ ಸಮಿತಿಯ ಸಮಷ್ಠಿ ಅಭಿಪ್ರಾಯದಲ್ಲಿ ನಿರ್ಧಾರಗೊಳ್ಳುವ ಈ ಪುರಸ್ಕಾರ 2013ರ ನೃತ್ಯ ಸಂಶೋಧನ ಸಮ್ಮೇಳನದ ಮೂಲಕ ಆರಂಭಗೊಳ್ಳುತ್ತಿದೆ. ಪ್ರಪ್ರಥಮವಾಗಿ ಈ ಪುರಸ್ಕಾರಕ್ಕೆ ಭಾಜನವಾಗುತ್ತಿರುವವರು ಬೆಂಗಳೂರಿನ ಹಿರಿಯ ನೃತ್ಯಕಲಾವಿದೆ ಶ್ರೀಮತಿ ವಿದುಷಿ ಲೀಲಾ ರಾಮನಾಥನ್.



ನೃತ್ಯಕಲಿಕೆಗೆ ಅಷ್ಟಾಗಿ ಪ್ರೋತ್ಸಾಹವಿರದಿದ್ದ ಕಾಲದಲ್ಲಿ ಬಡವಬಲ್ಲಿದರೆನ್ನದೆ ತಾವು ನೃತ್ಯ ಕಲಿಸಿದಷ್ಟೂ ಕಾಲ ವಿದ್ಯಾರ್ಥಿಗಳಿಂದ ಚಿಕ್ಕಾಸನ್ನೂ ಪಡೆಯದೆ ನಿಸ್ವಾರ್ಥಪ್ರೇಮದಲ್ಲಿ ಕಲೆಯನ್ನು ಪೋಷಿಸಿದವರು ಶ್ರೀಮತಿ ಲೀಲಾ ರಾಮನಾಥನ್. ತಾವು ನೀಡಿದ ನೃತ್ಯಪ್ರದರ್ಶನಗಳ ಆದ್ಯಂತವೂ ಪಕ್ಕವಾದ್ಯದವರನ್ನು ಪೋಷಿಸಿ ಕೂಡಾ ಆಯೋಜಕರಿಂದ ತನಗಾಗಿ ಸಂಭಾವನೆಯನ್ನೂ ಪಡೆಯಲು ಇಚ್ಛಿಸದೆ ಹೂವು–ಹಣ್ಣುಗಳ ಫಲವಂತಿಕೆಯಲ್ಲೇ ಜೀವನದ ಅರ್ಥವಂತಿಕೆಯನ್ನು ಕಂಡವರು. ವೃದ್ಧಾಪ್ಯದ ತೊಂದರೆಗಳ ನಡುವೆಯೂ ನೃತ್ಯ, ಕಲೆಯೆಂದಾಕ್ಷಣ ಆನಂದಭಾಷ್ಪವನ್ನೇ ಸುರಿಸುವ ಲೀಲಾ ಅವರದ್ದು ಕರ್ನಾಟಕದ ಪ್ರಬುದ್ಧ ಚಿಂತನೆಯ ನೃತ್ಯಗುರುಗಳ ಪೈಕಿ ಮೇಲ್ಪಂಕ್ತಿ.

ಕೋಲಾರ ಪುಟ್ಟಪ್ಪ, ಮೀನಾಕ್ಷಿ ಸುಂದರಂ ಪಿಳ್ಳೈ, ಮೈಲಾಪುರ ಗೌರಿ ಅಮ್ಮಾಳ್ ಮತ್ತು ಕಿಟ್ಟಪ್ಪ ಪಿಳ್ಳೈರಂತಹ ನೃತ್ಯಕ್ಷೇತ್ರದ ಅತಿರಥ–ಮಹಾರಥರಲ್ಲಿ ಪಳಗಿದವರು ಲೀಲಾ ರಾಮನಾಥನ್. ಗುರುವಿನ ಜ್ಞಾಪಕಾರ್ಥವಾಗಿ ಬೆಂಗಳೂರಿನಲ್ಲಿಯೇ 1970ರ ದಶಕದಲ್ಲಿ ಮೀನಾಕ್ಷಿ ಸುಂದರಂ ಸೆಂಟರ್ ಫಾರ್ ಪರ್‌ಫಾರ್ಮಿಂಗ್ ಆರ್ಟ್ಸ್‌ನ್ನು ಕಟ್ಟಿ, ಬೆಳೆಸಿ, ನಿರ್ದೇಶಕರಾಗಿ–ಗುರುಗಳಾಗಿ ದುಡಿದವರು. 1980ರ ದಶಕಗಳಲ್ಲಿಯೇ ಇವರ ನೃತ್ಯ ಕಾರ್ಯಕ್ರಮಗಳು ದೆಹಲಿ, ಕೊಲ್ಕತ್ತಾ ದೂರದರ್ಶನ ಕೇಂದ್ರಗಳಲ್ಲಿ ಪ್ರಸಾರಗೊಂಡಿತ್ತೆಂದರೆ ಇವರ ನೃತ್ಯಪ್ರಾವೀಣ್ಯತೆಯನ್ನು ಊಹಿಸಬಹುದು. 70–80ರ ದಶಕಗಳಲ್ಲಿ ಇವರು ನರ್ತಿಸಿದ ಅಪೂರ್ವವೆನಿಸುವ ಸಾಂಪ್ರದಾಯಿಕ ನೃತ್ಯಬಂಧಗಳು, ವರ್ಣಗಳು ಕೇಂದ್ರ ಮತ್ತು ರಾಜ್ಯದ ಅಕಾಡೆಮಿಗಳಲ್ಲಿ ವಿಡೀಯೋ ದಾಖಲೀಕರಣಗೊಂಡಿವೆ.

ಕೇವಲ ನರ್ತನವಷ್ಟೇ ಅಲ್ಲದೆ; ಅದಕ್ಕೆ ಸಹಸಂಬಂಧವೆನಿಸುವ ಬರೆವಣಿಗೆ, ನಿರ್ದೇಶನಗಳಿಗೆ ಆ ಕಾಲದ ಇತಿಮಿತಿಗಳಲ್ಲೇ ಜೀವ ತುಂಬಿದವರು ಲೀಲಾ ರಾಮನಾಥನ್. 90ನೇ ದಶಕದಲ್ಲಿ 'ನರ್ತನ' ಎಂಬ ಪುಸ್ತಕವನ್ನು ಬರೆದ ಲೀಲಾ ಅವರು; ವರ್ಣ, ಅಷ್ಟಪದಿ, ಪದ ಇತ್ಯಾದಿ ಹಲವು ನೃತ್ಯಬಂಧಗಳಿಗೆ ಮತ್ತು ಬುದ್ಧಚರಿತ, ಸೀತಾಪರಿಣಯ ಮುಂತಾದ ನೃತ್ಯ ನಾಟಕಗಳಿಗೆ ನೃತ್ಯಸಂಯೋಜನೆ–ನಿರ್ದೇಶನ ಮಾಡಿದ್ದಾರೆ. 1970–90ರವರೆಗಿನ ದಶಕಗಳಲ್ಲಿ ಲೀಲಾ ಅವರು ಹಲವು ಕಮ್ಮಟ/ಕಾರ್ಯಾಗಾರ/ವಿಚಾರಸಂಕಿರಣ/ವಿಶ್ವವಿದ್ಯಾನಿಲಯಗಳಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಪಾಲ್ಗೊಂಡು ನೃತ್ಯದ ಕುರಿತು ಉಪನ್ಯಾಸ ನೀಡಿದ್ದಾರೆ. 1980ರ ದಶಕಗಳಲ್ಲಿ ಕರ್ನಾಟಕ ನೃತ್ಯಕಲಾ ಪರಿಷತ್, ಸಂಗೀತ ಮತ್ತು ನೃತ್ಯ ಅಕಾಡೆಮಿ ಇತ್ಯಾದಿ ಸಂಘ–ಸಂಸ್ಥೆಗಳಲ್ಲಿ ಸೇವೆ ಸಲ್ಲಿಸಿದ್ದಾರೆ. ಲೇಖಿಕೆಯಾಗಿ ಹಿಂದೂ, ಡೆಕ್ಕನ್ ಹೆರಾಲ್ಡ್, ಟೈಮ್ಸ್ ಆಫ್ ಇಂಡಿಯಾ ಇತ್ಯಾದಿ ಪತ್ರಿಕೆಗಳಲ್ಲಿ ಮತ್ತು ಹೆಸರಾಂತ ನೃತ್ಯ–ಸಂಗೀತ ನಿಯತಕಾಲಿಕೆಗಳಲ್ಲಿ ತಮ್ಮ ವಿಚಾರಸರಣಿಗಳ ಬೆಳಕು ಕಾಣಿಸಿದ್ದಾರೆ. ಒಟ್ಟಿನಲ್ಲಿ ಅಧ್ಯಯನಶೀಲತೆ, ಶಾಸ್ತ್ರಪರಿಚಯ, ಪ್ರಾಯೋಗಿಕ ಗತಿಯನ್ನು ಸಮನ್ವಯಿಸಿದ ಮಹಿಳೆ ಲೀಲಾ ರಾಮನಾಥನ್.

ಪ್ರಶಸ್ತಿ–ಪುರಸ್ಕಾರಗಳ ವಶೀಲಿಯ ಬೆನ್ನು ಹಿಡಿಯದೆ ತಮ್ಮ ಕರ್ತವ್ಯನಿಷ್ಠೆಗೆ ಹೆಸರಾದ ಸಾಧ್ವಿ ಲೀಲಾ ರಾಮನಾಥನ್ ತಮ್ಮ ನಿಸ್ಪೃಹ ಜೀವನಕ್ಕೆ ಎಂದೆಂದಿಗೂ ಧನ್ಯರು. ಆದಾಗ್ಯೂ ಕೇಂದ್ರ ಸಂಗೀತ ಮತ್ತು ನಾಟಕ ಅಕಾಡೆಮಿ, ಕರ್ನಾಟಕ ಗಾನಕಲಾ

ಪರಿಷತ್, ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ, ಕರ್ನಾಟಕ ನೃತ್ಯಕಲಾ ಪರಿಷತ್, ಬೆಂಗಳೂರು ಗಾಯನ ಸಮಾಜದ ಸನ್ಮಾನ–ಪುರಸ್ಕಾರಗಳು, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಶಾಂತಲಾ ಪ್ರಶಸ್ತಿ ಒಲಿದುಬಂದಿವೆ. ಅವರನ್ನು ನೂಪುರಭ್ರಮರಿ ನೃತ್ಯ ಸಂಶೋಧಕ ಚಾವಡಿಯು ಜೀವಮಾನಸಾಧನೆಯ ಹಿನ್ನೆಲೆಯಲ್ಲಿ ನೀಡುವ ಪ್ರಶಸ್ತಿಯ ಘನತೆಗೆ ತಕ್ಕುದೆಂಬಂತೆ; ಪ್ರಥಮವರ್ಷಕ್ಕೇ ಆರಿಸಿ 'ನೂಪುರ ಕಲಾ ಕಲಹಂಸ'ವೆಂಬ ಅಭಿದಾನವನ್ನಿತ್ತು ಆದರಪೂರ್ವಕವಾಗಿ ಗೌರವಿಸಲು ಹೆಮ್ಮೆ, ಸಂತೋಷಪಡುತ್ತಿದೆ.

ಅವರ ಬಗ್ಗೆ **ಡಾ. ಕರುಣಾ ವಿಜಯೇಂದ್ರ** ಬರೆದ ಲೇಖನ ನಿಮಗಾಗಿ...ಇಲ್ಲಿದೆ...

ಎತ್ತರವಾದ ನಿಲುವು, ಬೆಳ್ಳಿ–ಕಪ್ಪು ಕೂದಲಿನ ಅಗಲವಾದ ಹರಡಿದಂತಹ ತುರುಬು, ಹಣೆಯನ್ನು ಸಂಪೂರ್ಣವಾಗಿ ಆವರಿಸಿರುವ ಅಗಲವಾದ ದುಂಡಾದ ಕುಂಕುಮ, ಕಪ್ಪು ಕಾಡಿಗೆಯೊಳಗಿನಿಂದ ಇಣುಕುವ ಕಾಂತಿಭರಿತ ಪಾರಿವಾಳದಂತಹ ಕಣ್ಣುಗಳು, ಮೊಗದ ತುಂಬಾ ಮಂದಹಾಸ, ಸರಳವಾಗಿ ಮೆದುವಾಗಿ ಬರುವ ಪದಪುಂಜಗಳಲ್ಲಿ 'see..dance is spiritual. It is divine. If you surrender to it then only you will enjoy' ಎಂದು ಕೈಯನ್ನು ಸುತ್ತುತ್ತಾ ಲಾಲಿತ್ಯವಾಗಿ ಮಾತನಾಡಿದ ಶೈಲಿ...ಯಾರೆಂದು ಗುರುತಿಸಲಾದೀತೇ? – ಯಾಕಾಗದು? 70ರ ದಶಕದಿಂದಲೂ ಅವರು ಬರೆಯುತ್ತಿದ್ದ ಡೆಕ್ಕನ್ ಹೆರಾಲ್ಡ್ ಬರೆಹಗಳನ್ನು ಓದುತ್ತಾ ಬೆಳೆದುಬಂದಿರುವ, ಅವರ ಪಾಠಗಳನ್ನು ಕೇಳಿ–ಕಲಿತಿದ್ದರೆ ಅವರು ಲೀಲಾ ರಾಮನಾಥನ್ ಎಂದು ಯಾರು ಬೇಕಾದರೂ ಗುರುತಿಸುತ್ತಾರೆ.

ಅರರೇ, ಹೌದಲ್ಲ..! ಇತ್ತೀಚೆಗೆ ಅವರನ್ನು ನಾವು ಯಾವ ನೃತ್ಯ ಕಾರ್ಯಕ್ರಮಗಳಲ್ಲೂ ಕಾಣುತ್ತಿಲ್ಲವಲ್ಲ? ಆದರೆ ನೃತ್ಯಕ್ಷೇತ್ರದಲ್ಲಿ ಮನೆಮಾತಾಗಿ ಸುಮಾರು 4 ದಶಕಗಳಿಗೂ ನಿರಂತರವಾಗಿ ನೃತ್ಯಕ್ಕೆಂದೇ ದುಡಿದಿರುವ ಲೀಲಾ ರಾಮನಾಥನ್ ಇಂದಿಗೂ ನರ್ತನವನ್ನು ತಮ್ಮ ಪ್ರಪಂಚದಲ್ಲಿ ಅಭ್ಯಸಿಸುತ್ತಾ ಸಂತೋಷವಾಗಿದ್ದಾರೆಂಬುದಂತೂ ಸತ್ಯ.

90ರ ದಶಕದಲ್ಲಿ ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ವಿದ್ಯಾರ್ಥಿಯಾಗಿದ್ದ ಕಾಲಕ್ಕೆ ನಮಗೆ ಲೀಲಾ ಅವರು ನೃತ್ಯದ ಉಪನ್ಯಾಸಗಳನ್ನು ನೀಡಲು ಬರುತ್ತಿದ್ದರು. ಅವರ ಮಾತು, ಧಾಟಿ, ಓಘಕ್ಕೆ 'ಸಾತ್ತ್ವಿಕ' ಪದದ ಬಳಕೆ ಬಹಳ ಸೂಕ್ತವಾಗಿ ಹೊಂದುತ್ತಿತ್ತು. 'ಸಾತ್ತ್ವಿಕ'ದ ಅರ್ಥ ತಿಳಿಯದಿದ್ದರೂ ಮರುಳಾಗಿದ್ದೆ. ಇಂದು ನನ್ನ ಅಧ್ಯಯನದ ಹಾದಿಯಲ್ಲಿ ತಿರುಗಿ ನೋಡಿದರೆ ಅವರ ಸಾಕಷ್ಟು ಉಪನ್ಯಾಸಗಳು ನನ್ನಲ್ಲಿ ಪರಿಣಾಮ ಬೀರಿರುವುದರ ಅರಿವಾಗಿದೆ. ಲೀಲಾಮೇಡಂ ಪ್ರಶಸ್ತಿ–ಪುರಸ್ಕಾರ–ಹಾರ–ತುರಾಯಿಗಳನ್ನು ಇಷ್ಟಪಡುವವರಲ್ಲ. ಆದರೂ ನೂಪುರ ಭ್ರಮರಿ ನೃತ್ಯಸಂಶೋಧಕರ ಚಾವಡಿಯಿಂದ ಪುರಸ್ಕಾರದ ನೆವದಲ್ಲಿ ಅವರನ್ನು ಗೌರವಿಸುವ ಸದವಕಾಶ ಒದಗಿಬಂದಿದ್ದನ್ನು ತಿಳಿಸಲು ಉತ್ಸುಕಳಾಗಿದ್ದೆ. ಅವರನ್ನು ಕಾಣಬೇಕೆಂಬ ತೀವ್ರ ತುಡಿತದಿಂದ ಭೆಟ್ಟಿಯಾಗಲು ತೆರಳಿದೆನಾದರೂ ಅಳುಕಿನಿಂದಲೇ ಅವರ ಮುಂದೆ ಕುಳಿತೆ. 'ನೆನಪಿದೆಯೇ' ಎಂದು ಕೇಳಿದರೆ ನನಗೇ ತಿರುಗಿಸಿ 'ನಿನಗೆ ನೆನಪಿದೆಯೇ' ಎಂದು ಪ್ರಶ್ನೆ ಹಾಕಿ ತಬ್ಬಿಬ್ಬುಗೊಳಿಸಿದರು. ಪೆಚ್ಚಾಗಿ ನಕ್ಕೆ. ಅವರೋ ಜೋರಾಗಿ ಮಗುವಿನಂತೆ ನಗುತ್ತಲೇ ಇದ್ದರು. ನಂತರ ಸಹಜವಾಗಿ ಮಾತಿಗಿಳಿದರು. ಅವರ ಮಗಳು ಮಾಳವಿಕಾ ಅಲ್ಲಿಯೇ ಪಕ್ಕದಲ್ಲಿ ಕುಳಿತಿದ್ದರು. ನಿಧಾನವಾಗಿ ಪುರಸ್ಕಾರದ ಬಗ್ಗೆ ಬಿನ್ನವಿಸಿ ಮಾತಾಡಿ ಒಪ್ಪಿಸುವ ಹೊತ್ತಿಗೆ ನಿಡಿದಾದ ಉಸಿರು ತನ್ನಿಂತಾನೇ ಹೊರಬಂದಿತ್ತು. ಅಂದು ಆ ಹದಗೊಂಡ ಹಿರಿಯ ಮನಸ್ಸು ಆರ್ದ್ರಗೊಂಡು ಕಣ್ಣುಗಳು ಹನಿಗೂಡಿದ್ದವು. ಸಂತೋಷದ ಪನ್ನೀರು ಕಣ್ಣಿಂದ ಜಿನುಗಿತ್ತು. ಮತ್ತೆ ನೃತ್ಯದ ಬಗೆಗಿನ ಮಾತುಗಳು ಆರಂಭವಾದವು. ಅವರ ವಯಸ್ಸಿನ ತೊಂದರೆಗಳನ್ನು ಗಮನಿಸಿ ಹೆಚ್ಚು ಕಾಡಬಾರದೆಂದು ನನ್ನಲ್ಲಿದ್ದ ಪ್ರಶ್ನೆಗಳನ್ನು ಮಾಳವಿಕಾರ ಕೈಗಿತ್ತೆ. ಅವರು ಅಮ್ಮನೊಂದಿಗೆ ಮಾತನಾಡಿ ಕಳಿಸಿದ ಉತ್ತರಗಳ ಸಾರಾಂಶ ಸ್ವರೂಪ ನಿಮ್ಮ ಮುಂದಿದೆ.

(Leela Ramanathan - One who has bestowed with the title 'Noopura Kalaa Kalahamsa' from Noopura Bhramari Dance Researchers' Forum for her life time contribution to the field of Dance. She belongs to an extremely illustrious family from Karnataka. Her grandfather Rajamantra Praveena HV Nanjundayya was the founder Vice Chancellor of the Mysore University and a founder of the Kannada Sahitya Parishat and her father C Bhaskaraiyya was the Deputy Auditor General of India. Leela Ramanathan has done her MA Honors in English Literature and won the Purna Krishna Rao Gold Medal. She was also one of the most popular teachers at the Maharani's college where she taught after her education. However her first love has always been dance and instead of pursuing her doctoral studies at Girton College, Oxford, she decided to dedicate her life to the pursuit of Indian Classical Dance. She has studied under some of the greatest Dance Maestros of all time; Bharata Natyam under Kolar Puttappa Pillai, Ram Gopal, Meenakshi Sundaram Pillai, Muthiah Pillai, Kitappa Pillai and Mylapore Gowri, Kathakali

from Chandu Panikar, Kathak from Bowri Prasad and Sohanlal and Orissi from Debu Prasad Das.

Leela Ramanathan has toured the world extensively as part of the first Cultural Delegation set up by Pandit Nehru under the leadership of Mrinalini Sarabhai and later with Ram Gopal. She has performed, lectured and taught all over India and across North and South America, Europe, the Middle East and Australia. Marriage to the late Brig. K Ramanathan took her all over the country as an army wife where she continued with her teaching and dancing. In 1972 she founded the Meenakshi Sundaram Center of Performing Arts in Bangalore under the auspices of the East West Education Trust. She is the Honorary Director of the school where she taught Bharatha Natyam.

She is a prolific writer and researcher in classical Indian dance forms with over 800 articles to her credit and book on the anvil. Smt Leela's innumerable articles on dance and its allied subjects published in leading newspapers like Deccan Herald, Times of India and dance journals were eagerly read by Art connoisseurs. She also published a book titled "Narthana" in the early 90s. In the 1980s her dance performances were telecast on Delhi and Kolkata Doordarshan. During this period, special, traditional varnams performed by her have been recorded by both central and state Academies for their archives. As a teacher, she has choreographed several Varnams, Ashtapadis and Padams, Dance dramas like Buddha Charitha and Seetha Parinaya. During this period, she was regular speaker at seminars, conferences and Universities on her favourite subject – Dance. In the 80s, she was an advisor, member of many local cultural bodies like the Karnataka Nritya Kala Parishath(President), Sangeethe Nritya Academy, Trustee of the East West Education Trust. She is also a member of various national and state level Dance Audition Boards.

She is the recipient of numerous awards and titles from organizations like the Karnataka Gana Kala Parishat, Bangalore Gayana Samaj, Karnataka Sangeetha Nritya Academy, Bangalore University, University Women's Association and the Karnataka Nritya Kala Parishat. The Karnataka Government awarded her the State Rajyotsava Award and the Shantala Award. Her interpretation of Varnams in Bharatha Natyam is renowned and they have been archived by the Central Sangeet Nataka Academy and Karnataka Sangeet Nritya Academy. )

- HOW COULD YOU MANAGE THE 'SWEET AND SOUR' DAYS AS DANCER?

  For me dance has been my life and I danced because I loved it; Not for any rewards or recognition. I also promised my father when I took up dance as a career that I would never take any money for my performances or teaching. And thanks to God's grace I was able to do just that. So all the money that my performances earned were donated to charity. That way I had the pleasure of not only doing something I loved but also helping various worthwhile causes. It has not been an easy journey but I an optimist and persevered to reach where I am today.

- HOW SOCIETY, PEOPLE, GOVERNMENT RESPONDED OR RECIPROCATED TOWARDS ART OF DANCE THEN AND NOW.

  When I started my career I knew it was going to be a hard road ahead. In those days it was taboo for girls from respectable families to not just learn dance but perform on the

stage. It was tough when I was learning from Kolar Puttappa, Ram Gopal and then Meenakshi Sundaram Pillai and Kittappa Pillai. But I was determined to follow my dreams and I did just that of course with the backing of first my parents and then my husband. And I am glad I did because it was pioneers like us who made dance socially acceptable today. Of course the pendulum has swung to the other extreme and we have every girl learning the dance and performing whether she has the talent or not.

For me dance has always been about spirituality and attaining the state of Godliness. I believe with my heart and soul in the Nayaka Nayika bhava and have striven towards reaching God whenever I dance. This is probably one of the reasons that I have never been a popular dancer catering to the senses. My dance has always catered to the intellect.

It is my belief that while Government can do a lot more they are hampered by bureaucracy and politics and hence their efforts never reach complete fruition.

- STUDY, RESEARCH, RECONSTRUCTION' COULD IT BE MANTRA FOR THE EVOLUTION, EXECUTION OF DANCE? DOES SCHOLARLY INPUTS STRENGTHENS THE ART OF DANCE TODAY?

I made the Varnams my speciality because according to me a Varnam combines Nritya, Nritta and Abhinaya of the highest order and gives the dancer a platform to innovate and create to her heart's content. I have always believed that you can be as creative in the classical styles as you can be in modern dance idioms, provided you are steeped in the technique and have done your research thoroughly.

I have always been an intellectual dancer who believed not just in learning the technique but also the theory of dance. I believe that all our classical dance forms are rooted in our history and culture and to be a complete dancer you need to be steeped in the theory of the dance. This is why through out my career of over 70 years I have lectured, taught and researched the myriad facets of classical dance in India. I have written extensively about it as well. In fact my daughter is in the process of getting my treatise on the dance in India published.

My contribution to the Pandanallur style of Bharata Natyam, which attracted me because of its pristine purity and majesty was the abhinaya content. If you want to create abhinaya you need to not just know but be steeped in the origins of the dance for which you need to research and understand how dance originated. The myths, the legends and the stories should be grist to the mill for any good composer and choreographer. How can you build a house without foundations?

- WHAT KIND OF AMBIENCE/ SCENARIO WOULD BE APT FOR THE ART OF DANCE , YOUR WISH.... YOUR DREAMS....

I believe that, to perform you need to go through the grind, from the basic thatta adavus. It takes 10 to 15 years of slogging to make a reasonable dancer. I quote my oft repeated adage to my students that there is no royal road to learning, it is 99% perspiration and 1% inspiration.

I do not subscribe to the current trend of instant learning and worse still of learning "items" without the necessary grounding or knowledge of the technique.

I am a strong believer in evolution and like all life forms dance has to evolve too. We are currently going through a period of uncontrolled growth and consequently a dilution of standards. But being an eternal optimist I believe that from this cauldron of changing styles and experimentation will evolve a strong classical stream which will endure for another 3000 years.

- YOUR MESSAGE ...YOUR FEELINGS TOWARDS THE LIFE TIME ACHIEVEMENT AWARD...

Thank you very much for this honor. I am sorry that I cannot be present here today to receive this award myself, but as they say the spirit is willing but the flesh is weak. When Karuna came to meet me she said something which was like nectar to a teacher. She said that I had inspired her and changed her entire thinking. It brought tears to my eyes. Thank you Karuna.

So thank you all and I would like to leave you with one message which is follow your heart with single-minded focus, passion and determination. And do it with dignity and grace. Do it for the joy of learning and knowledge. Fame and money is secondary.

God bless you all and thank you. ✪



**ನುಡಿ ನಮನ ಅಂಜಲಿ**



# ನೃತ್ಯಲೋಕದಿಂದ ಮರೆಯಾದ ಮಾಣಿಕ್ಯ ಪ್ರೊ॥ ಜಯಾ

❑ **ಎ.ಎನ್. ಸುಧೀರ್‌ಕುಮಾರ್,** ಬೆಂಗಳೂರು.



**‘ಛ**ಲ ಬೇಕು ಮನುಜಂಗೆ......’ ಎಂಬ ಶರಣರ ನುಡಿಯಂತೆ ಬದುಕಿನುದ್ದಕ್ಕೂ ತನ್ನ ಗುರಿಯತ್ತ ಆಶಾವಾದಿಯಾಗಿ ಆರ್ಥಿಕ ಸಂಕಷ್ಟದಲ್ಲೂ ಸ್ವಪ್ರಯತ್ನ, ಸತತ ಸಾಧನೆಯಲ್ಲಿ ವಿಶ್ವಾಸವಿಟ್ಟು ನೃತ್ಯಕಲೆಯನ್ನೇ ತನ್ನ ಸರ್ವಸ್ವವೆಂದು, ಅದಕ್ಕಾಗಿ ಅಕ್ಷರಶಃ ತನ್ನ ಜೀವನವನ್ನೇ ಮುಡಿಪಾಗಿಟ್ಟ ದಿಟ್ಟಮಹಿಳೆ ವಿದುಷಿ ಜಯ. ನೃತ್ಯಕ್ಷೇತ್ರದಲ್ಲಿನ ಎಲ್ಲಾ ಸವಾಲುಗಳನ್ನು ಎದುರಿಸುತ್ತ ಒಂದೊಂದೇ ಮೆಟ್ಟಿಲನ್ನು ಏರುತ್ತ ಬೆಂಗಳೂರು ವಿಶ್ವವಿದ್ಯಾಲಯದ ಪ್ರದರ್ಶನ ಕಲಾವಿಭಾಗದಲ್ಲಿ ಅತಿಥಿ ಉಪನ್ಯಾಸಕರಾಗಿ ಸೇವೆಸಲ್ಲಿಸಿ, ಬಳಿಕ ಜೈನ್ ಯೂನಿವರ್ಸಿಟಿಯಲ್ಲಿ ಉಪನ್ಯಾಸಕಿಯಾಗಿ ಕಾರ್ಯನಿರ್ವಹಿಸಿದ ಪ್ರೊ॥ ಜಯಾ ತನ್ನ ಕಾರ್ಯದಕ್ಷತೆಯಿಂದಾಗಿ ಅದೇ ವಿಶ್ವವಿದ್ಯಾಲಯದಲ್ಲಿ ಸಂಗೀತ–ನೃತ್ಯದ ಸ್ನಾತಕೋತ್ತರ ಪದವಿ ವಿಭಾಗದಲ್ಲಿ ಮುಖ್ಯಸ್ಥರಾದವರು. ಹೀಗೆ ಕರ್ನಾಟಕ ನೃತ್ಯ ಕ್ಷೇತ್ರವೇ ಹುಬ್ಬೇರಿಸುವಂತೆ ಬೆಳೆದು ನಿಂತ ಹಳ್ಳಿಯ ಹುಡುಗಿ, ಸಾಧನೆಯ ಮಾರ್ಗಮಧ್ಯದಲ್ಲಿಯೇ ದಿನಾಂಕ 22–12–2012 ರಂದು ವಿಧಿವಶರಾದುದು ಕರ್ನಾಟಕ ನೃತ್ಯ ಕ್ಷೇತ್ರಕ್ಕೆ ಭರಿಸಲಾಗದ ನಷ್ಟವೇ ಸರಿ.

ವೈಕುಂಠ ಏಕಾದಶಿಯ ಹಿಂದಿನ ದಿನವದು. ಅಂದು ತಮ್ಮ ಆರೋಗ್ಯದಲ್ಲಿ ಸ್ವಲ್ಪ ಏರುಪೇರಾಗಿರುವುದು ತಮ್ಮ ಗಮನಕ್ಕೆ ಬಂದಿದ್ದರೂ ಕೂಡ ಅಂದಿನ ಪರೀಕ್ಷಾಕರ್ತವ್ಯವನ್ನು ಮುಗಿಸಲು ಹಿಂದೇಟು ಹಾಕಿರಲಿಲ್ಲ. ಕಳೆದ ನಾಲ್ಕೈದು ದಿನಗಳಿಂದಲೂ ಅನ್ನ ಸೇರುತ್ತಿರಲಿಲ್ಲ ಎಂದು ದೇಹಾಲಸ್ಯದ ತೊಂದರೆಗಳನ್ನು ಸ್ನೇಹಿತರು, ಸಹೋದ್ಯೋಗಿಗಳಲ್ಲಿ ಹೇಳಿಕೊಂಡಿದ್ದರೂ ವೈದ್ಯರನ್ನು ಕಾಣಬೇಕೆಂಬ ಅವರ ಸಲಹೆಗೆ ಕಿವಿಕೊಟ್ಟಿರಲಿಲ್ಲ. ಕೆಲಸವನ್ನೆಲ್ಲಾ ಮಾಡಿಮುಗಿಸಿದ ನಂತರವೇ ತನಗೆ ವಿಶ್ರಾಂತಿ ಎಂದಿದ್ದರೂ ಕೂಡಾ! ಜೊತೆಗೆ ಮರುದಿನ ನಡೆಯಲಿದ್ದ ನೃತ್ಯ ಕಾರ್ಯಕ್ರಮದ ರಿಹರ್ಸಲ್ ಮುಗಿಸಿ, ಸಂಜೆ ಮನೆಯಲ್ಲಿ ನೃತ್ಯ ತರಗತಿಯನ್ನು ಹಾಗೂ ಮತ್ತೊಂದು ಕಾರ್ಯಕ್ರಮಕ್ಕೆ ವಿದ್ಯಾರ್ಥಿಗಳಿಗೆ ತರಬೇತಿಯನ್ನು ನೀಡುತ್ತಿದ್ದಾಕೆ ಕುಸಿದು ಬಿದ್ದಾಗಲೂ ಬಹುಷಃ ಅವರಿಗೇ ಅರಿವಿತ್ತೋ ಇಲ್ಲವೋ ಹೃದಯ ಪುಟಿಯುವುದನ್ನು ನಿಲ್ಲಿಸಲಿದೆ ಎಂದು! ಆಸ್ಪತ್ರೆ ತಲುಪುವ ವೇಳೆಗಾಗಲೇ ಪ್ರಾಣಪಕ್ಷಿ ಹಾರಿಹೋಗಿತ್ತು. ಒಟ್ಟಿನಲ್ಲಿ ಕೊನೆಯಗಳಿಗೆಯವರೆಗೂ ತಮ್ಮ ಆರೋಗ್ಯ, ವೈಯಕ್ತಿಕ ಬದುಕು, ಜೀವಕ್ಕಿಂತ ಕರ್ತವ್ಯ ನಿಷ್ಠೆಯನ್ನು ಪ್ರತಿಪಾದಿಸಿ ಸಾರ್ಥಕ ಬದುಕನ್ನು ಕಂಡ ಸಾಧಕಿ ಅವರು. ಒಂದರ್ಥದಲ್ಲಿ ಕೊನೆಯ ಉಸಿರಿರುವವರೆಗೂ ನೃತ್ಯಕ್ಷೇತ್ರಕ್ಕಾಗಿಯೇ ತನ್ನನ್ನು ಸಮರ್ಪಿಸಿಕೊಂಡು ನೃತ್ಯದ ಸಾಮೀಪ್ಯದಲ್ಲೇ ಅಂತ್ಯವನ್ನು ಕಂಡ ಅಪರೂಪದ ಕಲಾವಿದರಲ್ಲಿ ಇವರೂ ಒಬ್ಬರು.



ಹಾಸನ ಜಿಲ್ಲೆಯ ಸಕಲೇಶಪುರ ತಾಲ್ಲೋಕಿನ ಅರೆಹಳ್ಳಿ ಎಂಬ ಪುಟ್ಟಗ್ರಾಮದಲ್ಲಿ ಸಂಪ್ರದಾಯಸ್ಥ ಮಧ್ಯಮವರ್ಗದ ವೀರಶೈವ ಜಂಗಮ ಸಮುದಾಯದಲ್ಲಿ ಗೌರಮ್ಮ, ಗುರುಪಾದಯ್ಯ ದಂಪತಿಗಳ ನಾಲ್ಕುಜನ ಮಕ್ಕಳಲ್ಲಿ ಎರಡನೆಮಗಳಾಗಿ ಜನಿಸಿದವರೇ ಜಯಾ. ತಮ್ಮ ಊರಿನಲ್ಲಿ ಎಸ್.ಎಸ್.ಎಲ್.ಸಿ. ಶಿಕ್ಷಣದೊಂದಿಗೆ ಹಿಂದಿ ಭಾಷಾವಿಷಾರದ ಪರೀಕ್ಷೆಯನ್ನು ಯಶಸ್ವಿಯಾಗಿ ಪೂರೈಸಿಕೊಂಡರು. ಬಳಿಕ ಹೆಚ್ಚಿನ ಶಿಕ್ಷಣವನ್ನು ಪಡೆಯುವ ಗುರಿಯನ್ನು ಹೊಂದಿದ್ದರೂ ಮನೆಯಲ್ಲಿ ಮದುವೆಯ ಪ್ರಸ್ತಾಪ, ತಂದೆಯ ಮರಣ, ಬಾಲ್ಯದಿಂದಲೇ ನೃತ್ಯ ಮತ್ತು ನಾಟಕಗಳತ್ತ ಹೆಚ್ಚಿನ ಒಲವು. ಸಂಪ್ರದಾಯಸ್ಥರ ವಿರೋಧದ ನಡುವೆ ಶಾಲಾದಿನಗಳಲ್ಲಿ ವಾರ್ಷಿಕೋತ್ಸವ ಇತರ ಉತ್ಸವಗಳಲ್ಲಿ ನೃತ್ಯ, ನಾಟಕಗಳಲ್ಲಿ ಅಭಿನಯಿಸುವುದು, ಇತರ ಮಕ್ಕಳಿಗೂ ಕಲಿಸಿಕೊಡುವ ಪ್ರಯತ್ನಗಳು ನಡೆದಿದ್ದವು.



ಶಾಸ್ತ್ರೋಕ್ತವಾಗಿ ನೃತ್ಯ ಕಲಿಯಬೇಕೆಂಬ ಹೆಬ್ಬಯಕೆಯಿದ್ದರೂ ಅವಕಾಶಗಳಿಂದ ವಂಚಿತರಾಗಿದ್ದರು. ಕುಟುಂಬದ ಹಿನ್ನೆಲೆಯಲ್ಲಿ ಕಲೆಯ ಬಗೆಗಿನ ಅರಿವು, ಆಸಕ್ತಿ, ಒಲವಿನ ಕೊರತೆ. ಇಂತಹ ವಾತಾವರಣದಲ್ಲಿ ತನ್ನ ಕಾಲಮೇಲೆ ತಾನು ನಿಂತುಕೊಳ್ಳಬೇಕೆಂಬ ಮಹತ್ವಾಕಾಂಕ್ಷೆಯಿಂದ ಊರಿನಲ್ಲಿ ಹಿಂದಿಭಾಷೆಯನ್ನು ಕಲಿಸುವ ಪ್ರಯತ್ನವನ್ನು ಮಾಡಿದ್ದರು. ಆ ಕಾಲದಲ್ಲಿ ಶಿಕ್ಷಣದಲ್ಲಿ ಹಿಂದಿವಿರೋಧ ಚಳುವಳಿಗಳು ನಡೆಯತ್ತಿದ್ದು ಊರಿನಲ್ಲಿ ಪ್ರೋತ್ಸಾಹ ದೊರೆಯದೆ ಅಲ್ಲಿಯೂ ಯಶಸ್ಸನ್ನು ಸಾಧಿಸಲಾಗಲಿಲ್ಲ. ದೂರದ ಊರಿನಲ್ಲಿ ಹಿಂದಿ ಶಿಕ್ಷಕಿಯಾಗಿ ನೌಕರಿ ದೊರೆತಿದ್ದು ಹೆಣ್ಣುಮಗಳನ್ನು ಅಷ್ಟು ದೂರ ಕಳುಹಿಸಲು ಕುಟುಂಬದವರು ಮನಸ್ಸು ಮಾಡಲಿಲ್ಲ. ಈ ಎಲ್ಲ ಕಟ್ಟುಪಾಡುಗಳಿಂದ ತಾನು ಹೊರಬರದಿದ್ದರೆ ಜೀವನದಲ್ಲಿ ಏನನ್ನೂ ಸಾಧಿಸಲಾಗುವುದಿಲ್ಲ ಎಂಬ ನಿರ್ಧಾರಕ್ಕೆ ಬಂದ ಜಯ ತಮ್ಮ ಕುಟುಂಬದ ಪ್ರಬಲ ವಿರೋಧದ ನಡುವೆ ಉದ್ಯೋಗ, ಶಿಕ್ಷಣ, ಕಲೆಯನ್ನು ಅರಸಿ ಮಂಗಳೂರಿಗೆ ಪ್ರಯಾಣ ಬೆಳೆಸಿದರು. ಈ ದಿಟ್ಟ ನಿರ್ಧಾರವೇ ಜಯಾರವರ ಬದುಕಿನ ಚಿತ್ರಣವನ್ನೇ ಬದಲಾಯಿಸಿತು.

ಮಂಗಳೂರಿನ ಆಸ್ಪತ್ರೆಯೊಂದರಲ್ಲಿ ಚಿಕ್ಕ ಉದ್ಯೋಗ ಒಂದನ್ನು ಪಡೆದುಕೊಳ್ಳುವಲ್ಲಿ ಜಯಾ ಯಶಸ್ವಿಯಾದರು. ತನ್ನ ಚುರುಕುತನ, ಜಾಣ್ಮೆ, ವಹಿಸಿದ ಕೆಲಸದಲ್ಲಿನ ಶ್ರದ್ಧೆ, ಜವಾಬ್ದಾರಿ, ಶಿಸ್ತು, ಅಚ್ಚುಕಟ್ಟು ಈ ಎಲ್ಲ ಆದರ್ಶಗುಣಗಳಿಂದ ಆಡಳಿತ ಮಂಡಳಿಗೆ ಅಚ್ಚುಮೆಚ್ಚಿನವರಾದರು; ಬಲು ಬೇಗನೆ ಅದೇ ಅಸ್ಪತ್ರೆಯ ನಿರ್ವಹಣೆಯ ಜವಾಬ್ದಾರಿಯನ್ನು ತಮ್ಮ ಹೆಗಲಿಗೇರಿಸಿಕೊಂಡರು. ಇಷ್ಟಕ್ಕೇ ತೃಪ್ತರಾಗದೆ ಅರ್ಧದಲ್ಲಿ ನಿಂತ ಶಿಕ್ಷಣವನ್ನು ಮುಂದುವರಿಸಿದರು. ಪಿ.ಯು.ಸಿ. ಶಿಕ್ಷಣವನ್ನು ಮುಗಿಸಿ ಪದವಿಯನ್ನು ಪೂರೈಸಿದರು. ಶಿಕ್ಷಣದೊಂದಿಗೆ ಹಿರಿಯ ನೃತ್ಯ ಗುರುಗಳಾದ ಜಯಲಕ್ಷ್ಮಿ ಆಳ್ವ ಇವರಲ್ಲಿ ನೃತ್ಯ ಶಿಕ್ಷಣವನ್ನು ಪ್ರಾರಂಭಿಸಿದರು. ಇತಿಹಾಸ ಹಾಗೂ ಕನ್ನಡಸಾಹಿತ್ಯದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದರು. ನೃತ್ಯಕ್ಷೇತ್ರದಲ್ಲಿ ಹೆಚ್ಚಿನ ಸಾಧನೆಯನ್ನು ಮಾಡಲು ಬೆಂಗಳೂರನ್ನು ಆಯ್ದುಕೊಂಡರು. ತಮ್ಮ ಸಹೋದರಿಯರ ಹಾಗೂ ತಾಯಿಯ ಸಹಕಾರದೊಂದಿಗೆ ಎಂಬತ್ತರ ದಶಕದ ಕೊನೆಯಲ್ಲಿ ಬೆಂಗಳೂರಿಗೆ ಬಂದು ನೆಲೆಸಿದರು.

'ನೃತ್ಯವನ್ನು ನಂಬಿಕೊಂಡು ಜೀವನವನ್ನು ನಿರ್ವಹಿಸುವುದು ಕಷ್ಟ' ಎಂಬ ಸಹೋದರಿಯರ ಒತ್ತಾಯ ಹಾಗೂ ಪ್ರಯತ್ನದ ಮೇರೆಗೆ ನಾಲ್ಕಾರು ಪ್ರತಿಷ್ಠಿತ ಆಸ್ಪತ್ರೆಗಳಲ್ಲಿ ಮುಖ್ಯನಿರ್ವಾಹಕರಾಗಿ ಉದ್ಯೋಗ ದೊರೆಯಿತಾದರೂ 'ಪರಿಪೂರ್ಣಳಾಗಿ ತನ್ನನ್ನು ನೃತ್ಯ ಕ್ಷೇತ್ರದಲ್ಲಿ ತೊಡಗಿಸಿಕೊಳ್ಳುವುದು ಅಸಾಧ್ಯ'ಎಂಬ ಕಾರಣದಿಂದಾಗಿ ಆ ಉದ್ಯೋಗವನ್ನು ತಿರಸ್ಕರಿಸಿದರು. ಅಲ್ಲದೆ ತನ್ನ ಸಾಧನೆಗೆ ಅಡ್ಡಿಯಾಗಬಹುದೆಂಬ ಕಾರಣಕ್ಕಾಗಿ ಕುಟುಂಬವರ್ಗದವರ ಅಸಮಾಧಾನವನ್ನು ಲೆಕ್ಕಿಸದೆ ವೈವಾಹಿಕ ಜೀವನವನ್ನು ತ್ಯಾಗಮಾಡಿದರು.

ವಿದುಷಿ ಜಯಾ ಬೆಂಗಳೂರಿಗೆ ಬಂದ ನಂತರ ಭತರನಾಟ್ಯದಲ್ಲಿ ಸೀನಿಯರ್ ಹಾಗೂ ವಿದ್ವತ್ ಪರೀಕ್ಷೆಯನ್ನು ಪೂರೈಸಿಕೊಂಡರು; ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ನೃತ್ಯದಲ್ಲಿ ಸ್ನಾತಕೋತ್ತರ ಪದವಿಯನ್ನು ಗಳಿಸಿದರು. ಪ್ರಾರಂಭದ ದಿನಗಳಲ್ಲಿ ನೃತ್ಯ ಕ್ಷೇತ್ರದಲ್ಲಿ ತಮ್ಮ ಗುರುತನ್ನು ಮೂಡಿಸುವುದು ಅಷ್ಟು ಸುಲಭವಾಗಿರಲಿಲ್ಲ. ತಮ್ಮ ಒಡವೆಗಳನ್ನು ಮಾರಿ ಜೀವನವನ್ನು ನಿರ್ವಹಿಸುವ ಅನಿವಾರ್ಯತೆಯನ್ನು ಲೆಕ್ಕಿಸದೆ 'ನಾಟ್ಯ ದರ್ಪಣ' ಸಂಸ್ಥೆಯನ್ನು ಹುಟ್ಟುಹಾಕಿದರು. ಹಲವಾರು ಬಡಾವಣೆಗಳಲ್ಲಿ, ಗ್ರಾಮಾಂತರ ಪ್ರದೇಶಗಳಲ್ಲಿ ನೃತ್ಯತರಗತಿಗಳನ್ನು ಪ್ರಾರಂಭಿಸಿದರಲ್ಲದೆ ಸಾವಿರಾರು ವಿದ್ಯಾರ್ಥಿಗಳಿಗೆ ನೃತ್ಯವನ್ನು ಬೋಧಿಸಿದರು. ಹಲವಾರು ವರುಷಗಳ ಕಾಲ ಭರತನಾಟ್ಯವನ್ನು ಬೇಸಿಗೆಶಿಕ್ಷಣ ಶಿಬಿರದಲ್ಲಿ ಹೇಳಿಕೊಡುವ ಪದ್ಧತಿಯನ್ನು ಪರಿಚಯಿಸಿದರು. ದೇಶ ವಿದೇಶಗಳಲ್ಲಿ ಸುಮಾರು ಒಂದು ಸಾವಿರಕ್ಕೂ ಅಧಿಕ ನೃತ್ಯಕಾರ್ಯಕ್ರಮಗಳನ್ನು ನೀಡಿದ್ದಷ್ಟೇ ಅಲ್ಲದೆ; ವಚನಸಾಹಿತ್ಯವನ್ನಾಧರಿಸಿದ 'ವಚನಾಂಜಲಿ', ಬಾಹುಬಲಿವಿಜಯ, ರಾಮಾಯಣ, ಮೊದಲಾದ ನೃತ್ಯ ನಾಟಕಗಳನ್ನು ಸಂಯೋಜಿಸಿದ್ದಾರೆ. ಆರ್ಥಿಕ ಮುಗ್ಗಟ್ಟಿನಿಂದಾಗಿ ತಾವು ರಂಗಪ್ರವೇಶವನ್ನು ಮಾಡದಿದ್ದರೂ ಇವರ ಮಾರ್ಗದರ್ಶನದಲ್ಲಿ 20 ವಿದ್ಯಾರ್ಥಿಗಳು ರಂಗಪ್ರವೇಶವನ್ನು ಮಾಡಿಸಿದ್ದಾರೆ. ಅದರಲ್ಲಿ ಬಹಳಷ್ಟು ಮಂದಿ ಆರ್ಥಿಕವಾಗಿ ಹಿಂದುಳಿದವರೇ ಆಗಿದ್ದಾರೆ ಎನ್ನುವುದು ಗಮನಾರ್ಹ ಸಂಗತಿ.



ಪ್ರೊ|| ಜಯ ವ್ಯಕ್ತಿತ್ವದಲ್ಲಿನ ವಿಶೇಷತೆ ಎಂದರೆ ಅವರ ನೇರನುಡಿ. ಕಾರ್ಯನಿರ್ವಹಣೆಯಲ್ಲಿ ರಾಜಿಮಾಡಿಕೊಳ್ಳದ ಕರ್ತವ್ಯ ಬದ್ಧತೆ. ನೃತ್ಯಕ್ಕೆ ಸಂಬಂಧಿಸಿದಂತೆ ತಮಗೆ ತಪ್ಪು ಎನಿಸಿದ್ದನ್ನು ಯಾವುದೇ ಮುಲಾಜಿಲ್ಲದೆ ನೇರ ನುಡಿಗಳಿಂದ ಸಮರ್ಥವಾಗಿ ಖಂಡಿಸುವ ಗುಣ, ತಮ್ಮ ಕಾರ್ಯಸಾಧನೆಗಾಗಿ ಇತರರನ್ನು ಓಲೈಸದ ತಮ್ಮ ಧೋರಣೆ ಇವುಗಳಿಂದ ಜಯಾರವರು ನೃತ್ಯಕ್ಷೇತ್ರದಲ್ಲಿ ಕೆಲವರ ವಿರೋಧವನ್ನು ಕಟ್ಟಿಕೊಂಡಿರಬಹುದು; ಆದರೆ ಇದೆಲ್ಲಕ್ಕಿಂತ ಮಿಗಿಲಾಗಿ 'ಜಯಾಮೇಡಂ' ನೃತ್ಯ ಕ್ಷೇತ್ರಕ್ಕೆ ನೀಡಿದ ಕೊಡುಗೆಯನ್ನು ಪರಿಗಣಿಸಬೇಕು.

ನೃತ್ಯಕ್ಷೇತ್ರದ ಪ್ರಾಯೋಗಿಕ ಹಾಗೂ ಶಾಸ್ತ್ರ ವಿಭಾಗಗಳೆರಡರಲ್ಲೂ ಪಾಂಡಿತ್ಯವನ್ನು ಹೊಂದಿದ್ದ ಜಯಾರವರು; ನೃತ್ಯದ ಸಮಗ್ರ ವಿಚಾರಗಳನ್ನು ತಿಳಿದುಕೊಳ್ಳುವ ಉದ್ದೇಶದಿಂದಾಗಿ ಸಂಸ್ಕೃತ, ತಮಿಳು ಭಾಷೆಗಳನ್ನು ಅಧ್ಯಯನ ಮಾಡಿದ್ದರು. ಇದರೊಂದಿಗೆ ಇಂಗ್ಲೀಷ್ ಭಾಷೆಯ ಮೇಲಿನ ಉತ್ತಮವಾದ ಹಿಡಿತ, ಕೊಂಕಣಿ, ತುಳು, ಮಲೆಯಾಳಂ, ಕನ್ನಡ ಭಾಷಾಜ್ಞಾನದೊಂದಿಗೆ ಹಿಂದಿ ಭಾಷಾವಿಶಾರದ ಪದವಿಯನ್ನು ಜಯಾ ನೃತ್ಯಕಲೆಗೆ ಸಂಬಂಧಿಸಿದ ಅಧ್ಯಯನ, ಲೇಖನ ಹಾಗೂ ಪುಸ್ತಕಗಳನ್ನು ಮಂಡಿಸುವಲ್ಲಿ ಸಾರ್ಥಕವಾಗಿ ಬಳಸಿಕೊಂಡಿದ್ದಾರೆ. ನೃತ್ಯಕ್ಷೇತ್ರದಲ್ಲಿ ಪ್ರಚಲಿತವಿರುವ ಸಾಕಷ್ಟು ಇತರ ಭಾಷೆಗಳ ರಚನೆಗಳಿಗೆ ನಿಖರವಾದ ಅರ್ಥವನ್ನು, ರಚನೆಯ ಹಿನ್ನೆಲೆಯಲ್ಲಿನ ತರ್ಕಗಳನ್ನು, ಕಥಾಸಾರಾಂಶವನ್ನು, ಭಿನ್ನಾಭಿಪ್ರಾಯಗಳನ್ನು ಕುರಿತು ಬಹಳಷ್ಟು ಮಾಹಿತಿಗಳನ್ನು ಕಲೆಹಾಕಿದ್ದರಲ್ಲದೆ ; ಮಾಹಿತಿಗಳನ್ನು ಯಾಚಿಸಿದವರಿಗೆ ವಿವರವಾಗಿ ತಿಳಿಸಿಕೊಡುತ್ತಿದ್ದರು. ಸಂಗೀತವನ್ನು ಅಭ್ಯಾಸ ಮಾಡಿದ್ದು ನಟುವಾಂಗದ ನಿರ್ವಹಣೆಯಲ್ಲಿಯೂ ಸಿದ್ಧಹಸ್ತರಾಗಿದ್ದರು; ವಿದ್ಯಾರ್ಥಿಗಳಿಗೆ ನೃತ್ಯ ವಿದ್ಯಾಭ್ಯಾಸದ ಹಲವು ಆಯಾಮಗಳ ಬಗ್ಗೆ ಹೊಸ ಕನಸುಗಳನ್ನೂ ಕಟ್ಟಿದ್ದರು.

ಜಯಾ ಅವರು ಬರೆದ 'ಭರತನಾಟ್ಯ ಪರೀಕ್ಷಾ ಮಾರ್ಗದರ್ಶಿ' ಪುಸ್ತಕವು ಕನ್ನಡ ಹಾಗೂ ಇಂಗ್ಲೀಷ್ ಭಾಷೆಗಳಲ್ಲಿ ಮುದ್ರಿತವಾಗಿದ್ದು; ಕರ್ನಾಟಕದ ಉದ್ದಗಲಕ್ಕೂ ಪರಿಚಿತವಾಗಿದೆ. ವಿಶೇಷವೆಂದರೆ ಈವರೆಗೆ ಕರ್ನಾಟಕದಲ್ಲಿ ಹೆಚ್ಚು ಮಾರಾಟವಾದ ಕಲೆಗೆ ಸಂಬಂಧಿಸಿದ ಪುಸ್ತಕವು ಇದೇ ಆಗಿದೆ. ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯ ಜೂನಿಯರ್, ಸೀನಿಯರ್, ವಿದ್ವತ್‌ದರ್ಜೆ ಹಾಗೂ ಎಂ.ಎ. ನೃತ್ಯ ಪದವಿಯ ಪಠ್ಯಕ್ರಮವನ್ನು ಆಧರಿಸಿ ಸಮಗ್ರ ಮಾಹಿತಿಯನ್ನು, ಪ್ರಶ್ನೋತ್ತರದ ಮಾದರಿಯನ್ನು ಹೊಂದಿರುವ ಈ ಪುಸ್ತಕವನ್ನೇ ಹೆಚ್ಚಿನ ನೃತ್ಯಗುರುಗಳು ವಿದ್ಯಾರ್ಥಿಗಳು ಕೈಪಿಡಿಯಂತೆ ಅನುಸರಿಸುತ್ತಿರುವುದು ಜಯಾ ಅವರ ಹೆಚ್ಚುಗಾರಿಕೆ. ಈ ಪುಸ್ತಕ ಕರ್ನಾಟಕದಾದ್ಯಂತ ನೃತ್ಯಕ್ಷೇತ್ರಕ್ಕೆ ಜಯಾರವರನ್ನು ಪರಿಚಯಿಸುವಲ್ಲಿ ಮಹತ್ತರವಾದ ಪಾತ್ರವನ್ನು ವಹಿಸಿದೆ. ಇವರು ಬರೆದ ಮತ್ತೊಂದು ಪುಸ್ತಕ 'ನೃತ್ಯ ಲಕ್ಷಣಂ' ಗ್ರಂಥಕ್ಕೆ ಪ್ರತಿಷ್ಠಿತ ರಾಜ್ಯ ಅಕಾಡೆಮಿ ಪ್ರಶಸ್ತಿ ಲಭ್ಯವಾಗಿದೆ. ಇದರೊಂದಿಗೆ 'ನೃತ್ಯ ಕ್ಷೇತ್ರಕ್ಕೆ ವಚನಕಾರರ ಕೊಡುಗೆ' ಎಂಬ ಗ್ರಂಥವನ್ನು ಬರೆದಿದ್ದಾರೆ; ಮಲೇಶಿಯಾ, ಸಿಂಗಪೂರ್, ಥೈಲ್ಯಾಂಡ್, ಟರ್ಕಿ ಸೇರಿದಂತೆ ಹಲವಾರು ದೇಶಗಳಲ್ಲಿ ಅಂತರಾಷ್ಟ್ರೀಯ ಮಟ್ಟದ ಸೆಮಿನಾರ್‌ಗಳಲ್ಲಿ ಸಂಶೋಧನ ಲೇಖನಗಳನ್ನು ಮಂಡಿಸಿದ್ದಾರಲ್ಲದೆ, ಪ್ರಾತ್ಯಕ್ಷಿಕೆಗಳನ್ನು ನೀಡಿದ್ದಾರೆ. 'ನೃತ್ಯ ಕ್ಷೇತ್ರಕ್ಕೆ 12ನೇ ಶತಮಾನದ ವಚನ ಕಾರರ ಕೊಡುಗೆ' ಈ ಸಂಶೋಧನಾ ಪಿಎಚ್‌ಡಿ ಮಹಾಪ್ರಬಂಧವನ್ನು ಮಂಡಿಸುವ ಹಂತದಲ್ಲಿದ್ದರೂ ಕೂಡಾ !

ಜಯಾ ಇವರ ನೃತ್ಯ ಕ್ಷೇತ್ರದ ಮಹತ್ತರ ಕೊಡುಗೆಯನ್ನು ಗುರುತಿಸಿದವರು ಬಹಳ ಕಡಿಮೆ. ಅವರ ಧೋರಣೆಗಳನ್ನು ವೈಯಕ್ತಿಕವಾಗಿ ದ್ವೇಷಿಸಿದವರೇ ಹೆಚ್ಚು, ಅವರ ಸಾಧನೆಯನ್ನು ಗುರುತಿಸಿ ಸಾಕಷ್ಟು ಸಂಘ–ಸಂಸ್ಥೆಗಳು ಅವರಿಗೆ ಪ್ರಶಸ್ತಿಗಳನ್ನು, ಸನ್ಮಾನಗಳನ್ನು ನೀಡಿ ಗೌರವಿಸಿವೆ. ಆದರೆ ಸರ್ಕಾರದಿಂದ ಲಭಿಸಲೇಬೇಕಾದ ಪ್ರಶಸ್ತಿಗಳು ಲಭಿಸಲಿಲ್ಲ. ಕಡೆಯಪಕ್ಷ ನೃತ್ಯ ಅಕಾಡೆಮಿಯ ಪ್ರಶಸ್ತಿಯೂ ಜಯರನ್ನು ಅರಸಿ ಬರಲಿಲ್ಲ. ಕೊನೆಗೆ ಅವರ ನಿಧನದ ವಾರ್ತೆಯೂ ಪತ್ರಿಕೆಗಳಲ್ಲಿ ಕಾಣಿಸಲಿಲ್ಲ. ಶ್ರದ್ಧಾಂಜಲಿ ಸಭೆಗಳೂ ನಡೆಯಲಿಲ್ಲ!

ಇನ್ನಾದರೂ ಕಲೆಯ ಕ್ಷೇತ್ರ ವೈಯಕ್ತಿಕದ್ವೇಷ–ಸಂಕುಚಿತ ಮನೋಭಾವನೆಗಳನ್ನು ಬಿಟ್ಟು ಇವರ ಸಾಧನೆಯನ್ನು, ಕೊಡುಗೆಯನ್ನು ಪರಿಗಣಿಸಿ ಅವರಿಗೆ ಶ್ರದ್ಧಾಂಜಲಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕಾಗಿದೆ. 'ಪತ್ರಿಕಾ ಪ್ರಚಾರದಲ್ಲಿದ್ದವರು ಮಾತ್ರವೇ ಸಾಧಕ'ರೆಂಬ ಭ್ರಮಾಲೋಕದಿಂದ ಹೊರಬಂದು ನರ್ತಕಿಯಾಗಿ, ಸಂಶೋಧಕಿಯಾಗಿ, ದಕ್ಷ ಆಡಳಿತಗಾರಳಾಗಿ, ಲೇಖಕಿಯಾಗಿ, ಅದೂ ಯಾವುದೇ ಹಿನ್ನಲೆಯಿಲ್ಲದೆ ಇಷ್ಟು ಎತ್ತರಕ್ಕೆ ಬೆಳೆದ ಸಾಧಕಿಯ ಸಾಧನೆಯನ್ನು ಸ್ಮರಿಸುವ ಮೂಲಕ ಗೌರವಿಸುವುದು ಎಲ್ಲ ನೃತ್ಯಕಲಾವಿದರ ಕರ್ತವ್ಯವೂ ಹೌದು. ತನ್ಮೂಲಕ ಅಬ್ಬರದ ಪ್ರಚಾರವಿಲ್ಲದೆ ತೆರೆಯ ಮರೆಯಲ್ಲಿ ನೃತ್ಯ ಸೇವೆಯನ್ನು ಮಾಡುತ್ತಿರುವ ಅದೆಷ್ಟೋ ಕಲಾವಿದರಿಗೆ ಬೆಳಕಿಂಡಿಯನ್ನಾದರೂ ತೋರಿಸಿದಂತಾಗುತ್ತದೆ. ✯

ದೀವಟಿಗೆ

# ಆತ್ಮವೇ ಆವಾಹನೆಯಾಗುತ್ತಿದೆಯೆಂಬ ಅಭಿವ್ಯಕ್ತಿ : ಶಂಕರ್ ಕಂದಸ್ವಾಮಿ

–ಸಂ.



ಆತ ನರ್ತಿಸುತ್ತಿದ್ದರೆ 'ಯಾವುದೋ ಆತ್ಮ ಮೈಯ್ಯಲ್ಲಿ ಹೊಕ್ಕಿದೆ' ಎಂದು ಪ್ರೇಕ್ಷಕಪ್ರಭುಗಳಿಗೆ ಭಾಸವಾಗುವುದಾದರೆ ಅದಕ್ಕೇ ಮೂಲ ಶಂಕರ್ ಕಂದಸ್ವಾಮಿ ಎಂದು ನಿಸ್ಸಂದೇಹವಾಗಿ ಹೇಳಬಹುದು. ಎಂದಿನ ನೃತ್ಯಕಲಿಕಾಸ್ತರದ ಹೆಜ್ಜೆಗಳಿಂದ ಪ್ರತ್ಯೇಕಗೊಂಡಂತೆ ಆವಿರ್ಭವಿಸುವ ಪದವಿನ್ಯಾಸಗಳು; ಆಗಾಗ್ಗೆ ಆವಾಹನೆಯಾಗಿ ದಂಗುಬಡಿಸುವ ರೇಚಕಗಳು; ಮೈಯನ್ನೇ ನೃತ್ಯಕ್ಕೆ ಸಾಣೆ ಹಿಡಿಯುತ್ತಿರುವಂತೆ ತೋರುವ ಶ್ರಮ; ಎಷ್ಟು ಕುಣಿದರೂ ದಣಿವಾಗದಂತಹ ದೇಹದಾರ್ಢ್ಯತೆ–ಮನೋಬಲ, ಮಾರ್ಗೀ, ದೇಸೀ ಚಲನೆಯ ಬೆರಗು–ಚಮತ್ಕಾರದೊಂದಿಗೆ ಅಪ್ಪಟ ಆನಂದದಲ್ಲೂ ಮುಳುಗೇಳಬಹುದಾದ ಸಮನ್ವಯೀ ಸಾಧ್ಯತೆ...ಒಟ್ಟಿನಲ್ಲಿ ಕಣ್ಣು ಮುಚ್ಚಿ ಬಿಡುವುದರಲ್ಲೇ ಮಿಂಚೊಂದು ಮರೆಯಾದಂತಿರುತ್ತದೆ ಶಂಕರರ ಸಂಚಾರ.

ಇಂತಹ ಪ್ರಶಂಸೆ ಯುಕ್ತವಾದದ್ದು ಇತ್ತೀಚೆಗೆ ಬೆಂಗಳೂರಿನ ಎಡಿಎ ರಂಗಮಂದಿರದಲ್ಲಿ ವಿಆರ್‌ಸಿ ಅಕಾಡೆಮಿ ಮತ್ತು ಅನನ್ಯ ಕಲಾಸಂಸ್ಥೆ ಸಮಾಯೋಜಿಸಿದ ಮೂರು ದಿನಗಳ ಸಂಗೀತ–ನೃತ್ಯೋತ್ಸವ–2013ರ ಸಮಾರೋಪದಂದು. ಯಾವುದೇ ಲಾಭ–ನಷ್ಟಗಳ ಲೆಕ್ಕಾಚಾರಗಳಿಗಿಂತ ಮಿಗಿಲಾಗಿ, ಸರ್ಕಾರ–ಸರ್ಕಾರೇತರ ಸಂಘ–ಸಂಸ್ಥೆಗಳ ಅನುದಾನಗಳಿಂದ ಹೊರತಾಗಿ ಸ್ವಂತ ಪರಿಶ್ರಮವನ್ನೇ ಧಾರೆಯೆರೆದು ಹಮ್ಮಿಕೊಳ್ಳುವ ಇವೆರಡೂ ಸಂಸ್ಥೆಗಳ ಆಯೋಜನೆಗೆ ಸಾರ್ಥಕ ಸಮಾರೋಪ ಅಂದಾಗಿತ್ತು.

ಪ್ರಪ್ರಥಮವಾಗಿ ವಿಜಯವಸಂತ ರಾಗದ ಆದಿತಾಳದ ಮೂಲಕ ಅಡಿಯಿಟ್ಟ ಶಂಕರ್ ಕಂದಸ್ವಾಮಿ ನಂತರ ಕೈಗೆತ್ತಿಕೊಂಡದ್ದು ಲತಾಂಗಿ ರಾಗದ ಪ್ರಸಿದ್ಧವರ್ಣ 'ನೀ ಮನಮಿರಂಗಿ ವಂದರುಳ್ವಾಯ್'. ಯಾವುದೇ ಪ್ರಸಿದ್ಧ ಅಥವಾ ಬಹುಚಾಲ್ತಿಯಲ್ಲಿರುವ ನೃತ್ಯಬಂಧಗಳನ್ನು ಅಭಿನಯಿಸುವುದೆಂದರೆ ಅದು ಕಲಾವಿದನಿಗೊದಗುವ ಗುರುತರವಾದ ಸವಾಲು. ಈಗಾಗಲೇ ಹಲವು ಕಲಾವಿದರ ಅಭಿವ್ಯಕ್ತಿಯಲ್ಲಿ ನೃತ್ಯಬಂಧವೊಂದನ್ನು ಕಂಡ ಕಣ್ಣುಗಳಿಗೆ ಹೊಸತೆನಿಸುವ ನಿರೂಪಣೆಯನ್ನೀಯುವುದು ಅಷ್ಟು ಸುಲಭದ ಮಾತಲ್ಲ. ಆದರೆ ಈ ಹಿನ್ನೆಲೆಯಲ್ಲಿ ಶಂಕರ್ ಕಂದಸ್ವಾಮಿಯವರದ್ದು ಹಿಂದಿನ ನೆನಪುಗಳನ್ನು ನಾಚಿಸುವ, ಮರೆಮಾಚುವ ಮತ್ತೊಮ್ಮೆ, ಮಗದೊಮ್ಮೆ ನೋಡಬೇಕೆನಿಸುವ ಆಹ್ಲಾದಸರಣಿ. ಸಾಹಿತ್ಯದಿಂದ ಸಾಹಿತ್ಯಕ್ಕೆ ಜತಿಯ ಚೌಕಟ್ಟಿನ ಬಿಗು ವಿಚ್ಛೇದವಿದ್ದರೂ, ಅಡವುಗಳ ಸರಣಿಯಿದ್ದರೂ ಅದು ರಸಾಸ್ವಾದಕ್ಕೆ ತೊಡಕೆನಿಸದೇಹೋಗುವುದು ಬಹುಷಃ ಕಂದಸ್ವಾಮಿಯವರಿಗೆ ಒಲಿದ ವರ ! ಜೊತೆಗೆ ಪದಪದವನ್ನೂ ಬಿಡಿಸಿ ಅದಕ್ಕೆ ಹಸ್ತಾಭಿನಯವನ್ನಷ್ಟೇ ಪ್ರದರ್ಶಿಸುತ್ತಾ ಸಂಚಾರಿಭಾವಗಳಲ್ಲಷ್ಟೇ ಅಭಿನಯವನ್ನು ಗುಟುಕೀಕರಿಸುತ್ತಾ 'ರಸಪೇತಲ'ವಾಗುತ್ತಿರುವ ಇಂದಿನ ನೃತ್ಯ ವಾತಾವರಣಕ್ಕೆ ಪದಾರ್ಥಾಭಿನಯದಲ್ಲೂ ಗಟ್ಟಿತನವನ್ನು, ಹೊಸತನವನ್ನು ಕ್ಷಣಕ್ಷಣಕ್ಕೂ ಕೊಡಬಹುದು; ಆ ಮೂಲಕ ಪ್ರೇಕ್ಷಕ–ಕಲಾವಿದನ ನಡುವೆ ಬೆರಗಿನ ಸಂವಹನವನ್ನೂ, ಸಾಹಿತ್ಯ–ಅರ್ಥ ಸಾಂಗತ್ಯವನ್ನು ನೀಡಬಹುದು ಎಂಬುದನ್ನು ಕಲಿಯಬೇಕಿದ್ದರೆ ಅದು ಕೂಡಾ ಶಂಕರರಲ್ಲಿಯೇ ! ಒಟ್ಟಿನಲ್ಲಿ ರಸಶಿಖರಕ್ಕೆ ಪದಾರ್ಥಾಭಿನಯವೂ ನಮ್ಮನ್ನು ಕರೆದೊಯ್ಯಬಹುದಾದರೆ ಅದು ಕೇವಲ ಪದದ ಅರ್ಥವಷ್ಟೇ ಹೇಳುವ ಅಭಿನಯದ ಪರಿಧಿಯಲ್ಲಷ್ಟೇ ನಿಂತಿರುವುದಿಲ್ಲ ಎಂಬುದನ್ನು ಶಂಕರರನ್ನು ನೋಡಿಯೇ ಒಪ್ಪುವ ವಿಚಾರ. ಅದರಲ್ಲಿಯೂ ವಿಶೇಷವಾಗಿ ವರ್ಣದುದ್ದಕ್ಕೂ ಸುಬ್ರಹ್ಮಣ್ಯನ ರೂಪ–ಲಾವಣ್ಯ–ಹುಡುಗುತನವನ್ನು ಎಷ್ಟು ಚೆನ್ನಾಗಿ ಹಿಡಿದಿಟ್ಟುಕೊಂಡರೆಂದರೆ, ಆಗ ತಾನೇ ಹುಟ್ಟಿ ಬೆಳೆದ ಬಾಲಕನ ಮುಗ್ಧತೆ, ಪ್ರೌಢತೆ, ಶೌರ್ಯವನ್ನು ಮುದ್ದುಮುದ್ದೆನಿಸುವಂತೆ ಅನುಭವಿಸುವಷ್ಟು ! 'ಕಂದ'ನ ಎಳೆತನದ ಗತ್ತುಗಾರಿಕೆಗೆ 'ವ್ಹಾವ್' ಎಂಬ ಉದ್ಗಾರದಿಂದೀಚೆಗೆ



ಶಬ್ದಗಳು ನಿಲುಕುವುದಿಲ್ಲ. ಪಾರ್ವತಿಯ ತಾಯ್ತನದ ಪ್ರೀತಿ, ಶ್ರೀವಲ್ಲಿ–ದೇವಸೇನೆಯರ ಪ್ರೇಮದ ಅಂತರವನ್ನು ಏಕಕಾಲಕ್ಕೇ ಗರ್ಭೀಕರಿಸಿದ್ದನ್ನು ಗಮನಿಸಿದರೆ ಕಲಾವಿದನ ಸುಕೃತ ಪುಣ್ಯ ಸಾಕಷ್ಟಿದ್ದಿರಲೇಬೇಕು! ಕೆಳವರ್ಗದ ಭಕ್ತನೊಬ್ಬನ ಮೊರೆಗೆ ನಂದಿಯೇ ಬದಿಗೆ ಸರಿದು ಶಿವನ ದರ್ಶನಾನುಕೂಲ ಒದಗುವ ನಂದನಾರ್ ಚರಿತ್ರೆಯನ್ನು ಹೇಳುವ ನಾಟಕುರಂಜಿ ರಾಗದ ಕೀರ್ತನೆಯೊಂದಕ್ಕೆ ಶಂಕರರು ಭಾವಪರವಶರಾದರು; ಕರುಣಾಮೂರ್ತಿಯೆನಿಸಿದರು; ಅದ್ಭುತ, ಧನ್ಯತೆಗಳ ದರ್ಶನವೂ ಸಹೃದಯರಿಗೆ ಒಲಿಯಿತು. ನಂತರದಲ್ಲಿ ನಾಯಿಕಾಭಾವದ ಪದವೊಂದನ್ನು ಅಭಿನಯಿಸುವ ಸವಾಲನ್ನು ಮೊದಲಬಾರಿಗೆ ಎದುರಿಸುತ್ತಿದ್ದೇನೆಂದು ಶಂಕರ್ ಹೇಳಿಕೊಂಡದ್ದೇನೋ ನಿಜ. ಆದರೆ ನಾಯಿಕೆಯ ಮುಗ್ಧತೆ, ಕಾತರತೆಯಿಂದ ತೆಕ್ಕೆಗೆ ಸೆಳೆಯುತ್ತಲೇ ಏಕಕಾಲಕ್ಕೆ ಶಿವನ ಗಾಂಭೀರ್ಯವನ್ನು, ಕುಡಿಗಣ್ಣ ನೋಟದ ಮಾರ್ದವತೆಯನ್ನೂ ಅನುಭವಿಸುವಾಗ ಅದು ಜನ್ಮಜನ್ಮಾಂತರದ ಪುಣ್ಯವಿಶೇಷವೆಂದೇ ಕಂಡಿತ್ತು. ಕ್ಷಣಮಾತ್ರದಲ್ಲೇ ಸಿದ್ಧ ಎಂದು ಹೇಳಿಸಿದಂತಿತ್ತು. ! ಶಿವನ ಆಗಮನ, ನೋಟಕ್ಕೆ ಹಂಬಲಿಸುವ ವಾಸಕಸಜ್ಜಿಕೆಯ ಪರಕಾಯಪ್ರವೇಶದಲ್ಲಿ ಶಂಕರ್ ಭರತನಾಟ್ಯದಲ್ಲಿ ಪುರುಷಾಭಿವ್ಯಕ್ತಿಗೆ ಇರುವ ಸವಾಲು, ತೊಂದರೆಗಳ ಕೂಗಿಗೆ ಅಪವಾದದಂತೆಯೇ ಕಂಡರು.

ಈ ಎಲ್ಲ ನೃತ್ಯಸಂದರ್ಭಗಳಿಗೆ ಹೋಲಿಸಿದರೆ ಏರುಗತಿಯಲ್ಲಿ ಪರ್ಯಾಪ್ತವಾಗಬೇಕಾದ ತಿಲ್ಲಾನ ಸಪ್ಪೆಯೆನಿಸಿತ್ತು. ಮಧುರೈ ಕೃಷ್ಣನ್ ರಚನೆಯ ಮೋಹನರಾಗದ ತಿಲ್ಲಾನಕ್ಕೆ ಅಳವಡಿಸಿದ್ದ ಅಡೆಯಾರ್ ಲಕ್ಷ್ಮಣ್ ಅವರ ಕೊರಿಯೋಗ್ರಫಿಯನ್ನು ಯಥಾವತ್ತು ಹಾಗೆಯೇ ಶಂಕರ್ ಮೈಯೊಳಗೆ ಇಳಿಸಿಕೊಂಡರು. ಆದರೆ ಅದು ಅವರ ಬಿರುಸಿನ ಭಾವ–ಲಯಗಳಿಗೆ ಅದು ಒಪ್ಪುವಂತಿರಲಿಲ್ಲ. ಕೊನೆಯ ಮುಕ್ತಾಯವೊಂದಕ್ಕೆ 'ತನ್ನತನ' ಪ್ರಕಟವಾಗಿದ್ದು ಬಿಟ್ಟರೆ, ತಿಲ್ಲಾನ ವಿಶೇಷವೆನಿಸದೇ ಹೋಯಿತು. ಆದಾಗ್ಯೂ ಮೇರುಪ್ರಾಯರಾದ ಪ್ರತಿಭಾಸಂಪನ್ನರ ಇಂತಹ ಸಣ್ಣ–ಪುಟ್ಟ ರಾಜಿಗಳು ಸಹಜ ಮೈ–ಮನಸ್ಸನ್ನು ಒಳಗೊಳ್ಳದೇ ಹೋದರೆ ಹೇಗೆ ನರ್ತನಸಂದರ್ಭದ ತೊಂದರೆಗಳ ಸಾ'ದೃಶ್ಯ'ವಾಗುತ್ತದೆಯೆಂಬುದನ್ನು ತಿಳಿಯುವಲ್ಲಿ ನೆರವಾದದ್ದಕ್ಕೆ ತೃಪ್ತಿಪಟ್ಟುಕೊಳ್ಳಬಹುದು. ಹತ್ತರಲ್ಲಿ ಹನ್ನೊಂದನೆಯವರಾಗದ ಶಂಕರ್‌ನಂತಹ ಪುಟಿಯುವ ಚೆಂಡಿಗೆ ಎಂದಿನ ಭರತನಾಟ್ಯದ ನೃತ್ಯತಂತ್ರಗಳು ಒಪ್ಪುವುದು ಕೊಂಚ ತ್ರಾಸದಾಯಕವೇ ! ಒಂದುವೇಳೆ ಒಪ್ಪಿಸಿಕೊಂಡರೂ ಅದು ಬಲವಂತದ ಮಾಘಸ್ನಾನ ಆದೀತೇ ವಿನಾ ಮೊಗ್ಗು ಹೂವಾಗುವ ಕಲ್ಪನೆ ಹಿಸುಕಿಹೋಗುತ್ತದೆ. ಇಂತಹ ಅಭಿಪ್ರಾಯಕ್ಕೆ ಬರಲು ಕಾರಣ ಕೂಡಾ ಅವರದ್ದೇ ಆದ ನೃತ್ಯಸಂಯೋಜನೆಯ ವೈಶಿಷ್ಟ್ಯ ಮತ್ತು ನರ್ತನದ ಸೊಗಸು ಎಂಬುದೂ ಅವರ ಹೆಚ್ಚುಗಾರಿಕೆಯೇ !

ರೂಪಶ್ರೀ ಮಧುಸೂದನ್ ಅವರ ಅಸ್ಖಲಿತ ನಿರೂಪಣೆ ಕಾರ್ಯಕ್ರಮಕ್ಕೆ ಪ್ರಭಾವಳಿಯಾದರೆ; ಪ್ರಸನ್ನಕುಮಾರ್ ಅವರ ತಾಳದ ನುಡಿಸಾಣಿಕೆಯ ಬಿಗಿ, ಗಾಯನದಲ್ಲಿ ನಂದಕುಮಾರ್‌ರ ಒನಪು, ಮಾರ್ದಂಗಿಕರಾಗಿ ವಿ.ಚಂದ್ರಶೇಖರ್‌ರ ಕೈವಾರಿಕೆ, ವೇಣುಗಾನದಲ್ಲಿ ನಾಗಭೂಷಣ್‌ರ ಮಾಧುರ್ಯವೆಲ್ಲವೂ ಶಂಕರ್ ಕಂದಸ್ವಾಮಿಯರ ತನು–ಮನದ ಅಸಾದೃಶ್ಯ ಲಯಪ್ರಜ್ಞೆಗೆ ದನಿಗೂಡಿಸಿದವು.

ದೀವಟಿಗೆ

## ಕೂಚಿಪುಡಿ ಮತ್ತು ಕರಾವಳಿ ಯಕ್ಷಗಾನದ ತೌಲನಿಕ ಅಧ್ಯಯನದ ಆಕರವಾಗಬಲ್ಲ ಭರವಸೆ 'ಯಕ್ಷ ವಸಂತ'

–ಸಂ.

ಇತ್ತೀಚೆಗಷ್ಟೇ ಕರಾವಳಿಯ ಉಡುಪಿಯಲ್ಲಿ ಮೂರುದಿನಗಳ ಪರ್ಯಂತ ನಡೆದು ಸಮಾರೋಪಗೊಂಡ 'ಯಕ್ಷವಸಂತ' ಎರಡೂ ಕಲೆಗಳ ಸಾಮ್ಯ, ವೈರುಧ್ಯಗಳನ್ನು ಅರಿಯುವಲ್ಲಿ ಸಾಕಷ್ಟು ಚಿಂತನ–ಮಂಥನಗಳಿಗೆ ಸೇತುವಾಗಿ, ತೌಲನಿಕ ಅಧ್ಯಯನಕ್ಕೆ ಆಕರವಾಗಬಲ್ಲ ಭರವಸೆ ಕೊಟ್ಟಿತು. ಕರ್ನಾಟಕ ಯಕ್ಷಗಾನ ಮತ್ತು ಬಯಲಾಟ ಅಕಾಡೆಮಿ, ಬೆಂಗಳೂರಿನ ಶಾಂಭವಿ ನೃತ್ಯಶಾಲೆ, ಯಕ್ಷಗಾನ ಕಲಾಕೇಂದ್ರ, ಯಕ್ಷಗಾನ ಕಲಾರಂಗ, ಉಡುಪಿ ಎಂಜಿಎಂ ಕಾಲೇಜು, ಮಣಿಪಾಲ ಎಜ್ಯುಕೇಶನಲ್ ಅಕಾಡೆಮಿ– ಇವರ ಜಂಟಿ ಸಹಭಾಗಿತ್ವದಲ್ಲಿ ಎಂಜಿಎಂ ಕಾಲೇಜಿನ ರವೀಂದ್ರ ಮತ್ತು ಮುದ್ದಣ ಮಂಟಪ ದಲ್ಲಿ ಜನವರಿ 24, 25, 26ರಂದು ಪೂರ್ಣಕಾಲಿಕ ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿತ್ತು. ಸಭಾ ಕಾರ್ಯಕ್ರಮದ ಮುಖ್ಯ ಅತಿಥಿಗಳಾದ ಚಿನ್ನಪ್ಪ ಗೌಡ ಮತ್ತು ಲಕ್ಷ್ಮೀನಾರಾಯಣ ಕಾಶಿ ಅವರ ಮಾತುಗಳು ವಿಚಾರಪ್ರಚೋದಕವಾಗಿ ಹೊರ ಹೊಮ್ಮಿದರೆ; ತರುವಾಯ ಯಕ್ಷಗಾನದ ಸಂಗೀತದ ಕುರಿತ ಉಪನ್ಯಾಸ ಮತ್ತು ಪ್ರಾತ್ಯಕ್ಷಿಕೆಯೂ ಬೋಧಪ್ರದವಾಗಿದ್ದರೂ; ವಿಷಯ ಬಾಹುಳ್ಯದಿಂದಾಗಿ ಮೊಟಕುಗೊಳಿಸಬೇಕಾದ ಅನಿವಾರ್ಯತೆ ಅವರನ್ನು ಆಗಾಗ ಪೇಚಿಗೆ ಸಿಲುಕಿಸುತ್ತಿತ್ತು. ಕೂಚಿಪುಡಿಗ್ರಾಮದ ಪಾವನಿ, ಪವಿತ್ರ ಸಹೋದರಿಯರ ಕರ್ಣಾನಂದಕರವಾದ ಕೂಚಿಪುಡಿ ಸಂಗೀತದ ಪ್ರಾತ್ಯಕ್ಷಿಕೆ ಎಷ್ಟೊಂದು ಪರಿಣಾಮಕಾರಿ ಯಾಗಿತ್ತೆಂದರೆ ಮೂರು ದಿನವೂ ಆಗಾಗ ಅನುರಣಿಸುತ್ತಲೇ ಸಾಗಿ; ನೃತ್ಯಪ್ರದರ್ಶನಗಳಲ್ಲೂ ಅವರ ಛಾಯೆ ಹಿನ್ನೆಲೆಯಲ್ಲಿ ಕೇಳಬಾರದೇ ಎಂಬಷ್ಟು ಮೋಹಕವಾಗಿತ್ತು. ಇವೆರಡರ ಹಿನ್ನೆಲೆಯಲ್ಲಿ ನಡೆದ ಧರುವುಗಳ ಕುರಿತ ಚರ್ಚೆ ಮೇಲ್‌ಸ್ತರದ

ಅಭಿಪ್ರಾಯಗಳಿಗೆ ಸೀಮಿತವಾದರೂ ಅಧ್ಯಯನದ ಅಂಗಳವನ್ನು ನಿರ್ಮಾಣ ಮಾಡಿದ್ದವು. ಇವುಗಳಲ್ಲಿ ಶಾಸ್ತ್ರೀಯ, ಜನಪದ ಅವೈಜ್ಞಾನಿಕ ವರ್ಗೀಕರಣದಿಂದಾಚೆಗಿನ ಸೌಹಾರ್ದಯುತ ಕೊಡುಕೊಳ್ಳುವಿಕೆಯ ಮನೋವೃತ್ತಿ ಕೊನೆಗೂ ತೆರೆದುಕೊಂಡದ್ದು ಸ್ವಾಗತಾರ್ಹ.



ಇಡೀ ಮೂರು ದಿನದ ಕಾರ್ಯಕ್ರಮದಲ್ಲಿ 'ಹೈಲೈಟ್' ಆದದ್ದು ಡಾ. ಪಪ್ಪು ವೇಣು ಗೋಪಾಲ್ ಮತ್ತು ಡಾ. ಪ್ರಭಾಕರ ಜೋಷಿಯವರು ನಡೆಸಿಕೊಟ್ಟ ಅನುಕ್ರಮವಾಗಿ ಕೂಚಿಪುಡಿ ಮತ್ತು ಯಕ್ಷಗಾನದ ಹುಟ್ಟು–ಬೆಳೆವಳಿಗೆಗಳ ಕುರಿತ ಉಪನ್ಯಾಸ, ಸಂವಾದ, ಬಿರುಸಿನ ಚರ್ಚೆ–ಪ್ರಶ್ನೋತ್ತರಗಳು. ಈ ಗೋಷ್ಠಿಗಳು ಸಾಕಷ್ಟು ದ್ವಂದ್ವ, ಗೊಂದಲಗಳಿಗೆ ಸಮಾಧಾನ ತಂದಿತ್ತದ್ದಷ್ಟೇ ಅಲ್ಲದೆ; ಸದಭಿರುಚಿಯ ರಂಜನೆ, ಪೂರಕ, ಪ್ರೇರಕ ವಿಚಾರ–ವಿಶ್ಲೇಷಣೆಗಳ ಮಂಡನೆಗೆ ಅವಕಾಶವಾದವು. ನಂತರದ ಕೂಚಿಪುಡಿ ಯಕ್ಷಗಾನದ ಪೂರ್ವರಂಗ, ರಂಗಚಲನೆಗಳ ಪ್ರಾತ್ಯಕ್ಷಿಕೆ ಚೆನ್ನಾಗಿತ್ತಾದರೂ ತೃಪ್ತಿದಾಯಕವಾಗಲಿಲ್ಲ. ತೆಂಕುತಿಟ್ಟಿನ ದಶಾವತಾರಿ ಗೋವಿಂದ ಭಟ್ ಮತ್ತು ಹೆಸರಾಂತ ಸ್ತ್ರೀಪಾತ್ರಧಾರಿ ಕೋಳ್ಯೂರು ರಾಮಚಂದ್ರರಾಯರು ತಮ್ಮ ಇಳಿವಯಸ್ಸಿನಲ್ಲೂ ಆಶಾದಾಯಕವಾಗಿ ಹಿರಣ್ಯಕಶಿಪು–ಕಯಾದು ಮತ್ತು ಶಿವ–ದಾಕ್ಷಾಯಿಣಿ ಪ್ರಸಂಗದ ಪ್ರಮುಖ ಪದ್ಯಗಳಿಗೆ ಪೂರ್ಣಪ್ರದರ್ಶನವನ್ನೇ ಕೊಟ್ಟರು. ತೆಂಕುತಿಟ್ಟಿನ ಹೆಜ್ಜೆಗಾರಿಕೆ ಅರಿಯುವ ಪ್ರಾತ್ಯಕ್ಷಿಕೆಯ ನೆಲೆಯಲ್ಲಿ ಈ ಪ್ರದರ್ಶನ ಇರದಿದ್ದರೂ ಹಿರಿಯರು ತಮ್ಮ ಸಾಧ್ಯತೆಗಳಡಿಯಲ್ಲಿ ಪರಿಣಾಮಕಾರಿಯಾಗಿ ರಸಪ್ರತಿಪಾದನೆಯನ್ನು ಸಾಕ್ಷೀಕರಿಸಿದ್ದು ವಿಶೇಷ. ಯುವ ಉತ್ಸಾಹಿಗಳು ಈ ಕುರಿತಾಗಿ ಕೊಂಚ ಸ್ವಯಂಬದ್ಧತೆಯುಳ್ಳವರಾಗಿ ಮನಸ್ಸು ಮಾಡಿದ್ದಿದ್ದರೆ ಹಿರಿಯರ ಮಾರ್ಗದರ್ಶಕತ್ವಕ್ಕೆ ಇನ್ನಷ್ಟು ಅರ್ಥಪೂರ್ಣತೆ ಒದಗುತ್ತಿತ್ತು ಎಂದೆನಿಸಿ ಅರೆಕ್ಷಣಕ್ಕಾದರೂ ಪಿಚ್ಚೆನಿಸಿದ್ದು ಹೌದು. ಇದೇ ಮಾದರಿಯ ಪ್ರದರ್ಶನ ಮೂರನೇಯ ದಿನದ ಯಕ್ಷಗಾನ ಸ್ತ್ರೀವೇಷಗಳ ಕುರಿತ ಚರ್ಚೆಯ ಸಂದರ್ಭವೂ ಪುನರಾವರ್ತಿತವಾಗಿ 90ರ ಹರೆಯದ ಪಾತಾಳ ವೆಂಕಟರಮಣ ಭಟ್ಟರು ವಯಸ್ಸಿನ ತೊಂದರೆಗಳಿಂದಾಚೆಗೂ ಏದುಸಿರನ್ನು ನಿಯಂತ್ರಣಕ್ಕೆ ಆಗಾಗ ತಂದುಕೊಂಡು ನರ್ತಿಸುತ್ತಿದ್ದರೆ ; ತೆಂಕುತಿಟ್ಟಿನ ಕಲಾವಿದರ ಸಾಕ್ಷಿಪ್ರಜ್ಞೆ ಮಸುಕಾಯಿತೇ ಎಂದು ಕಾಡಿದ್ದು ದಿಟ. ಆದಾಗ್ಯೂ ಪೂತನಿ–ಯಶೋದೆಯರ ನಡುವಿನ ಸಂವಾದವನ್ನು ನಡೆಸಿಕೊಟ್ಟ ಗೋವಿಂದ ಭಟ್ ಮತ್ತು ಪಾತಾಳರ ಉತ್ಸಾಹ ಮತ್ತು ಪಾತಾಳರ ಸ್ತ್ರೀವೇಷದ ಕುರಿತಾದ ಸಂಶೋಧನಾತ್ಮಕ ಆವಿಷ್ಕಾರಗಳು, ತಲಸ್ಪರ್ಶಿ ವಿಚಾರಗಳು ದಾಖಲೀಕರಣಕ್ಕೆ ಕೊಡುಗೆ ಸಲ್ಲಿಸಿತು.

ಮೂರನೇ ದಿನದ ಪ್ರಥಮಾರ್ಧ ಯಕ್ಷಗಾನ ಕಲಾರಂಗದ ಗುರು ಬನ್ನಂಜೆ ಸಂಜೀವ ಸುವರ್ಣರ ನೇತೃತ್ವದಲ್ಲಿ ಭರ್ಜರಿಯಾಗಿಯೇ ಪ್ರಾರಂಭವಾಯಿತು. ಬಡಗುತಿಟ್ಟಿನ ಹೆಜ್ಜೆಗಾರಿಕೆ, ಪೂರ್ವರಂಗವನ್ನು ಸೂಕ್ತ ಉದಾಹರಣೆ, ನಿಯಮ–ನಿರ್ದೇಶನಗಳೊಂದಿಗೆ ಆಕರ್ಷಕವಾಗಿ ಅಧ್ಯಯನನಿಷ್ಠವಾಗಿ ಪ್ರಸ್ತುತಪಡಿಸಿದರು. ಆಗೆಲ್ಲಾ ಕಂಡದ್ದು ತೆಂಕುತಿಟ್ಟಿನ ಉತ್ಸಾಹಿಗಳ ಪ್ರಾತ್ಯಕ್ಷಿಕೆಯವೈರಾಗ್ಯ ! ಜೊತೆಗೆ ಕೂಚಿಪುಡಿ ಯಕ್ಷಗಾನಗಳ ಪೂರ್ವರಂಗವನ್ನು ಸಮರ್ಥವಾಗಿ ಬಿಂಬಿಸುವಲ್ಲಿ ಎದುರಾದ ಕಲಾವಿದರ ಧ್ಯೇಯದ ಕೊರತೆ ! ಯಕ್ಷಗಾನದ ಬದಲಾವಣೆ ಮತ್ತು ಬೆಳವಣಿಗೆಗಳ ಕುರಿತು ಡಾ.ಜಿ.ಎಲ್.ಹೆಗಡೆ ಬೆಳಕು ಚೆಲ್ಲಲು ಪ್ರಯತ್ನಿಸಿದರೂ ಯಕ್ಷಗಾನದ ಹಲವು ಸಾಧ್ಯತೆಗಳ ಕುರಿತ ಮಾತುಗಳು ಅಲ್ಲಲ್ಲೇ ಮುಚ್ಚಿಹೋಯಿತು. ತತ್ಸಮಾನವಾಗಿ ಹೊರಹೊಮ್ಮಬೇಕಿದ್ದ ಕೂಚಿಪುಡಿಯ ಕುರಿತಾದ ಮಾತುಕತೆಗಳು ಮೇಲೇಳಲೇ ಇಲ್ಲ. ಈ ಸಂಬಂಧ ಪ್ರೊ.ಬಿ.ಸೇತುರಾಂ ಮತ್ತು ಕೇಶವಪ್ರಸಾದ್ ಅವರ ಗೋಷ್ಠಿಗಳು ರದ್ದಾಗಿರುವ ಕಾರಣಗಳು ತಿಳಿದುಬರಲಿಲ್ಲ. ಆದರೂ ಮಧ್ಯಾಹ್ನದ ನಂತರ ವೇದಾಂತಂ ಸತ್ಯನಾರಾಯಣ ಶರ್ಮರ ಕುರಿತ ಸಾಕ್ಷ್ಯಚಿತ್ರವೊಂದೇ ಆವರೆಗಿನ ಕೂಚಿಪುಡಿಯ ಕುರಿತ ತೊಂದರೆಗಳನ್ನು ನಿವಾರಿಸಿಕೊಂಡು ಸದಭಿಪ್ರಾಯದ ಸಾರ್ಥಕ್ಯ ನೀಡಿತು. ಆದಾಗ್ಯೂ ಮೊದಲಿನೆರಡು ದಿನ ಕಾರ್ಯಕ್ರಮ ಪಡೆದುಕೊಂಡ ಓಘ ಮೂರನೇಯ ದಿನದ ಮಧ್ಯಾಹ್ನದ ನಂತರ ಕ್ರಮೇಣ ಇಳಿಮುಖವಾಗುತ್ತಾ ಸಾಗಿದ್ದು ಪ್ರೇಕ್ಷಕರ ನೆರೆಯುವಿಕೆಯಲ್ಲಿ ಭಾರೀ ವ್ಯತ್ಯಾಸ ಕಂಡುಬಂದಿತ್ತು. ಗೋಪಾಲಕೃಷ್ಣ ಕುರುಪ್ ಅವರ ತೆಂಕುತಿಟ್ಟಿನ ಭಾಗವತಿಕೆಯ ವೈವಿಧ್ಯ–ಸಾಧ್ಯತೆಗಳು ಭಾಗವತನ ಪ್ರತಿಭೆಯ ಅನಾವರಣವನ್ನೂ ಮಾಡಿಸಿದರೂ ಅಧ್ಯಯನಕ್ಕೆ ಪೂರಕವಾಗಿ ಬೇಕಾದ ಕೂಚಿಪುಡಿ ಕಲಾವಿದರ ಅನುಪಸ್ಥಿತಿ ಢಾಳಾಗಿ ಎದ್ದು ಕಾಣಿಸುತ್ತಿತ್ತು.

ಕರಾವಳಿಯ ಯಕ್ಷಗಾನ ಮತ್ತು ಕೂಚಿಪುಡಿಯ ಯಕ್ಷಗಾನದ ಪರಸ್ಪರ ಸಾಧ್ಯತೆಗಳನ್ನು ಅರಿಯುವಲ್ಲಿ ಇದು ಪ್ರಾರಂಭಿಕ ಹಜ್ಜೆಯಾದರೂ ಪ್ರೇಕ್ಷಕನಲ್ಲಿ ಇಳಿಸಂಜೆಯ ಹೊತ್ತಿನ ಪ್ರಯೋಗ–ಪ್ರದರ್ಶನಗಳು ಇಡಿಯ ದಿನದ ಚರ್ಚೆಗಳಿಗಿಂತ ಹೆಚ್ಚಿನ ಆನಂದ, ಆಸ್ವಾದ, ಅಭಿಪ್ರಾಯಗಳನ್ನು ತರುತ್ತವೆ. ಈ ಹಿನ್ನೆಲೆಯಲ್ಲಿ ಕೂಚಿಪುಡಿ ಪ್ರಾತ್ಯಕ್ಷಿಕೆಗಳನ್ನು ಮತ್ತು ಪ್ರದರ್ಶನಗಳನ್ನು

ಆಯೋಜಿಸುವಲ್ಲಿ ಇನ್ನೂ ಕೊಂಚ ಮಟ್ಟಿನ ಆಸ್ಥೆ ಇರುತ್ತಿದ್ದಿದ್ದರೆ ಕೂಚಿಪುಡಿಯನ್ನು ಪ್ರಪ್ರಥಮವಾಗಿ ನೋಡುವವರ ಮನದಲ್ಲೆದ್ದಿರಬಹುದಾದ ಸಾಕಷ್ಟು ಸಮಸ್ಯೆ, ವೀಕ್ಷಣೆಗೆ ಪ್ರೇಕ್ಷಕನಿಗೆ ಒದಗಿದ ಅದೆಷ್ಟೋ ಅಡ್ಡಿಗಳನ್ನು ನಿವಾರಿಸಿಕೊಳ್ಳಬಹುದಾಗಿತ್ತು. ಅಥವಾ ಕರಾವಳಿ ಯಕ್ಷಗಾನದ ನಡೆವಳಿಕೆಗಳಿಗೆ ಸಮೀಪದ್ದೆನಿಸುವ ಚಿಂದೂ ಯಕ್ಷಗಾನ ಕಲಾವಿದರ ಪ್ರಸ್ತುತಿ/ಪ್ರದರ್ಶನವಿರುತ್ತಿದ್ದಿದ್ದರೆ ಕೂಚಿಪುಡಿ ಮತ್ತು ಉತ್ತರಕರ್ನಾಟಕದ ಯಕ್ಷಗಾನ ಬಯಲಾಟಗಳ ವೈದುಷ್ಯಗಳು ಸ್ಪಷ್ಟವಾಗುತ್ತಿತ್ತು.

ಸ್ವತಃ ಕೂಚಿಪುಡಿ ಗ್ರಾಮದ ಕಲಾವಿದರ ನೃತ್ಯಪ್ರದರ್ಶನವಿದ್ದರೂ ಅಭ್ಯಾಸದ ಕೊರತೆ, ರಸಾಭಾಸ ಪ್ರಸಂಗ, ಹಿಮ್ಮೇಳದ ಅಪಸ್ವರಗಳು ಕಲಾವಿದರನ್ನಷ್ಟೇ ಅಲ್ಲದೆ ಸಹೃದಯರನ್ನು ಮೂರು ದಿನಗಳ ಪರ್ಯಂತವೂ ಬೆನ್ನಟ್ಟಿದ್ದು ವಿಪರ್ಯಾಸ. ಜೊತೆಗೆ ಭರತನಾಟ್ಯ ನೃತ್ಯವಿಭಾಗದಲ್ಲಿ ಪ್ರಚಲಿತವಾಗುತ್ತಿರುವ ಬಿಗುಪರಿಸರ ಕೂಚಿಪುಡಿಯ ಲಾಲಿತ್ಯದ ಮೇಲೂ ಗಾಢ ಪ್ರಭಾವ ಬೀರುತ್ತಿದೆಯೇನೋ ಎಂಬಲ್ಲಿಗೆ ಹಲಕೆಲವು ಸಾಕ್ಷಿಗಳೇ ಉತ್ತರವಾದವು. ಆದರೆ ಅದಕ್ಕೂ ಹಿಂದು–ಮುಂದಿನ ವೇಳೆಯಲ್ಲಿ ಪ್ರದರ್ಶಿತಗೊಂಡ ಕರಾವಳಿಯ ಯಕ್ಷಗಾನದ ಪ್ರಯತ್ನ ಹಾರುಧೂಳಾಗಲಿಲ್ಲವೆಂಬುದೊಂದೇ ಸಮಾಧಾನ. ಮೊದಲನೆಯ ದಿನದ ಕೊಂಡದಕುಳಿಯವರ ನೇತೃತ್ವದ ಪೂರ್ಣಚಂದ್ರ ಮೇಳದ ಯಕ್ಷಗಾನ ಪ್ರದರ್ಶನವು ಬಡಗಿನ ಯಕ್ಷಗಾನದ ಚೌಕಟ್ಟು, ಸಾಧ್ಯತೆಗಳನ್ನು ತೋರಿಸಬಹುದಾಗಿದ್ದ ಎಲ್ಲ ಸಾಧ್ಯತೆಗಳನ್ನು ಕಳೆದುಕೊಂಡು ಪ್ರಯತ್ನಶೂನ್ಯವಾಯಿತು. ಎರಡನೇ ದಿನದ ಧರ್ಮಸ್ಥಳ ಮೇಳದ ತೆಂಕು ಮತ್ತು ಮೂರನೇಯ ದಿನದ ಯಕ್ಷಗಾನ ಕಲಾರಂಗದ ಪ್ರದರ್ಶನಗಳು ಆಸ್ವಾದ ಕಾಪಿಟ್ಟುಕೊಂಡವು.

ಕಲೆ ಯಾವುದೇ ಮಟ್ಟದ್ದಾಗಿರಲಿ, ಹೆಚ್ಚಿನ ಶಿಸ್ತು ಆ ಕಲಾವರಣದ ಸಹಜ ವಾತಾವರಣವನ್ನೇ ಕಸಿಯುತ್ತವೆ. ಅಂತೆಯೇ ಹೆಚ್ಚಿನ ಸ್ವಾತಂತ್ರ್ಯವು ಸ್ವೇಚ್ಛೆಯಾಗಿ ಅಬದ್ಧಗಳಿಗೆ ಅವಕಾಶವನ್ನೀಯುತ್ತವೆ. ಆದರೆ ಶಿಸ್ತು ಮತ್ತು ಸ್ವಾತಂತ್ರ್ಯದ ಸಮಪಾಕವೊಂದೇ ಕಲೆಯ ಸೌಂದರ್ಯವನ್ನು, ಆಯುಸ್ಸನ್ನು ನೂರ್ಮಡಿಗೊಳಿಸುತ್ತವೆ. ಇದಕ್ಕೆ ಔಚಿತ್ಯ, ರಸ–ಧ್ವನಿ ವಿವೇಚನೆಯ 'ಲಿಟ್ಮಸ್ ಪರೀಕ್ಷೆ' ಅನ್ವಯವಾದಲ್ಲಿಗೆ ಸಹೃದಯ ಆನಂದ–ಸಮ್ಮೋಹನದಲ್ಲಿ ಮುಳುಗೇಳುತ್ತಾನೆ. ಇದನ್ನು ಅರ್ಥೈಸಿಕೊಳ್ಳದ ಹೊರತು ಯಾವುದೇ ಕಾರ್ಯಾಗಾರ/ಶಿಬಿರ/ಕಾರ್ಯಕ್ರಮವಾದರೂ ಸರಿ ದಾಖಲೀಕರಣಕ್ಕಷ್ಟೇ ಸೀಮಿತವಾಗುತ್ತವೆ.

ವಿಷಯಾಧಾರಿತವಾದ ಉಪನ್ಯಾಸಗಳು ಸ್ಪಷ್ಟವಾಗಿದ್ದವು. ಆದರೆ ಕರಾವಳಿಯ ಯಕ್ಷಗಾನ ಪಡೆದುಕೊಂಡ ಮೇಲ್ಪಂಕ್ತಿ ಕೂಚಿಪುಡಿಯ ಆವರಣಕ್ಕೆ ಸೂಕ್ತ ಕಲಾವಿದರು ಮತ್ತು ತಜ್ಞರ ಕೊರತೆಯಿಂದ ಒದಗಲಿಲ್ಲ. ಇದರೊಂದಿಗೆ ಸಂಜೆಯ ನಾಟ್ಯಪ್ರಸ್ತುತಿ ನಡೆಸಿಕೊಟ್ಟ ಕಲಾವಿದರ ಅನುಪಸ್ಥಿತಿಯಿಂದಾಗಿ ಪ್ರದರ್ಶನಾಧಾರಿತವಾದ ಚರ್ಚೆಗಳು, ಪ್ರಶ್ನೆಗಳು ಮೇಲೇಳಲು ಸಾಧ್ಯವಾಗಲೇ ಇಲ್ಲ. ಇದ್ದಿದ್ದರೆ ಆಯಾಯ ವಿಷಯಕ್ಕಷ್ಟೇ ಸೀಮಿತವಾಗಿ ಹೋದ ಉಪನ್ಯಾಸಗಳು ಹೆಚ್ಚಿನ ಅರ್ಥವಂತಿಕೆ ಪಡೆಯುತ್ತಿತ್ತು. ಸಂಜೆಯ ಪ್ರಸ್ತುತಿಯ ತರುವಾಯ ಮುಖದರ್ಶನಕ್ಕಾದರೂ ಕೂಚಿಪುಡಿ ಮತ್ತು ಯಕ್ಷಗಾನ ಪ್ರದರ್ಶನ ನೀಡಿದ ಕಲಾವಿದರು ಕಾಣಿಸಿಕೊಂಡು ತಮ್ಮ ಪ್ರದರ್ಶನದ ಔಚಿತ್ಯ, ಸಮಸ್ಯೆ, ಗುಣಾವಗುಣಗಳ ಬಗ್ಗೆ ದೃಷ್ಟಿ ಬೀರುತ್ತಿದ್ದಿದ್ದರೆ ಒಂದಷ್ಟು ಕಾಯಕಲ್ಪ, ಗುಣಮಟ್ಟದ ಬದಲಾವಣೆಗಳಿಗೋ ಹೇತುವಾಗುತ್ತಿತ್ತೇನೋ! ಹಾಗಾಗಿ ಆಹಾರ್ಯಾಭಿನಯ, ಪಾತ್ರೌಚಿತ್ಯಗಳು ಚರ್ಚೆಯ ಪ್ರಧಾನಸ್ಥಾನವನ್ನು ಪಡೆಯಲಿಲ್ಲ. ಹೆಜ್ಜೆಗಾರಿಕೆಯನ್ನೂ ಒಳಗೊಂಡಂತೆ ಚಲನೆಯ ಕುರಿತಾದ ವೈವಿಧ್ಯ, ಆಂಗಿಕದ ಬಗ್ಗೆ ಪ್ರಾತ್ಯಕ್ಷಿಕೆಗಳಿದ್ದವೇ ಹೊರತು ಆಳವಾದ ಚಿಂತನೆಗಳು ಪರಸ್ಪರ ಪಡಿಮೂಡಲೇ ಇಲ್ಲ. ಆದ್ದರಿಂದ ಇಂತಹ ಕಾರ್ಯಾಗಾರಗಳ ಹಿನ್ನೆಲೆಯಲ್ಲಿ ಕ್ರಮವತ್ತಾದ ಸಮ–ಸಮವೆನಿಸುವಂತೆ ವಿದ್ವಜ್ಜನಪೋಷಿತವಾದ ಮತ್ತು ಪ್ರಾಥಮಿಕವಾಗಿ ದೃಷ್ಟಿಸಲೇಬೇಕಾದ ಸಂವಿಧಾನಗಳನ್ನು ಹಾಕಿಕೊಳ್ಳುವ ಅಗತ್ಯ ಹೆಚ್ಚಿಗಿದೆ.

ಕಲಾವಿದರು ತಾವಾಗಿಯೇ ಮುಂದೆ ಬಂದು ಸ್ವಇಚ್ಛೆಯಿಂದ ಪಾಲ್ಗೊಳ್ಳದ ಹೊರತು ಇಂತಹ ಯೋಚನೆಗಳು ಕಲೆಗೆ ಅಗತ್ಯದ ಆವರಣವನ್ನಷ್ಟೇ ಸೃಷ್ಟಿಸಲು ಶ್ರಮಿಸುತ್ತವೆಯೇ ವಿನಾ ಕ್ರಾಂತಿಯನ್ನೆಬ್ಬಿಸುವಲ್ಲಿ ಹೆಚ್ಚಿನ ಒತ್ತಾಸೆ ನೀಡಲಾರವು ಎಂಬುದಂತೂ ದಿಟ. ಈ ವಿಪರ್ಯಾಸ ಕಾರ್ಯಕ್ರಮದುದ್ದಕ್ಕೂ ಕಂಡುಬಂದಿದ್ದು; ಯಕ್ಷಗಾನ ಕಲಾರಂಗದ ವಿದ್ಯಾರ್ಥಿಗಳನ್ನು ಹೊರತು ಪಡಿಸಿದರೆ ಯಕ್ಷಗಾನ ಮತ್ತು ಹಲವು ಸ್ತರದ ಕಲಾವಿದರು ಭಾಗವಹಿಸಿ ಪ್ರಯೋಜನ ಪಡೆದುಕೊಂಡಿದ್ದು ಇಲ್ಲವೇ ಇಲ್ಲವೆಂಬಷ್ಟು ಕಡಿಮೆ.

ಆದರೂ ಮೂರು ದಿನಗಳ ಕೂಚಿಪುಡಿ ಯಕ್ಷಗಾನ ಮತ್ತು ಕರಾವಳಿಯ ಯಕ್ಷಗಾನದ ಮೂರುದಿನಗಳ ತುಲನೆಯಲ್ಲಿ ಆಯಾಯ ನಾಟ್ಯಬಂಧಗಳ ಕೊಡುಕೊಳ್ಳುವಿಕೆಯ ಕಲ್ಪನೆಯನ್ನು ಜನರಲ್ಲಿ ಮೂಡಿಸಿ ಸೋದರಕಲೆಗಳನ್ನು ಗಮನಿಸುವ ದೃಷ್ಟಿ ಎಷ್ಟರ ಮಟ್ಟಿಗೆ ಅಪ್ಯಾಯಮಾನವಾಗಬಲ್ಲುದು ಎಂಬುದನ್ನು ಸ್ಪಷ್ಟಪಡಿಸಿತ್ತು. ಈ ಹಿನ್ನೆಲೆಯಲ್ಲಿ ಸಂಘಟಕರಿಗೆ ಅಭಿನಂದನೆಗಳು ಸಲ್ಲುತ್ತವೆ. ಈ ಕೊಡುಕೊಳ್ಳುವಿಕೆಗೆ ಹೆಚ್ಚಿನ ಅರ್ಥ ಒದಗುವುದು ಬಹುಷಃ ಕೂಚಿಪುಡಿ ಗ್ರಾಮಕ್ಕೂ ತೆರಳಿ ಕರಾವಳಿಯ ಯಕ್ಷಗಾನ ಕಲಾವಿದರು ತೆರಳಿ ಅಧ್ಯಯನ ಮಾಡುವುದಿದ್ದಲ್ಲಿ ಮಾತ್ರ. ಆ ಮೂಲಕ ಎರಡೂ ಕಲೆಗಳ ನಡುವೆ ಹೊಸಹಾದಿ ಹಾಕಿಕೊಟ್ಟು ಸಂಬಂಧಗಳನ್ನು ಬಲಪಡಿಸಿ ಸಾಧ್ಯತೆಗಳನ್ನು ಪರಿಶೀಲಿಸಬಹುದಾಗಿದೆ. ಅಂತಹ ವ್ಯವಸ್ಥೆಯನ್ನು ಮತ್ತಷ್ಟು ಆಸ್ಥೆಯಿಂದ ಯೋಜನಾಬದ್ಧವಾಗಿ ಇತ್ತಂಡಗಳೂ ಸಾಕಾರಗೊಳಿಸಿದರೆ ಸಮಗ್ರತೆ ಒದಗೀತು ಎಂಬುದೇ ಇಲ್ಲಿನ ಆಶಯ, ಹಾರೈಕೆ.

## ನಿಮ್ಮ ಬರಹ ನಮ್ಮ ಓದು...

ಶತಾವಧಾನದಂಥದ್ದೊಂದು ಮೇರು ಘಟನೆ ಒಮ್ಮೆಗೇ ನಡೆದು ಮುಗಿಯದೇ ಹೇಗೆ ವಿವಿಧ ಕ್ಷೇತ್ರಗಳಲ್ಲಿ ಅನುರಣನವನ್ನೆಬ್ಬಿಸು ತ್ತಲೇ ಹೋಗುತ್ತದೆಂಬುದಕ್ಕೆ ಇದು ಉದಾಹರಣೆ. ನಾಟ್ಯಾವಧಾನದ ನಿಮ್ಮ ಕಲ್ಪನೆ ಆಸಕ್ತಿದಾಯಕವಾಗಿದೆ. ಹಾಗೆಯೇ ಬರೆದದ್ದೇ ಬರಹವೆಂದು ಕೊಳ್ಳುವ ಈ ಕಾಲದಲ್ಲಿ, ಸಂಪಾದಕರ ಭಾಷಾಸೌಷ್ಟವಕ್ಕೆ ಮಾರು ಹೋದೆ. ಅಲ್ಲಿಲ್ಲಿ ಒಮ್ಮೊಮ್ಮೆ ಗರಿಬಿಚ್ಚಿ ಸುಮ್ಮನಾದ ಪರಿಕಲ್ಪನೆಗೆ ಹೊಸ ಗರಿ, ಕಸುವು, ಬಣ್ಣ ಕಟ್ಟುವ ನಿಮ್ಮ ಪ್ರಯತ್ನ ಯಶಸ್ವಿಯಾಗಲೆಂದು  ಬಯಸುತ್ತೇನೆ.

**– ಮಂಜುನಾಥ ಕೊಳ್ಳೇಗಾಲ, ಅವಧಾನ ಪೃಚ್ಛಕರು, ಬೆಂಗಳೂರು.**

ನಾಟ್ಯಾವಧಾನ– ಒಳ್ಳೆ ವಿಚಾರ. ಸಮಾನ ಮನಸ್ಕರನ್ನು ಸೇರಿಸಿ, ಯೋಚಿಸಿ ಕಾರ್ಯರೂಪಕ್ಕೆ ತನ್ನಿ. ಶುಭವಾಗಲಿ.

**– ಹರಿಹರ ಭಟ್, ಬೆಂಗಳೂರು.**

ಬಹಳ ಪಾಂಡಿತ್ಯಪೂರ್ಣವಾದ ಸಂಪಾದಕೀಯ. ಇಂತಹ ಸಂಪಾದಕೀಯವನ್ನು ಸದ್ಯ ನಾನೆಲ್ಲೂ ಕಲೆಯ ಕ್ಷೇತ್ರದಲ್ಲಿ ನೋಡಿಲ್ಲ. ತುಂಬಾ ಸಂತಸವಾಯಿತು. ಮನಸ್ಸು ತುಂಬಿ ಬಂದಿತು. ಅಂತೆಯೇ ನಾಟ್ಯಾವಧಾನದ ಕಲ್ಪನೆಯನ್ನು ಸಾಕಾರಗೊಳಿಸಲೇಬೇಕೆಂಬ ಹಪಹಪಿ ನನ್ನನ್ನು ಕಾಡುತ್ತಿದೆ. ಕಲೆಯ ಮತ್ತು ಕಲೆಯ ಬೇರೆ ಬೇರೆ ಆಯಾಮಗಳೆಡೆಗೆ ಮುಕ್ತವಾಗಿ, ನೇರವಾಗಿ ಬರೆಯುತ್ತಿರುವ ಸಂಪಾದಕರ ಪ್ರತಿಭೆ, ಧೈರ್ಯ ನನಗೆ ಬಹಳ ಮೆಚ್ಚುಗೆಯಾಯಿತು. ಕಲೆಯೆಡೆಗೆ ಸ್ವಯಂ ಹಮ್ಮಿಕೊಂಡ ನಿಮ್ಮ ಕರ್ತವ್ಯ ಸದಾ ಅಭಿನಂದನೀಯ. ಸರಿಯಾದ ಅವಕಾಶ, ಪ್ರತಿಭೆಯುಳ್ಳವರಿಗೆ ಅನುಕೂಲವೂ ಸಿಕ್ಕೀತು ಎಂಬ ಆಶಯ ನನ್ನದು.

**– ಅನಂತರಾಂ, ಹಿರಿಯ ಸಂಘಟಕರು, ಬಿಟಿಎಂ ಕಲ್ಚರಲ್ ಅಕಾಡೆಮಿ, ಬೆಂಗಳೂರು.**

Team ‘dwadasha’ is honoured with Korgi Shankaranaryana Upadhyaya’s beautiful write up. I won’t like to bracket it into critique. It has its own independent personality.

**-Dr. Ravindra Katoti, Bengaluru.**

Dwadasha Swara Sambharama- It was an awesome programme and a great write up by Korgi Shankaranaryana Upadhyaya. Katoti have raised our expectations. Looking forward to some great things in future.

**-Shankar Kulakarni, Bengaluru.**

Congrats for the wonderful presentation –Dwadasha Swara Sambharama. Though I was not able to be there on that day, I can imagine the way the presentation went along. I wish many more such innovations in the days to come.

**-Ananth Rao, Secundreabad.**

‘Prati Raga Rasodayada Shatamanada Sangeeta’- Nice work by Korgi Shankaranaryana Upadhyaya. But in the article, list of ragas- two (madyama swara) are missing, otherwise the article is (if it is called as critic/review) correct to our experience on live.

**-Manjunatha G.S, Bengaluru.**

ಪ್ರತೀರಾಗ ರಸೋದಯದ ಶತಮಾನದ ಸಂಗೀತ ಎಂಬ ಕೊರ್ಗಿ ಶಂಕರನಾರಾಯಣ ಉಪಾಧ್ಯಾಯರ ಬರೆಹ ಬಹಳ ಚೆನ್ನಾಗಿದೆ. ಅದ್ಭುತವಾದ ಕಲ್ಪನೆ. ಕಾರ್ಯಕ್ರಮದಲ್ಲಿ ಭಾಗವಹಿಸಿದವರ ಅನುಭವ ಅನನ್ಯವೇ ಸರಿ. ಭಾಗವಹಿಸಲಾರದವರಿಗೆ ಬೇಸರವೇ ಸೈ.

**– ನಂದಕಿಶೋರ್ ಬೀರಂತಡ್ಕ, ಮಂಗಳೂರು.**

**– ಅದಿತಿ ದೇಶ್‌ಪಾಂಡೆ, ಪುಣೆ**

**– ಶ್ಯಾಮ್, ಕಿರಣ್ ಅಂಚೆ, ಅಮಿತ್ ರವಿಕಿರಣ್, ನಾಗಭೂಷಣ್ ಹೆಗ್ಡೆ, ಪೂರ್ಣಮ್ಮ ಬಾಲ್ಗಂಚಿ, ಬೆಂಗಳೂರು.**

ವಾಗ್ದೇವಿಯ ಸಂಪೂರ್ಣ ಕೃಪೆಗೆ ಪಾತ್ರರಾಗಿರುವ ಕೊರ್ಗಿ ಶಂಕರನಾರಾಯಣ ಉಪಾಧ್ಯಾಯರ ದ್ವಾದಶ ಸ್ವರಸಂಭ್ರಮದ ವಿಮರ್ಶೆ ಅತ್ಯುತ್ತಮ ಪದಪುಂಜಗಳ ಹೂರಣದ ಹೋಳಿಗೆಯೇ ಸರಿ. ಕಾರ್ಯಕ್ರಮದ ಪ್ರತ್ಯಕ್ಷ ಸಾಕ್ಷಿಗಳು ಧನ್ಯರು. ಡಾ.ಗಣೇಶರಂತಹ ತಪಸ್ವಿಗಳ ಮಾತೆಲ್ಲ ಸಂಗ್ರಹಯೋಗ್ಯ ರತ್ನಗಳೇ ಆಗಿರುತ್ತವೆ.

**– ಸುಮಂಗಲಾ ರತ್ನಾಕರ್, ನೃತ್ಯಶಿಕ್ಷಕರು, ಮಂಗಳೂರು.**


ISO 9001:2008 COMPANY
916
B.I.S
ನಿಮಗಿಷ್ಟವಾದ
ಡಿಸೈನ್‌ಗಳ...
ಸಾಂಪ್ರದಾಯಿಕ, ಕರಾವಳಿ ಶೈಲಿಯ, ಕೊಡಗಿನ, ಹಾಗೂ ಡಿಸೈನರ್ ಆಭರಣಗಳ ಅಪೂರ್ವ ಸಂಗ್ರಹ.
ಬನ್ನಿ ಮುಳಿಯಕ್ಕೆ
ಮುಳಿಯ
ಚಿನ್ನ • ಬೆಳ್ಳಿ • ವಜ್ರ
1944
ಮುಳಿಯ ಕೇಶವ ಭಟ್ಟ & ಸನ್ಸ್
ಕೋರ್ಟ್ ರಸ್ತೆ, ಪುತ್ತೂರು
✆ 08251-230414
ಮಹದೇವಪೇಟೆ, ಮಡಿಕೇರಿ ✆ 08272-223916
ಮುಖ್ಯ ರಸ್ತೆ, ಗೋಣಿಕೊಪ್ಪಲ್ ✆ 08274-279916
www.muliyajewel.com
ಜ್ಯುವೆಲ್ಲರಿ ಡಿಸೈನರ್ ಬೂಟಿಕ್ : ಮಣಿಪಾಲ್ ಸೆಂಟರ್, ಬೆಂಗಳೂರು ✆ 080-25593916




# ಕರ್ನಾಟಕದ ನೃತ್ಯ ಕಲಾವಿದರ ಸಂಶೋಧನ ಸಂಬಂಧೀ ಅಭಿಪ್ರಾಯ ಸಮೀಕ್ಷೆ

**ನೂ**ಪುರ ಭ್ರಮರಿಯ ಪಾಲಿಗೆ ಮಾತ್ರವಲ್ಲ; ಕರ್ನಾಟಕದ ನೃತ್ಯ ಮತ್ತು ಸಂಶೋಧನೆಯ ಕ್ಷೇತ್ರಕ್ಕೂ ಇದು ಹೊಸದೆನಿಸುವ ಪ್ರಯತ್ನ. ನೃತ್ಯ ಮತ್ತು ಸಂಶೋಧನೆಯ ಕುರಿತಾದ ಪ್ರಶ್ನೆಗಳನ್ನು ಕೇಳಿ ಸಂದರ್ಶಿಸುವ ಮೂಲಕ ಕರ್ನಾಟಕದ ಪ್ರಚಲಿತ ನೃತ್ಯಗುರುಗಳ, ಕಲಾವಿದರ, ಸಾಹಿತಿಗಳ, ಸಂಘಟಕರ ಸಂವೇದನೆಗಳು ಎಳೆ ಎಳೆಯಾಗಿ ಹರಡಿಕೊಂಡಿವೆ. ಆ ಮೂಲಕ ಕಲೆಯೊಂದು ಸಾಗಬೇಕಾದ ನೆಲೆಯೆಡೆಗೆ ದಿಕ್ಸೂಚಿನೋಟವೂ ದೊರೆತಿದೆ. ಕರ್ನಾಟಕದ ಹಲವು ಭಾಗಗಳ ಆಯ್ದ ಹಿರಿಯ, ಅನುಭವೀ ಕಲಾವಿದರನ್ನು ಪಟ್ಟಿ ಮಾಡಿ ಸಾಕಷ್ಟು ಚಿಂತನ ಮಂಥನ ನಡೆಸಿ ಈ ಹೊತ್ತಿಗೆ ಅಗತ್ಯವಾದ ಉತ್ತರಗಳನ್ನು ಮನಗಂಡು ಎರಡೇ ಎರಡು ಪ್ರಶ್ನೆಗಳ ಮಿತಿಯೊಳಗೆ ಮಾತನಾಡಿಸಿ ಅವರ ಭಾವಾನುಭಾವದ ಭಾಷ್ಯದ ವೈವಿಧ್ಯವನ್ನು ಇಲ್ಲಿ ನೀಡಲಾಗಿದೆ. ಸಂಶೋಧನೆಯನ್ನು, ಕಲೆಯನ್ನು, ನೃತ್ಯದ ಭೂತ–ಭವಿಷ್ಯ–ವರ್ತಮಾನಗಳನ್ನು ಅವರವರ ಅನುಭವ, ಸಾಧನೆ, ನೆಲೆಗಳ ಮೂಲಕ ಕಟ್ಟಿಕೊಟ್ಟಿರುವ ವೈವಿಧ್ಯತೆಯಲ್ಲಿ ವರ್ತಮಾನದ ಸವಾಲು, ಇತಿಹಾಸದ ನಡೆಗಳ ವ್ಯಂಗ್ಯ, ಭವಿಷ್ಯದ ಪ್ರಶ್ನೆಗಳನ್ನು ಸಾಕ್ಷೀಕರಿಸಲ್ಪಟ್ಟಿದೆ. ಆ ಮೂಲಕ ನೃತ್ಯಕ್ಷೇತ್ರದ ಮನಸ್ಸುಗಳನ್ನು ಅರಿಯುವ ಹಂತಗಳು ಸಾದ್ಯಂತವಾಗಿ ಈಡೇರುತ್ತಲಿದೆ. ಆದರೆ ಇವೆಲ್ಲಾ ಅಷ್ಟು ಸುಲಭಕ್ಕೆ ಸಾಧಿತವಾದದ್ದಲ್ಲ. ಸಾಕಷ್ಟು ಸವಾಲು, ಸಮಸ್ಯೆ, ಅಲಭ್ಯತೆ, ನಿರಾಕರಣೆಗಳ ತಡೆಯೊಡ್ಡುಗಳು ಎದುರಾದರೂ ಸಾವರಿಸಿಕೊಂಡು ಮುನ್ನಡೆದಿದ್ದೇವೆ. ಮೊದಲ ಹೆಜ್ಜೆಗೇ ಎಲ್ಲವೂ ಸಾಧಿತವಾಗುವುದು ದುಸ್ತರವಾದರೂ; ಈ ಯೋಜನೆ ಮುಂದಿನ ಹಂತಗಳಲ್ಲೂ ಕ್ರಮಕ್ರಮವಾಗಿ ಮುಂದುವರಿಯಲಿದ್ದು ಈವರೆಗೆ ದೊರೆತ ಪ್ರತಿಕ್ರಿಯೆ ಮಾತ್ರ ಅನನ್ಯ, ಅನುಪಮ.

ಕಳೆದ ಬಾರಿ ನೃತ್ಯದ ಸಂಶೋಧನೆ–ಪುಸ್ತಕ–ಶಾಸ್ತ್ರಗ್ರಂಥ–ಪತ್ರಿಕೆ–ನಿಯತಕಾಲಿಕೆಗಳ ಸಮೀಕ್ಷೆಯನ್ನು ಕೈಗೊಂಡು ದಾಖಲೀಕರಣದ ನಿಟ್ಟಿನಲ್ಲಿ ಮಹತ್ತ್ವದ ಹೆಜ್ಜೆಯನ್ನಿಟ್ಟ ನೂಪುರ ಭ್ರಮರಿಯ ಸಾಧನೆ, ಹುರುಪು ಈ ವರುಷ ಮತ್ತೊಂದು ಆಯಾಮದಲ್ಲಿ ತೆರೆದುಕೊಂಡಿದ್ದು ; ಸಂಶೋಧನೆ ಮತ್ತು ಕಲೆಯ ತತ್ಕ್ಷಣದ ಅಗತ್ಯ–ಅನಿವಾರ್ಯತೆಗಳೆಡೆಗೆ ದೃಷ್ಟಿ ಬೀರುವಲ್ಲಿ ಇದು ಸಮರ್ಥ ಸಾಕ್ಷಿಯೆನಿಸಿದೆ. ಇಂಥದ್ದೊಂದು ಹೆಮ್ಮೆಯೆನಿಸುವ ಸಮಷ್ಠಿ, ಸಮಗ್ರ ಚಿಂತನೆಯನ್ನು, ಕಳಕಳಿಯನ್ನು ಉದ್ದೀಪಿಸುವ ಸಾರ್ವಕಾಲಿಕ ದಾಖಲೆಗೆ ಸಹಕರಿಸಿದ, ಕಲೆ ಮತ್ತು ಸಂಶೋಧನೆಯ ಕುರಿತಾದ ನೋಟವನ್ನಿತ್ತ ಗುರು/ಕಲಾವಿದರಾದಿಯಾಗಿ ಸರ್ವಮಾನ್ಯರಿಗೂ ಅನಂತ ಕೃತಜ್ಞತೆಗಳು. ಅಂತೆಯೇ ಈ ಪ್ರಯತ್ನವನ್ನು ಸಾಕಾರಗೊಳಿಸುವಲ್ಲಿ ಶ್ರಮಿಸಿದವರು ನಮ್ಮ ನೃತ್ಯ ಸಂಶೋಧಕರ ಚಾವಡಿಯ ಸದಸ್ಯಬಾಂಧವರು. ಅವರಿಗೆ ಅನಂತ ಅಭಿವಂದನೆಗಳು ಸಲ್ಲುತ್ತವೆ.– ಸಂ.

ಪ್ರಶ್ನೆಗಳು ಇಂತಿವೆ : ಪ್ರದರ್ಶಕ ಕಲೆಯಾದ ನೃತ್ಯದಲ್ಲಿ ಸಂಶೋಧನೆಯ ಅಗತ್ಯವಿದೆಯೇ? ಅವಶ್ಯಕತೆ ಇದೆಯೇ? ನಿಮ್ಮ ಅಭಿಪ್ರಾಯ ಏನು?

ನೃತ್ಯ – ಹಿಂದೆ, ಇಂದು ಮತ್ತು ಮುಂದೆ – ತಮ್ಮ ಅಭಿಪ್ರಾಯ ತಿಳಿಸಿ

**Questions used in opinion survey: Is research essential for a performing art like dance? If yes, what is your opinion? What is your opinion about the dance in the past, dance today and dance tomorrow?**

***Interviewer 1: Padmini Shreedhar, Bengaluru.***

**Dr. Maya Rao, Senior Kathak Guru/Academician, Bengaluru.**

1. I congratulate for the effort intiated by Noopura Bhramari; which I know since many years. I appreciate the young educated artistes who are dedicated and want to strive to preserve the art form.



Yes, Research for dance/ a performing art is very much necessary as it enhances quality, authenticity. To understand the nuances better, research is essential. An in-depth study of the story line or the theme is a must for every choreographer, As it has been, the Oral tradition in the families, down several generations have continued the practice of the art but has preserved the art form though many a dilution is visible and experienced, By oral tradition, many imery integral portant details of the techniques have been lost. The hereditary or family lineage gurus have preserved the traditions but sometimes when the younger generation is not too keen to take up the father's interest and profession, he/she might have stopped continuing and in the run loss to the art field has been done. In such cases research becomes very integral and essential to continue. Without the knowledge of the shastras many gurus have followed techniques and are surprised to be told that all that they do are recorded in the treatises. (Ex.- Didi's respected guruji was surprised to know the nomenclature of the hand gestures he was applying in his abhinaya o be spending hours together in the libraries for a performing art like were found in the treatises after didi studied them in deatail for him. He was indeed making fun of her to be spending hour together in the library for a performing art like dance!!!!) As the generation after 1950-60 are educated artistes, research has been possible and advantageous. To perform confidently without doubts, an in-depth study or research is necessary. I regret for Wajid Ali Shah, a legendary figure in the field of Kathak had around 360 ghats in practice during his period; But due to no academic work in later periods, only 10-20 ghats are in practice now. They have been lost in oral tradition.



The younger generation should take up book-reading, recording details to learn and develop interest in research and no depend on INTERNET which many a times gives wrong information.

2. In the past, the dance scene was only for creating awareness and for liesure activity. Next after independance, there was an explosion of dance activity with all orthodox families taking up art. Next the new generation took up dance seriously and got trained under gurus in the 70s and 80s. These dancers became gurus and continued with what they had learnt. Now a lot of dancers are experimenting with new themes, creative group works, doing good research and study before choreographing them. Simoutaneosly there is a group who churns out arangetrams like a machine, makes money and not bothers much about quality. Wrong information is also got without looking into proper scholorly sources. But, I am an optimist and beleives that classical dance will see a good bright future.

*Interviewer 2: Niveditha Shrinivas, Bengaluru.*

**Dr. Choodamani Nandagopal, Senior Research Scolar, Bengaluru.**

From my young age I had an analytical mind. My uncle was a scholar and his writings would be published. His achievements attracted me to get into research. Also, my father wanted me to do Ph.D. As a young girl when anybody asked what I wanted to become I would say, 'Ph.D'; without knowing what it meant !

Once I was performing at Arasikere and my teacher Guru Radhakrishna, took us to the Belur temple. The postures of the dance sculptures attracted me. When I asked few questions to my Guru, he said that I was not mature enough to understand. This made me immerse myself in the study various books.



The turning point was when my father was transferred to Gadag. The Saraswathi temple there influenced me. I started thinking if dance, sculpture, history be linked and studied. The post graduation in sociology did not support a research in dance which was my passion. So the outcome was another post graduation in history and archeology. This gave the base to research but I was also simultaneously performing. The last performance was in Belur as Shantala, a two and a half hour's ballet produced by Guru Radhakrishna and organized as part of the Tourist Week. This experience was fulfilling and then I started working for my Ph.D. There was neither a post graduation course nor a Ph.D. in dance at that time. Hence my study became interdisciplinary. From sculpture to history to literature, entire culture of Karnataka was studied. This gave a broad base for my work.

- **What would be your answer to the people who say 'what is the use of research if it is not exhibited on stage?' And what about the tradition? If any new attempt is made it is brushed aside saying it is against tradition** !

  Dance has history from 1600 years apart from the Vedas. There are traces of dance since then. From then to now, not even 15% of it has been brought to light. . When we trace the development, we come across many forms, styles, compositions. We need to avail and work on them. It will be a unique contribution. But one has to learn the basics from a Guru. This is must for a strong foundation. Then one can go for reconstruction. There are so many literatures, scriptures, paintings and even oral traditions which have not been opened up till now. What is wrong in bringing of the old tradition back while keeping the classical format simultaneously? If the outcome is out of research, it gives a conviction, confidence and supports the work. This will not be considered as moving away from tradition.

- **How do we draw the young minds to the field of research in dance? How can youngsters select a topic and how to pursue?**

  Youngsters show keen interest while learning dance but once they get into professional courses like Engineering or Medicals, they hardly get time. Those who are really interested in continuing dance need not choose any professional course. They can choose



dance as their profession. We have to create awareness about this in the Pre-University level itself. They definitely need qualification academically which they can pursue here also. In olden days, there were no universities and no guides. Now the scene has changed. There are universities and courses suited for dance. Two ways can be opted in this regard. Undergoing a post graduation in the field of dance and pursuing research is one way. The other is undergoing post graduation in other fields such as sociology, history, cultural studies, media, mass communication, journalism, etc., and continuing learning of dance is another way. Here the research topic can relate to their PG field. For the qualified candidates, the opportunities are abundant. We have platforms from which the eligible candidates benefit and make a career.

I would definitely not thrust a topic on any student. I would always look for his / her potential which will be known through few discussions. The potential and the passion for the subject become key points to decide the topic. If there is passion, the progress will be there till the end. If not, a Ph.D. will only be a degree and an end to progress. So keeping the passion alive and approaching the relevant scholars will make the journey pleasurable.

**ಎಂ.ಆರ್.ಕೃಷ್ಣಮೂರ್ತಿ, ಹಿರಿಯ ಭರತನಾಟ್ಯ (ಕಲಾಕ್ಷೇತ್ರ ಪದ್ಧತಿ) ಗುರು, ಬೆಂಗಳೂರು**



1) ನಾನೊಬ್ಬ ತೀರ ಸಂಪ್ರದಾಯಸ್ಥ. ಹಾಗಾಗಿ ಹಳೆಯದನ್ನು ಮರೆಯಬಾರದು, ಯಥಾವತ್ತಾಗಿ ಇಟ್ಟುಕೊಳ್ಳಬೇಕು ಎನ್ನುತ್ತೀನಿ. ಬೇಕೆಂದರೆ ಹೊಸ ಸಾಹಿತ್ಯ ತೆಗೆದುಕೊಂಡು ಹೊಸ ಆಯಾಮ ಕೊಡುವಂತೆ ಆದರೆ ಚೌಕಟ್ಟಿನೊಳಗೇ ಕೆಲಸ ಮಾಡಲಿ ಮತ್ತು ಅದನ್ನು ರಂಗದ ಮೇಲೆ ಪ್ರಯೋಗಿಸಲಿ. ಪದ್ಧತಿಗಳ ಮೇಲೆ, ನಮ್ಮ ಹಿಂದೂ ತತ್ವಜ್ಞಾನದ ಮೇಲೆ ಸಂಶೋಧನೆ ಮಾಡಬಹುದು.

2) ಹಿಂದೆ ಇದ್ದ ಶ್ರದ್ಧೆ ಈಗಿಲ್ಲ. ಈಗ ಎಲ್ಲಾ ಬದಲಾಯಿಸುತ್ತಿದ್ದಾರೆ. ಭಕ್ತಿ ಭಾವಕ್ಕೆ ಹೆಚ್ಚು ಪ್ರಾಶಸ್ತ್ಯ ಕೊಡಬೇಕು. ಶೃಂಗಾರ ಬೇಕಿದ್ದಲ್ಲಿ ಸಿನಿಮಾದಲ್ಲಿ ನೋಡಬಹುದಲ್ಲ! ಹಳೆಯದರ ಒಳ್ಳೆಯದನ್ನು ತೆಗೆದುಕೊಂಡು, ಚೌಕಟ್ಟಿನೊಳಗಿದ್ದುಕೊಂಡು, ಹೊಸದನ್ನು ಸೃಷ್ಟಿಸುತ್ತಾ ಮುಂದಿನ ಜನಾಂಗಕ್ಕೆ ದಾರಿ ತೋರಬೇಕು. ಏಕೆಂದರೆ ನೃತ್ಯ ಅನ್ನುವುದು ಒಂದು ಯೋಗ ಎಂದು ರುಕ್ಮಿಣಿದೇವಿಯೇ ಹೇಳಿದ್ದಾರೆ.

**Nandini Mehta, Kathak Dancer/Guru, Bengaluru**

1) Those who want to know about theoretical aspect can certainly choose research. They can go deep in dance, learn about history, evolution. There is definitely scope for them. This would enhance their performance.

2) In yesteryears, gurus taught what they learnt. They acted as link. But today's generation want to go deeper, explore new avenues, inclination towards contemporary style is also there. They are very quick in grasping and competition is high. They're hard working and many have come forward to take it as a profession which is a good development and opportunities are also aplenty. So research will be helpful. The future generation has to maintain the tradition. Our classical dance is so rich. We need to have an eye for creativity. It's endless and limitless. How long can anyone watch contemporary dance? There is no depth in it. So if tradition continues it will be good.

**ಡಾ. ವಸುಂಧರಾ ದೊರೆಸ್ವಾಮಿ, ಹೆಸರಾಂತ ಭರತನಾಟ್ಯ ಗುರು/ಕಲಾವಿದೆ, ಮೈಸೂರು**

1) ನೃತ್ಯಕ್ಷೇತ್ರದಲ್ಲಿ ಸಂಶೋಧನೆ ಆಗಬೇಕು. ತಪ್ಪೇನಲ್ಲ. ಶಾಸ್ತ್ರದಲ್ಲಿ ಹೇಳಿದ್ದನ್ನು ಆಳವಾಗಿ ಅಧ್ಯಯನ ಮಾಡಿದಾಗ ಕಲೆ ಅಭಿವೃದ್ಧಿ ಹೊಂದುತ್ತದೆ. ಅದರಿಂದ ಆಧ್ಯಾತ್ಮಿಕ ಜ್ಞಾನ ವೃದ್ಧಿಸುತ್ತದೆ ದೈವಿಕತೆ ಬರುತ್ತದೆ. ಅಲ್ಲದೆ ಸಂಶೋಧನೆಗೆ ತೊಡಗಿದರೆ ಜ್ಞಾನಾರ್ಜನೆ ಆಗುತ್ತದೆ.



2) ಹಿಂದೆ ಸಾತ್ವಿಕ ಅಭಿನಯ ಹೆಚ್ಚಿತ್ತು. ಈಗ ಆಹಾರ್ಯ, ರಿದಂಗಳೇ ಹೆಚ್ಚು. ಏಕವ್ಯಕ್ತಿ ಪ್ರದರ್ಶನದಿಂದ ಗುಂಪು ಪ್ರದರ್ಶನ ಹೆಚ್ಚಾಗಿದೆ. ಬಣ್ಣ, ಬಣ್ಣದ ವೇಷ, ಬೆಳಕು ತಂತ್ರಜ್ಞಾನಕ್ಕೇ ಆದ್ಯತೆ ಹೆಚ್ಚು. ಇವು ನರ್ತನದ ರೀತಿಗೆ ಹೊಂದಾಣಿಕೆ ಆಗುವುದಿಲ್ಲ. ಜೊತೆಗೆ ಜಂಪ್ ಮತ್ತು ಕಿಕ್‌ಗಳೇ ಅಧಿಕವಾಗಿವೆ. ಯೋಗ, ಕಲರಿ, ವಿವಿಧ ವಿನ್ಯಾಸಗಳೇ ಎದ್ದು ಕಾಣುತ್ತವೆ. ಅಂದರೆ ನೃತ್ತಕ್ಕೇ ಹೆಚ್ಚು ಪ್ರಾಮುಖ್ಯತೆ ಕೊಟ್ಟಿದ್ದಾರೆ. ಆದ್ದರಿಂದ ಮುಂದಿನ ಪೀಳಿಗೆಯವರು ಆಂಗಿಕದೊಂದಿಗೆ ಸಾತ್ತ್ವಿಕದೆಡೆಯೂ ಗಮನಹರಿಸಲಿ ಎಂದು ಬಯಸುತ್ತೇನೆ.

**Vani Ganapathi, Renowned Bharathanatyam Artiste, Bengaluru.**



1) Research is very important for looking more information and try out new before choreographing. In depth study of the subject is very essential to enhance the performance.

2) In the past only traditional pieces were being performed. The situation was such that the spectator and the artistes both were not mentally ready for innovations. Today both are ready. New things are exploring. But the tradition should be caught hold of. Each dance has its own beauty and characteristics. Stick to them and explore new concepts. If any new experiment is done, give it some other name. Be creative in the frame of tradition.

**ಕೃಪಾ ಫಡ್ಕೆ, ಭರತನಾಟ್ಯಾದಿ ನೃತ್ಯಗುರು/ಕಲಾವಿದೆ, ಮೈಸೂರು.**



1) ಸಂಶೋಧನೆ ನಮ್ಮ ಸಂಸ್ಕೃತಿಯಲ್ಲೇ ಇದೆ. ಮರ ಹೆಮ್ಮರವಾಗಲು ಆಳವಾಗಿ ಬೇರೂರುವಂತೆ, ನೃತ್ಯದಲ್ಲೂ ಆಳವಾದ ಅಧ್ಯಯನ ಅಗತ್ಯ. ಹಿಂದಿನ ಕಾಲದ್ದು ಎಷ್ಟೋ ಈಗ ಇಲ್ಲ. ಕಾಲಕ್ಕೆ ತಕ್ಕಂತೆ ಬದಲಾವಣೆ ಆಗಬೇಕು. ಈಗಿನ ಕಾಲಕ್ಕೆ ಇಂದಿನದು ಚೆನ್ನ. ಸಂಶೋಧನೆಯಲ್ಲಿ ಹೊಸ ವಿಷಯ ಹೊರತರಬಹುದು ಅಥವಾ ಹಳೆಯದನ್ನೂ ಮತ್ತೆ ಮೇಲೆ ತರಬಹುದು. ಇವೆಲ್ಲವುದಕ್ಕೆ ಅನೇಕ ಪುಸ್ತಕಗಳ ಅಧ್ಯಯನ ಅಗತ್ಯ. ಆಗಲೇ ಸಂಶೋಧಕನಿಗೆ ಒಂದು ಹಿಡಿತ ಸಿಗುವುದು. ಸಮುದ್ರದ ಆಳಕ್ಕೆ ಇಳಿದಾಗಲೇ ಮುತ್ತು ಸಿಗುವುದು. ಮೇಲೆ ತೇಲುವುದೆಲ್ಲ ಕಪ್ಪೆಚಿಪ್ಪಷ್ಟೆ!

2) ಹಿಂದೆ ನೃತ್ಯದ ವಾತಾವರಣ ಚೆನ್ನಾಗಿತ್ತು. ಅಭಿನಯ, ನೃತ್ತ ಸಮಾನ ವಾಗಿತ್ತು. ಅದೇ ಈಗಿನದ್ದು ದುರಂತ. ಇಂದಿಗೆ ಕಲಾವಿದರು ಚುರುಕಾಗಿದ್ದಾರೆ, ಅನೇಕ ಸೌಕರ್ಯಗಳಿವೆ. ಆದರೆ ನೃತ್ತವೇ ಹೆಚ್ಚಾಗಿದೆ. ಎಲ್ಲದಕ್ಕೂ ಜತಿ ಹಾಕುವ ಪರಿಪಾಠ ಆರಂಭವಾಗಿದೆ. ಇದನ್ನು ಖಂಡಿಸಬೇಕು. ನೃತ್ತವನ್ನೇನೋ ಸಾಧನೆಯಿಂದ ಪಾರಂಗತಗೊಳಿಸಬಹುದು. ಆದರೆ ಅಭಿನಯಕ್ಕೆ ಸಂಸ್ಕಾರ ಅಗತ್ಯ. ವಯಸ್ಸಾಗುತ್ತಾ ಅಭಿನಯ ಪಕ್ವವಾಗಬೇಕು.

ಆದರೆ ಅದು ಈಗಿನ ಪೀಳಿಗೆಯಲ್ಲಿ ಕಾಣುತ್ತಿಲ್ಲ. ಆದಾಗ್ಯೂ ಒಂದು ಒಳ್ಳೆಯ ಅಂಶವೆಂದರೆ ಸೌಹಾರ್ದ ವಾತಾವರಣ ಸೃಷ್ಟಿಯಾಗಿದೆ. ಎಲ್ಲಿ ಒಳ್ಳೆಯದು ಸಿಗುತ್ತದೋ ಅಲ್ಲಿಗೆ ಮುಜುಗರವಿಲ್ಲದೆ ಹೋಗುತ್ತಾರೆ. ಜನಕ್ಕೆ ಒಳ್ಳೆಯದು ಕೊಟ್ಟರೆ ನೋಡುತ್ತಾರೆ. ಹೀಗಿರುವಾಗ, ಇಂದಿನ ಗುರುಗಳ ಜವಾಬ್ದಾರಿ ಹೆಚ್ಚಾಗಿದೆ ಎಂದೇ ಹೇಳಬಹುದು. ಆದರೆ ಎಷ್ಟು, ಹೇಗೆ, ಏನು ಕೊಡಬೇಕು ಎಂದು ಮೊದಲು ತಿಳಿಯಬೇಕು. ಕಾಲಕ್ಕೆ ತಕ್ಕಂತೆ ಇರಬೇಕು ನಿಜ; ಆದರೆ ಕಠಿಣತೆ ಬೇಡ ; ಜೊತೆಗೆ ಅಡ್ಡದಾರಿ ಬೇಡವೇ ಬೇಡ. ಸತ್ತ್ವ ಇದ್ದರೆ ಮಾತ್ರ ಬೆಳೆಯುತ್ತಾರೆ ಎಂಬ ಅರಿವಿದ್ದರೆ ಸಾಕು.

**Dr. Chetana Radhakrishna, Bharathanatyam Guru/Artiste/Research scholar, Mandya-Mysore.**



1) Dance is a vast subject. One can not explore everything. There are untouched resources also within. Exploraton of such things will make art to grow. For e.g, other than Abhinaya Darpana, there are other texts like Bharatarnava, Sangeeta Ratnakara. Why we have to stick on to just one text? Understanding oneself and the development of spirituality will also follows naturally along with it and status of thinking will widen up.

2) We don't find the same dedication nowadays if we compare with olden days. Previously they used to strict themselves on one Guru. But for today lack of in-depth thoughts, less in hard work is more in number. Unfortunately importance is given to glamour and technical aspect. If the same trend continues, we have to search where classical dance is? Thus I feel that all the artistes should unite. Thiskind of unity is seen in other fields such as science and literature; but not in Dance. If we get together, many of the issues can be discussed, shared and solved.

**ಪ್ರಭಾತ್ ಕಲಾವಿದರು – ಹೇಮಾ ಪಂಚಮುಖಿ, ಹೆಸರಾಂತ ಚಲನಚಿತ್ರ/ನೃತ್ಯ ಕಲಾವಿದೆ, ಬೆಂಗಳೂರು**

1) ಕೇವಲ ಪ್ರಯೋಗ ಸಾಲದು. ಜ್ಞಾನವೂ ಬಹು ಮುಖ್ಯ. ಓದಿ ತಿಳಿದುಕೊಂಡಾಗ ಅರ್ಥ ಆಗುತ್ತದೆ, ಮನಸ್ಸಿನಲ್ಲಿ ಕೂರುತ್ತದೆ. ನೋಡಿ, ಓದಿ, ಕೇಳಿ ಕಲಿಯಬೇಕು. ಇದು ಸಂಶೋಧನೆಯಿಂದಲೇ ಸಾಧ್ಯ. ಅಭಿನಯ ಗುರುಗಳಿಂದ ಕಲಿತರೂ ಅದು ನಮ್ಮ ಮನಸ್ಸಿನಿಂದ ಹೊರಹೊಮ್ಮುತ್ತದೆ. ಇಂತಹ ಅನುಭವ ಸಂಶೋಧನೆಯಿಂದ ಬರುತ್ತದೆ. ಭಾವನೆ ಮನಸ್ಸಿಗೆ ಮುಟ್ಟಿದರೆ, ಜನರಿಗೂ ತಲುಪುತ್ತದೆ.



2) ಹಳೆಯ ಗುರುಗಳದ್ದು ಎಲ್ಲವೂ ಸರಿಯಲ್ಲ, ಹಾಗೇ ಹೊಸ ಪೀಳಿಗೆಯವರದ್ದು ಎಲ್ಲವೂ ತಪ್ಪಲ್ಲ. ಹಿಂದೆ ಪ್ರಯೋಗವೇ ಮುಖ್ಯವಾಗಿತ್ತು. ನಂತರ ಶಾಸ್ತ್ರ, ಪ್ರಯೋಗ ಎರಡೂ ಮುಖ್ಯವಾದವು. ನಾನಂತೂ ಉಸುರಿರುವವರೆಗೂ ಹೊಸ ಪ್ರಯೋಗ ಮಾಡುತ್ತಿರುತ್ತೇನೆ; ಈಗಾಗಲೇ ಅನೇಕ ಬದಲಾವಣೆ ತಂದಿದ್ದೇನೆ. ರೆಕಾರ್ಡ್ ಮಾಡಿದ ಸಂಗೀತ ಬಳಸುತ್ತಿದ್ದೇನೆ. ಪಕ್ಕ ವಾದ್ಯದವರ ತೊಂದರೆಯಿಂದ ಈ ಬದಲಾವಣೆ ಅನಿವಾರ್ಯವಾಯಿತು ಎಂಬುದನ್ನು ಒಪ್ಪಿಕೊಳ್ಳಲೇಬೇಕು. ಆಧುನಿಕ ತಂತ್ರಜ್ಞಾನ ಬಳಸಿ

ಬೆಳಕು ಸಂಯೋಜನೆ, ಅನೇಕ ಪರಿಕರಗಳನ್ನೂ ರಂಗದ ಮೇಲೆ ತಂದಿದ್ದೇನೆ. ಇದರಿಂದ ಒಟ್ಟಾರೆ ಪ್ರದರ್ಶನ ಚೆನ್ನಾಗಾಗುತ್ತಲಿದೆ. ಅದರಲ್ಲೂ ಮುಖ್ಯವಾಗಿ ಕನ್ನಡ ಕೃತಿಗಳಿಗೇ ಆದ್ಯತೆ ಕೊಡುತ್ತಿದ್ದೇನೆ. ಇದರಿಂದ ಸಾಮಾನ್ಯ ಜನರೂ ಅರ್ಥ ಮಾಡಿಕೊಳ್ಳುವಂತಾಗಿದೆ. ಇಷ್ಟಲ್ಲದೆ, ಶಿಷ್ಯರನ್ನೂ ಮುಂದೆ ತರಬೇಕು ಎಂದು ಬಯಸುತ್ತೇನೆ. ಇದು ಗುರುವಿನ ಮೊದಲ ಕರ್ತವ್ಯ.

**Dr. Padmaja Suresh, Bharathanatyam Guru/Reseach scholar, Bengaluru.**

1) As I myself have entered into the field of research, I do feel the need for research in the field of dance. But a dancer has to learn and perform well before getting into research. The experience she gets by this makes her eligible to explore. That's how my journey has been. From an extensive performer to a teacher to a researcher, the growth has been gradual and natural. An absolute development happened when I started my masters in philosophy. And this led to explore the area of 'Science of tantra & the art of dance'.



2) Yesteryear's dancing has been more practical oriented. The trend is now is a fast track. 'When will she perform, will she earn enough?' These are common questions asked by parents. Dance is a form of yoga. Innovations nowadays are just cut and paste. Intrinsic values are lost. So is the guru-shishya parampara. If working towards a target here, it will be no less than a corporate. While creating a name for oneself, I suggest reach for a wider range of people. Ask 'what will happen to dance after me?' Leave a mark. Hold awareness workshops at villages; spread the culture, the positive energy. Give platform for others. Art has to be evolved. Lead a fulfilling life and attain 'moksha' through art.

**ಉದಯ್ ಕುಮಾರ್ ಶೆಟ್ಟಿ, ಒಡಿಸ್ಸಿ ನೃತ್ಯಕಲಾವಿದರು/ ಕಲಾಸ್ಪಂದನ ಪತ್ರಿಕೆಯ ಸಂಪಾದಕರು**

1) ಸಂಶೋಧನೆ ತಪ್ಪಿಲ್ಲ. ಸಂಪ್ರದಾಯ ಇಟ್ಟುಕೊಂಡು ಮಾಡಬೇಕು. ಹಿಂದಿನವರು ನಮ್ಮ ಸಂಸ್ಕೃತಿಗಾಗಿ ಎಲ್ಲವನ್ನೂ ಮಾಡಿದರು. ಕಳೆದು ಹೋದುದನ್ನು ಸಂಶೋಧನೆ ಮೂಲಕ ಹೊರತಂದರೆ ಉತ್ತಮ. ಈಗಿನ ಸಮಕಾಲೀನ ನೃತ್ಯದಲ್ಲಿ ಸರಪಳಿಯ ಕೊಂಡಿಯೇ ಕಾಣುವುದಿಲ್ಲ. ಹಿಂದಿನ ಹೆಜ್ಜೆಗಳು ಅಳಿಸಿಹೋಗುತ್ತಿವೆ. ಹಳೆಯ ನರ್ತಕರನ್ನು ಗುರುತಿಸಬೇಕು, ದಾಖಲಿಸಬೇಕು. ಈಗಿನ ನೃತ್ಯ ಬಹಳ ಹಗುರವಾಗಿದೆ. ಬೇರೇ ಇಳಿಯುವುದಿಲ್ಲ. ಹಣ, ಪ್ರಚಾರಕ್ಕಾಗೇ ಮಾಡುತ್ತಿರುವಂತಿದೆ. ಇದು ಕೇವಲ ಹವ್ಯಾಸವಾಗೇ ಉಳಿದುಬಿಡುತ್ತಿದೆಯೇನೋ ಅನಿಸುತ್ತದೆ. ಬರೀ ಮೇಲ್ಮೈ ಮಾತ್ರ ಕಾಣುತ್ತಿದೆ. ಆಳವಾಗಿ ಇಳಿಯಬೇಕು. ಆಗಲೇ ಹಿಂದಿನದಕ್ಕೂ ಇಂದಿನದಕ್ಕೂ ಕೊಂಡಿ ಸಿಗುವುದು.

2) ಇನ್ನು ಭವಿಷ್ಯದ ಬಗ್ಗೆ ಹೇಳಬೇಕೆಂದರೆ, ಅದು ಮುಂದೆ ನಡೆಸಿಕೊಂಡು ಹೋಗುವವನ ಮನಸ್ಥಿತಿಯನ್ನವಲಂಬಿಸಿದೆ. ಇಂದು ಅವನು ಏನು ಪಡೆದಿದ್ದಾನೆ, ಕಲೆ ಅವನಿಗೆ ಏನು ಕೊಟ್ಟಿದೆ ಅನ್ನುವುದು ಮುಖ್ಯ ಕಾರಣ. ಕಲೆ ಎನ್ನುವುದು ಸಮುದ್ರ. ಕೈಯಲ್ಲಿ ಹಿಡಿದಷ್ಟು ನೀರು ಮಾತ್ರ ಸಿಗುತ್ತದೆ. ಆಯಾ ಸಮಯಕ್ಕೆ ತಕ್ಕದ್ದು ಆಗುತ್ತಿದೆ. ನನಗಂತೂ ಕಲೆ ಜೀವನೋಪಾಯ. ನಮ್ಮ ಸಂಪ್ರದಾಯ ಉಳಿಯಲಿ ಎಂದು ಆಸೆ. ಮುಂದೆ ಹೇಗೆ ತೆಗೆದುಕೊಂಡು ಹೋಗುವುದು ಎನ್ನುವುದು ಅವರಿಗೆ ಬಿಟ್ಟದ್ದು.

**ಭಾರತಿ ವೇಣುಗೋಪಾಲ್ (ದಿ.ಪದ್ಮಿನಿ ರಾವ್ ಪರವಾಗಿ), ಖ್ಯಾತ ನೃತ್ಯಗಾಯಕಿ, ಬೆಂಗಳೂರು.**

1) ನೃತ್ಯವೊಂದೇ ಅಲ್ಲ ಯಾವುದೇ ಕಲೆಯಾದರೂ ಸಂಶೋಧನೆ ಮೂಲಕವೇ ಬೆಳೆಯುವುದು. ಇಂದಿನದನ್ನು ಹೊರತುಪಡಿಸಿ, ಹಿಂದೆ ಹೇಗಿತ್ತು, ಹೇಗೆ ಬೆಳೆಯಿತು, ಅಂದಿನ ಒಳ್ಳೆಯದು ಕೆಟ್ಟದ್ದೇನು ಇತ್ಯಾದಿಗಳು ದಾಖಲೆಗಳ ಮೂಲಕ ಸಿಗುತ್ತವೆ. ಇದನ್ನು ತಿಳಿದಾಗ ಪ್ರದರ್ಶನ ಸತ್ವಯುತವಾಗುತ್ತದೆ. ಎಲ್ಲಾ ಕಲೆಗೂ ಅಡ್ಡಿ, ಆತಂಕಗಳು ಬಂದಿದ್ದವು. ಬದಲಾದ ಪರಿಸ್ಥಿತಿಯಲ್ಲಿ ಹೇಗಿತ್ತು ಎಂಬ ಹಿನ್ನೆಲೆ ತಿಳಿಯುವುದು ಒಳ್ಳೆಯದು.

2) 15 ವರ್ಷದಿಂದ ಕ್ಷೇತ್ರದಲ್ಲಿದ್ದೇನೆ. ಎಲ್ಲವೂ ಸಮಾನವಾದ ಸಂಗತಿಗಳಿಲ್ಲ. ಆದರೆ, ಹಿಂದಿನ ಸಮಾಧಾನ, ಶ್ರದ್ಧೆ ಈಗ ಕಾಣುತ್ತಿಲ್ಲ. ಎಲ್ಲ ಬೇಗ ಆಗಬೇಕು. ಬೇಗ ಕಲಿತು, ಬೇಗ ಬಿಡುತ್ತಾರೆ. ಆದರೆ ಪ್ರತಿಭೆ ವಿಷಯದಲ್ಲಿ ವ್ಯತ್ಯಾಸ ಇಲ್ಲ. ಕಲಿತದ್ದನ್ನು ಜೀವನ ಪರ್ಯಂತ ಉಳಿಸಿಕೊಳ್ಳಬೇಕು; ಜೊತೆಗೆ ಹೊಸದನ್ನೂ ಸೃಷ್ಟಿ ಮಾಡಬೇಕು. ಈಗ ಅವಕಾಶ ಹೆಚ್ಚು. ಅದನ್ನು ಬಳಸಿಕೊಳ್ಳಬೇಕು. ಶ್ರೇಷ್ಠತೆಯನ್ನು ಕಾಪಾಡಿಕೊಂಡು ಹೋಗಬೇಕು. ನಮಗೆ ಹಿಂದಿನವರು ಕೊಟ್ಟ ಜವಾಬ್ದಾರಿಯನ್ನು ಹಾಗೇ ಮುಂದಿನವರಿಗೂ ವರ್ಗಾಯಿಸಬೇಕು. ನಾನು ಕಂಡಂತೆ ಪದ್ಮಿನಿ ರಾವ್ ಅವರದ್ದು ಒಂದು ಅಪರೂಪದ ವ್ಯಕ್ತಿತ್ವ. ಅವರ ಕಾರ್ಯಕ್ರಮಗಳಲ್ಲಿ ಅಚ್ಚುಕಟ್ಟುತನ ಬಯಸುತ್ತಿದ್ದರು. ಕಲೆಯನ್ನು ಸಮಾಧಾನ ಚಿತ್ತದಿಂದ ಆಸ್ವಾದಿಸಬೇಕು ಅನ್ನುತ್ತಿದ್ದರು. ಪರಿಪೂರ್ಣತೆಯೆಡೆಗೇ ಗಮನವಿರುತ್ತಿತ್ತು. ಏನೇ ಮಾತಾಡಿದರೂ ಅದು ಕಲೆಯ ಬಗೆಗಿರುತ್ತಿತ್ತೇ ವಿನಃ ವ್ಯಕ್ತಿಗತವಾಗಿರುತ್ತಿರಲಿಲ್ಲ. ಅವರಿಗೂ ಸಂಗೀತ ಜ್ಞಾನವಿತ್ತು. ಅವರು ಒಡನಾಟದಿಂದ ನನ್ನ ಸಂಗೀತವೂ ಚೆನ್ನಾಗಿ ಬೆಳೆಯಿತು. ಅವರೂ ಸಹ ಸಂಪ್ರದಾಯ ಇರಬೇಕು ಅನ್ನುತ್ತಿದ್ದರು ಹಾಗೇ ಹೊಸ ಹೊಸ ಪ್ರಯೋಗವನ್ನೂ ಮಾಡುತ್ತಿದ್ದರು. ಅದಕ್ಕಾಗಿ ವಿಪರೀತ ಕೆಲಸವನ್ನೂ ಮಾಡುತ್ತಿದ್ದರು. ಒಟ್ಟಾರೆ ಬಹಳ ಸಂತೋಷಚಿತ್ತದ, ಸ್ನೇಹಪರ ವ್ಯಕ್ತಿಯಾಗಿದ್ದರು.

**ಉಷಾ ದಾತಾರ್, ಖ್ಯಾತ ನೃತ್ಯಗುರು, ಬೆಂಗಳೂರು.**



1) ಸಂಶೋಧನೆ ಅಂದರೆ ಯಾವ ರೀತಿಯಲ್ಲಿ ಎನ್ನುವುದೇ ಒಂದು ಪ್ರಶ್ನೆ. ಏನೇನೋ ಮಾಡಿದರೆ ಅದು ನಮ್ಮ ನೃತ್ಯಪ್ರಕಾರಕ್ಕೆ ಹೊಂದಬೇಕಲ್ಲ? ಆಗ ಸಂಶೋಧನೆ ಹೋಗಿ ಆಭಾಸ ಆಗುತ್ತದೆ. ಸಂಶೋಧನೆ ನೃತ್ಯಕ್ಕೆ ಪೂರಕವಾಗಬೇಕು. ಹೊಸದನ್ನು ಸೃಷ್ಟಿಸುವ ಪ್ರಯತ್ನದಲ್ಲಿ ಸಮಕಾಲೀನ ನೃತ್ಯ ಬೆಳೆಯುತ್ತಿದೆ. ಅದು ಭಾರತೀಯತೆಗೆ ಒಪ್ಪುವುದಿಲ್ಲ. ನಮ್ಮ ಅಂಗಸೌಷ್ಠವ ಅದಕ್ಕಲ್ಲ. ಮತ್ತು ಯಾರೂ ಸಹ ಇಲ್ಲದ್ದನ್ನು ಸೃಷ್ಟಿ ಮಾಡಲು ಆಗುವುದಿಲ್ಲ. ಎಲ್ಲೂ ಏನೂ ಹೊಸದು ಕಾಣುತ್ತಿಲ್ಲ. ಎಲ್ಲಾ ಅಲ್ಲಲ್ಲೇ ಇದ್ದದ್ದೇ. ಅಲ್ಲದೆ, ನೃತ್ಯದಲ್ಲಿ ಸಂಶೋಧನೆ ಮಾಡಿದವರು ರಂಗದ ಮೇಲೆ ಅದನ್ನು ಪ್ರಯೋಗಿಸದಿದ್ದರೆ ಏನು ಪ್ರಯೋಜನ? ಸಂಶೋಧನೆ ಮಾಡಿ ಬರೀ ಪಾಠ ಮಾಡಿದರೆ ಸಾಕೇ? ನರ್ತಿಸುವ ಸಾಮರ್ಥ್ಯವೂ ಇರಬೇಡವೇ? ನನ್ನ ಪ್ರಕಾರ, ಹಿಂದಿನವರು ಮಾಡಿದ್ದೇ ನಿಜವಾದ ಸಂಶೋಧನೆ.

2) ಕಲಿಕೆ, ಕಲಿಸುವಿಕೆ ಮತ್ತು ಪ್ರದರ್ಶನ ಮೂರರಲ್ಲೂ ಬಹಳ ವ್ಯತ್ಯಾಸ ಆಗಿದೆ. ಹಿಂದಿನವರು ಬುನಾದಿ ಹಾಕಿ ಕೊಟ್ಟಿದ್ದಾರೆ, ಮಾರ್ಗ ಮಾಡಿದ್ದಾರೆ. ಅದರಲ್ಲಿ ನಡೆಯುತಿದ್ದೀವಿ. ಆದರೆ ಇಂದು ಆ ಪರಿಶುದ್ಧತೆ ಉಳಿದಿಲ್ಲ. ಹಿಂದಿನವರು ಮಾಡಿದ್ದು ಕನಸಾಗಿ ಉಳಿಯುತ್ತದೆಯೇನೋ, ಶಾಸ್ತ್ರದಲ್ಲಿ ಹೇಳಿಕೊಟ್ಟಿದ್ದು ಅಳಿಸಿ ಹೋಗುತ್ತದೆಯೇನೋ ಅನ್ನಿಸುತ್ತದೆ. ಹಾಗೆಂದು ಇಂದಿನವರನ್ನು ಖಂಡಿಸುತ್ತಿಲ್ಲ. ಹೊಸ ಸಾಹಿತ್ಯ ಬಳಸುತ್ತಿದ್ದಾರೆ, ಇದು ಒಳ್ಳೆಯದೇ. ಆದರೆ, ಕಲಬೆರಕೆ ಬೇಡ ಅನ್ನುವುದು ನನ್ನ ಅಭಿಪ್ರಾಯ. ಎಲ್ಲಾ ಕನ್ನಡ ಸಾಹಿತ್ಯಕ್ಕೂ ನರ್ತಿಸಲು ಸಾಧ್ಯವೇ? ಇಂದಿನ ಪೀಳಿಗೆಗೆ ತಾಳ್ಮೆಯಿಲ್ಲ. ಹಿಂದೆ ನಮ್ಮ ತಲೆಯೇ ಕಂಪ್ಯೂಟರ್ ಆಗಿತ್ತು. ಈಗ ಕಂಪ್ಯೂಟರ್ ನೋಡಿ ಕಲಿಯುತ್ತಿದ್ದಾರೆ. ಹೀಗೇ ಮುಂದುವರೆದರೆ ಹೇಗೋ ಎಂದು ಭಯವಾಗುತ್ತಿದೆ. ಈಗ ಸಾಧನೆ ಮಾಡುವುದು ಬೇಕಾಗಿಲ್ಲ. ದಿನಾ ದಿನಾ ಹೊಸತನಕ್ಕೆ ಮಾರುಹೋಗುತ್ತಾರೆ. ಸಮಯ, ಸಂದರ್ಭ ನೋಡದೆ ನೃತ್ಯ ಸಂಯೋಜನೆ ಮಾಡುತ್ತಾರೆ. ವಿದ್ವತ್ಪ್ರದರ್ಶನ ಬೇಕಿದ್ದಲ್ಲಿ ಮನೋರಂಜನೆ ಮಾಡುತ್ತಾರೆ. ಹೀಗಾದರೆ ಹೇಗೆ? ತಿಳಿದವರು, ಹಿರಿಯರು ವಿಶೇಷ ಕಾಳಜಿವಹಿಸಿ ಇದನ್ನು ತಡೆಗಟ್ಟಿದರೆ ಉತ್ತಮ.

**ರಾಮನ್, ಹಿರಿಯ ಭರತನಾಟ್ಯ ಗುರು, ತುಮಕೂರು.**



1) ನೃತ್ಯದಲ್ಲಿ ಶಾಸ್ತ್ರ ಮತ್ತು ಪ್ರಯೋಗ ಒಂದಕ್ಕೊಂದು ಪೂರಕ. ಪ್ರಯೋಗಕ್ಕೆ ಪೂರಕವಾಗಿ ಶಾಸ್ತ್ರದಲ್ಲಿ ಜ್ಞಾನ ಬೆಳೆದಾಗ ಪ್ರದರ್ಶನದ ಗುಣಮಟ್ಟ ಹೆಚ್ಚುತ್ತದೆ. ಗಟ್ಟಿತನ ಇರುತ್ತದೆ. ಶಾಸ್ತ್ರವಿಲ್ಲದಿದ್ದರೆ, ಪ್ರಯೋಗವೂ ನಿಷ್ಪ್ರಯೋಜಕ. ಹಿಂದೆ ಭರತನಾಟ್ಯ ಗುರುಗಳು ಪ್ರದರ್ಶನಕ್ಕೆ ಪ್ರಾಮುಖ್ಯತೆ ಕೊಡುತ್ತಿದ್ದರು. ನಾಟ್ಯ ಶಾಸ್ತ್ರದ ಬಗ್ಗೆ ಅವರಿಂದಲೇ ತಿಳಿಯಬೇಕಿತ್ತು. ಗ್ರಂಥಗಳು ಸುಲಭವಾಗಿ ಲಭ್ಯವಿರಲಿಲ್ಲ. ಭಾಷಾ ವಿಜ್ಞಾನದ ತೊಂದರೆ ಇತ್ತು. ನಂತರ ಪ್ರಾಂತೀಯ ಭಾಷೆಗೆ ಅನುವಾದಗೊಂಡ ಮೇಲೆ ಎಲ್ಲರಿಗೂ ಸಿಗುವಂತಾಯಿತು. ಆಗಲೂ ಪ್ರಯೋಗಕ್ಕೇ ಹೆಚ್ಚು ಪ್ರಾಶಸ್ತ್ಯವಿತ್ತು, ಆದರೆ ಆಸ್ವಾದಿಸುತ್ತಿದ್ದವರು ಕಲೆಯ ಬಗ್ಗೆ ತಿಳಿದವರಾಗಿರುತ್ತಿದ್ದರು. ಇಂದು ಶೈಕ್ಷಣಿಕವಾಗಿ ಬೆಳೆಯುತ್ತಿದೆ. ಪರೀಕ್ಷಾ ಪದ್ಧತಿ ಬಂದಿದೆ. ಸ್ನಾತಕೋತ್ತರ ಮಟ್ಟಕ್ಕೂ ಏರಿದೆ. ಮುಂದಿನ ಬೆಳವಣಿಗೆಗಳು ನಾಟ್ಯಶಾಸ್ತ್ರದ ಅನುಗುಣವಾಗಿ ಬರಬೇಕು. ಈ ಕ್ಷೇತ್ರ ವಿಜ್ಞಾನಕ್ಕೂ ಮೀರಿ ಬೆಳೆಯಬೇಕು.

2) ಹಿಂದೆ ಗುರುಕುಲ ಪದ್ಧತಿಯಲ್ಲಿ ಕಲಿಯುತ್ತಿದ್ದರು. 14–15 ವರ್ಷದವರೆಗೂ ರಂಗ ಹತ್ತುತ್ತಿರಲಿಲ್ಲ. ಗುರುಸೇವೆಯ ಮೂಲಕವೇ ಜ್ಞಾನ ಪಡೆಯುತ್ತಿದ್ದರು. ಈಗ ಕೇವಲ ವ್ಯಾಪಾರವಾಗಿದೆ. ನೃತ್ಯವನ್ನು ಒಂದು ಕಲೆಯಾಗಿ ನೋಡುತ್ತಿಲ್ಲ. ಮಾಧ್ಯಮಕ್ಕೇ ಹೆಚ್ಚು ಒತ್ತು. ಪೋಷಕರು–ಗುರುಗಳ ಸಂಬಂಧ ಕೂಡ ಚೆನ್ನಾಗಿಲ್ಲ. ವಿದ್ಯಾರ್ಥಿಗಳಲ್ಲಿ ತನ್ಮಯತೆ ಇಲ್ಲ. ಪರಿಪೂರ್ಣತೆ ಬಗ್ಗೆ ಯೋಚಿಸುತ್ತಿಲ್ಲ. ಹಿಂದೆ ಕಲಿಸುವುದರಲ್ಲಿ ಸ್ಪರ್ಧೆ ಇರಲಿಲ್ಲ. ಇಂದು ಪಾಶ್ಚಾತ್ಯ ನೃತ್ಯದ ಮೇಲೆ ಒಲವು ಹೆಚ್ಚಾಗಿದೆ. ಸಮಯದ ಅಭಾವದಿಂದ ಬದಲಾವಣೆ ಬಂದಿದೆ. ಮುಂದೆ ಹೇಗಿರುತ್ತದೆ ಅನ್ನುವುದೇ ಪ್ರಶ್ನಾರ್ಥಕವಾಗಿದೆ. ಮಕ್ಕಳಲ್ಲಿ ಪ್ರೌಢತೆಯಿಲ್ಲ. ಸಾಧನೆ ಮಾಡಲು ಮುಂದೆ ಬರುತ್ತಿಲ್ಲ. ಹಿಂದೆ, ಅಭಿನಯದಲ್ಲಿ ಒಂದು ದೈವಿಕತೆಯಿತ್ತು. ಈಗ ಮನೋರಂಜನೆಯಾಗಿದೆ. ನೃತ್ತವೇ ಪ್ರಧಾನವಾಗಿದೆ. ಅಭಿನಯದ ಲವಲೇಶವೂ ಇಲ್ಲ. ಕಲೆಯ ಮಟ್ಟ ಕುಸಿಯುತ್ತಿದೆ. ಇಂದಿನ ಅವಕಾಶಗಳನ್ನು ಬಳಸಿಕೊಂಡು ಮುನ್ನಡೆದರೆ ಕ್ಷೇತ್ರದ ಭವಿಷ್ಯ ಉಜ್ವಲವಾಗಿರುತ್ತದೆ ಎಂಬುದರಲ್ಲಿ ಸಂಶಯವಿಲ್ಲ.

**ಲಲಿತಾ ಶ್ರೀನಿವಾಸನ್, ಹೆಸರಾಂತ ಭರತನಾಟ್ಯ ನೃತ್ಯಗುರು, ಬೆಂಗಳೂರು.**

1) ನಮ್ಮ ವ್ಯಕ್ತಿತ್ವವನ್ನು ಸ್ಥಾಪಿಸಲು ಸಂಶೋಧನೆ ಬೇಕು. ಹಿಂದಿನದನ್ನು ತಿಳಿದರೆ, ಮುಂದಿನ ದಾರಿ ಸಿಗುತ್ತದೆ. ಆಳ ಹೋದಷ್ಟೂ ಆರೋಗ್ಯಕರ ಬೆಳವಣಿಗೆ ಸಾಧ್ಯವಾಗುತ್ತದೆ. ನೃತ್ಯ ಏಕಮುಖಿ ಅಲ್ಲ. ಸಂಗೀತ, ಸಾಹಿತ್ಯ, ವಾದ್ಯ ಇತ್ಯಾದಿಗಳ ಮಿಲನವಾಗಿದೆ. ಒಂದಕ್ಕೊಂದು ಜೊತೆಯಾಗಿದೆ. ಆಳವಾದ ಜ್ಞಾನವಿರಬೇಕು ಅದಕ್ಕಾಗಿ ಸಂಶೋಧನೆ ಬೇಕು. ನಾವೇನೂ ಎಲ್ಲವನ್ನೂ ಅರಿತವರಲ್ಲ. ಒಂದು ಹೊಸ ಪ್ರಯೋಗ ಮಾಡಲು ಸಾಹಿತ್ಯಕ್ಕಾಗಿ, ಅದರ ಅಧಿಕೃತ ಮಾಹಿತಿಗಾಗಿ, ಅದರಲ್ಲಿನ ನೈತಿಕ ಮೌಲ್ಯಕ್ಕಾಗಿ, ಕಥೆಯ ತಿರುಳಿಗಾಗಿ ಹೀಗೇ ಎಲ್ಲದಕ್ಕೂ ಅಧ್ಯಯನ ಮಾಡಲೇಬೇಕಾಗುತ್ತದೆ. ಹಳೆಯ ವಸ್ತುಗಳಲ್ಲದೆ, ಸಮಕಾಲೀನ ಪರಿಸ್ಥಿತಿಯನ್ನೂ ರಂಗದ ಮೇಲೆ ಪರಿಣಾಮಕಾರಿಯಾಗಿ ತೋರಿಸಬಹುದು. ಅದಕ್ಕೂ ಸಹ ಸಂಶೋಧನೆ ಮಾಡಬೇಕು. ಹೇಳಿಕೊಟ್ಟಷ್ಟನ್ನು ಮಾತ್ರ ಒಪ್ಪಿಸಿದರೆ ಸಾಲದು. ನಮ್ಮ ಕಲ್ಪನೆಗೆ ಬೆಲೆಯಿಲ್ಲವೇ? ಕ್ಷೇತ್ರಕ್ಕೆ ನಾವೂ ಏನಾದರು ಕೊಡಬೇಡವೇ? ಹಿಂದಿನದನ್ನು ಉಳಿಸಿಕೊಳ್ಳಬೇಕು ನಿಜ. ಆದರೆ ಸಮಾನಾಂತರವಾಗಿ ನಾವೂ ಕಾರ್ಯಪ್ರವೃತ್ತರಾಗಿರಬೇಕು. ಹಿಂದಿನವರ ಒಳ್ಳೆಯದನ್ನು ತೆಗೆದುಕೊಳ್ಳಬೇಕು. ಕಾಲಕ್ಕೆ ತಕ್ಕಂತೆ ಬದಲಾಗಲೂಬೇಕು ಮತ್ತು ನಮ್ಮ ಸ್ವಂತಿಕೆಯನ್ನೂ ಇಟ್ಟುಕೊಳ್ಳಬೇಕು. ನಾವು ಹೊಸದನ್ನು ಕೊಟ್ಟಾಗ ಅದು ಸಂಪ್ರದಾಯಕ್ಕೆ ಸೇರುತ್ತದೆ. ಹಳೇ ಬೇರಿನ ಮರದಲ್ಲಿ ಹೊಸ ಹೂವು ಬಿಡುತ್ತದೆ. ಹಳೆಯದನ್ನು ನಾವು ಗೌರವಿಸಲೇಬೇಕು. ಅದು ಇದ್ದಿದ್ದರಿಂದ ತಾನೆ ಕಲೆ ಬೆಳೆಯಿತು? ಇಂದಿನದು ಜನತೆಗೂ ಹಿಡಿಸಬೇಕಲ್ಲವೆ?



2) ಈಗಿನ ಪೀಳಿಗೆಗೆ ಇಷ್ಟನ್ನು ಹೇಳಲು ಬಯಸುತ್ತೇನೆ. ಶಾಸ್ತ್ರ ಎಂದಿಗೂ ಬಿಡಕೂಡದು. ಅದು ಬಹಳ ಸಮೃದ್ಧವಾಗಿದೆ. ನಾವು ಹಿಂದೂಗಳಾಗಿರಲು ಶಾಸ್ತ್ರೀಯತೆಯ ಅಂಶ ಇರಲೇಬೇಕು. ನಮ್ಮ ಸಂಸ್ಕೃತಿ, ಧರ್ಮಗಳನ್ನು ಅರಿಯಲು ಈ ಕಲೆಗಳೇ ನಮಗೆ ಸಿಕ್ಕಿರುವ ಬಹು ದೊಡ್ಡ ಕೊಡುಗೆ. ಕಲೆಗಳ ಅಭ್ಯಾಸದಿಂದ ನೈತಿಕ ಮೌಲ್ಯಗಳ ಅರಿವಾಗುತ್ತದೆ. ಆರೋಗ್ಯಕರ ವಾತಾವರಣ ಸೃಷ್ಟಿಯಾಗುತ್ತದೆ. ದೈಹಿಕ ಕ್ಷಮತೆ, ಮಾನಸಿಕ ಅಭಿವೃದ್ಧಿ ಸಾಧ್ಯವಾಗುತ್ತದೆ. ಶೈಕ್ಷಣಿಕ ಮೌಲ್ಯ ಹೆಚ್ಚುತ್ತದೆ. ನಮ್ಮ ಪುರಾಣ, ಸಂಗೀತ, ಸಾಹಿತ್ಯಗಳ ಅರಿವು ಮೂಡುತ್ತದೆ. ಒಟ್ಟಿನಲ್ಲಿ ಈ ಕಲೆಗಳಿಂದ ಮಕ್ಕಳು ಒಳ್ಳೆಯ ಮನುಷ್ಯರಾಗುತ್ತಾರೆ.

**ನಂದಿನಿ ಈಶ್ವರ್, ಹೆಸರಾಂತ ಭರತನಾಟ್ಯ ಗುರು, ಮೈಸೂರು.**

1) ನೃತ್ಯ ನಿಂತ ನೀರಾಗಬಾರದು. ಹೊಸ ಹೊಸದನ್ನು ಹುಡುಕುತ್ತಾ ಇರಬೇಕು. ಸಮುದ್ರದಲ್ಲಿ ಚಿಕ್ಕ ದೋಣಿ ಮಾರ್ಗ ಹುಡುಕುತ್ತಾ ಹೋಗುವಂತೆ, ಎಲ್ಲರೂ ತಮ್ಮ ತಮ್ಮ ಪಯಣ ಮಾಡುತ್ತಿರಬೇಕು. ಗುರಿ ಒಂದೇ ಇದ್ದರೂ ದಾರಿ ಬೇರೆ ಬೇರೆಯದಾಗಿರುತ್ತದೆ. ಸಂಶೋಧನೆ ಮಾಡಿದ್ದು ಇತರರಿಗೆ ಸಿಗುವ ಹಾಗಿರಬೇಕು. ಜನಕ್ಕೆ ತಲಪುವಂತಿರಬೇಕು. ಅದನ್ನು ಆಧಾರವಾಗಿಟ್ಟುಕೊಂಡು ಅವರು ಮುಂದುವರೆಯಬಹುದು ಅಥವಾ ಬೇರೆಯ ವಿಷಯ ಆಯ್ಕೆ ಮಾಡಿಕೊಳ್ಳಬಹುದು. ಆದರೆ, ಈ ಹುಡುಕಾಟದ ಫಲ ರಂಗದ ಮೇಲೆಯೂ ಕಾಣಬೇಕು.

2) ಹಿಂದೆ ಜ್ಞಾನಾರ್ಜನೆಗಾಗಿ ಗುರುಕುಲದಲ್ಲಿ ಕಲಿಯುತ್ತಿದ್ದರು. ಈಗಿನ ಮಕ್ಕಳಿಗೆ ಶಿಕ್ಷಣದಲ್ಲಿ ಒತ್ತಡ ಹೆಚ್ಚು. ತೋರ್ಪಡಿಕೆಯ ಜೀವನಶೈಲಿಗೆ ಮಾರು ಹೋಗಿದ್ದಾರೆ. ಹಾಗಾಗಿ ಸಾಧನೆ ಮಾಡಲು ಬರುತ್ತಿಲ್ಲ. ಬುದ್ಧಿಯೇನೋ ಇದೆ. ಇದರ ಜೊತೆ ಸಾಧನೆಯೂ ಸೇರಿದರೆ ಒಳ್ಳೆಯ ಫಲಿತಾಂಶ ಸಿಗುತ್ತದೆ. ಶಾಸ್ತ್ರೀಯತೆ ಬಿಟ್ಟುಕೊಡಬಾರದು. ರೀತಿ, ನೀತಿಗಳನ್ನು ಅರಿತು ಸಾಧಿಸಬೇಕು. ಸಮಕಾಲೀನ ನೃತ್ಯ ಬಹಳ ಗೊಂದಲದಲ್ಲಿದೆ. ನಮಗಾದರೆ, ಶಾಸ್ತ್ರಕ್ಕೆ ಗ್ರಂಥಗಳ ಆಧಾರವಿದೆ. ಶಾಸ್ತ್ರೀಯತೆ ಬೇಕೇ ಬೇಕು. ಇರುವ ಚೌಕಟ್ಟಿನಲ್ಲೇ ಆಳಕ್ಕಿಳಿದು, ಸಮಕಾಲೀನ ವಸ್ತು ತೆಗೆದುಕೊಂಡು, ಅದನ್ನು ಹೇಗೆ ಶಾಸ್ತ್ರೀಯವಾಗಿ ಪ್ರಸ್ತುತಪಡಿಸಬೇಕು ಎಂದು ನೋಡಬಹುದು. ಏಕೆಂದರೆ ಕಲೆ ಮೇಲ್ಮಟ್ಟದ್ದು. ನಾವೂ ಆ ಮಟ್ಟ ತಲುಪಲು ಪ್ರಯತ್ನಿಸಬೇಕು.

**ಶೀಲಾ ಶ್ರೀಧರ್, ನೃತ್ಯ ಗುರು/ಉಪನ್ಯಾಸಕರು, ಮೈಸೂರು.**

1) ಸಂಶೋಧನೆ ಎನ್ನುವುದು, ಹುಡುಕಾಟದ ನಿಟ್ಟಿನಲ್ಲಿ ಪ್ರತಿಯೊಂದಕ್ಕೂ ಬೇಕು. ಪ್ರತಿ ಕ್ಷೇತ್ರ, ಪ್ರತಿ ಹೆಜ್ಜೆಯಲ್ಲೂ ಬೇಕು. ಹಳೆಯದರಲ್ಲೂ ಹೊಸತನ ಹುಡುಕುವ ಪ್ರಯತ್ನ ಇದ್ದೇ ಇದೆ. ಹೋಗುವ ದಾರಿ ಬೇರೆ ಇರಬಹುದು. ಶೈಕ್ಷಣಿಕವಾಗಿ ನೋಡಿದಾಗ ವಿಶ್ವ ವಿದ್ಯಾಲಯಗಳಲ್ಲಿ ಅರ್ಥ ಸ್ವಲ್ಪ ಬೇರೆಯಿರಬಹುದು. ಹುಡುಕಾಟಕ್ಕೊಂದು ಫಾರ್ಮುಲಾ ಕೊಟ್ಟಿದ್ದೀವಿ ಅಷ್ಟೇ. ಸಲಕರಣೆ, ಸಿದ್ಧತೆ, ಮಾರ್ಗದರ್ಶನ ಹೀಗೆ ಅನುಸರಿಸುವ ವಿಧಾನ ಬೇರೆ. ಸಂಶೋಧನೆ ಎಲ್ಲ ಕಡೆ ಇದೆ. ಸಮಕಾಲೀನವಾದದ್ದೆಲ್ಲವೂ ಸಂಶೋಧನೆಯ ಬೆಳವಣಿಗೆಯೇ ಅಲ್ಲವೇ?

2) ಶಾಸ್ತ್ರ ಅನ್ನುವುದು ಒಂದೇ ಅಲ್ಲವೇ? ಉಪಯೋಗಿಸುತ್ತಿರುವ ರೀತಿ ಬೇರೆ ಬೇರೆಯಾಗಿವೆ. ಸಮಕಾಲೀನ ಅನ್ನುತ್ತಾ ಕಲೆಯನ್ನು ಕಲುಷಿತಗೊಳಿಸಬಾರದು. ಅನುಸರಿಸುವಾಗ ಬೇರೆ ಬೇರೆ ದಾರಿ ಮಾಡಿಕೊಂಡಿದ್ದೀವಿ. ಆದರೆ ಬೇರು ಮಾತ್ರ ಒಂದೇ. ಪ್ರಯೋಗದಲ್ಲಿ ಸೀಮಿತ ಇಲ್ಲ. ಸಮಕಾಲೀನವಾಗಿ ಮಾಡುವಾಗ ಲೋಪ ಮಾಡಬಾರದು. ಧರ್ಮಯುತವಾಗಿ ನಡೀಬೇಕು. ಘನತೆ, ಗೌರವ ತೋರಿಸಬೇಕು. ವಿದ್ಯೆಗೆ ಇರುವ ನೈತಿಕತೆ ಉಳಿಸಿಕೊಳ್ಳಬೇಕು. ಸಂಪ್ರದಾಯ ಮತ್ತು ಆಧುನಿಕತೆ ಎರಡನ್ನೂ ಎಲ್ಲರೂ ಒಪ್ಪಬೇಕು. ಕಿರಿಯರಿಂದ ತಪ್ಪಾದಾಗ ತಿಳಿಸಿಕೊಡಬೇಕು. ಸಂಪ್ರದಾಯದೊಂದಿಗೆ ಬೆಳಿಯಬೇಕು. ಈ ಬೆಳವಣಿಗೆಯಲ್ಲಿ ಬದಲಾವಣೆ ಅನಿವಾರ್ಯ ಎಂಬುದನ್ನೂ ಅರಿಯಬೇಕು.

**'ಅನನ್ಯ' ರಾಘವೇಂದ್ರ ರಾವ್, 'ಅನನ್ಯ' ಮಾಸಪತ್ರಿಕೆಯ ಸಂಪಾದಕರು/ ಕಲಾಸಂಘಟಕರು, ಬೆಂಗಳೂರು.**

1) ಒಬ್ಬ ವಿಜ್ಞಾನದ ವಿದ್ಯಾರ್ಥಿಯಾಗಿ ಸಂಶೋಧನೆ ಬಹಳ ಅಗತ್ಯ ಎಂದು ಭಾವಿಸುತ್ತೇನೆ. ಸಂಗೀತ, ನೃತ್ಯದಂಥ ಕ್ಷೇತ್ರದಲ್ಲೂ ಸಂಶೋಧನೆ ಆಗಬೇಕು. ಅಡಿಪಾಯ ಗಟ್ಟಿ ಮಾಡಿಕೊಂಡು ಬೆಳೆಯಬೇಕು. ಗುರುಗಳ ಪಾಠ, ಪ್ರತಿಭೆ ಮತ್ತು ನಮ್ಮ ಅಧ್ಯಯನದ ಮೂಲಕ ಗಳಿಸಿದ ಜ್ಞಾನ ನಮ್ಮನ್ನು ಬೆಳೆಸುತ್ತದೆ. ಯಾವುದೇ ಒಂದು ಪ್ರಯೋಗಕ್ಕೆ ಮುನ್ನ ಅದರ ಆಳವಾದ ಅಧ್ಯಯನ ಮಾಡಲೇಬೇಕು.



2) ಇಂದು ಕಲಾವಿದರ ಮನೋವೃತ್ತಿಯಲ್ಲಿ ಬಹು ದೊಡ್ಡ ಬದಲಾವಣೆ ಆಗಿದೆ. ತಯಾರಿ ಆಗಿದೆಯೋ ಇಲ್ಲವೋ, ಸಾಮರ್ಥ್ಯ ಇದೆಯೋ ಇಲ್ಲವೋ ರಂಗದ ಮೇಲೆ ಬರಬೇಕು. ಹಿಂದೆ ಗುರುಗಳೇ ವಿದ್ಯಾರ್ಥಿಗಳನ್ನು ಸೂಚಿಸುತ್ತಿದ್ದರು. ಈಗ ಪೋಷಕರ ಒತ್ತಾಯಕ್ಕೆ ಅವರೂ ಮಣಿಯಬೇಕಿದೆ. ಯುವಪೀಳಿಗೆ ವಿವಿಧ ಮಾಧ್ಯಮಗಳ ಪ್ರಭಾವಕ್ಕೊಳಗಾಗಿದೆ. 'ಬೇಗ ಹೆಸರು ಸಿಗುತ್ತದೆ, ಎಲ್ಲರ ಗಮನ ಇರುತ್ತದೆ' ಇವೇ ಆಕರ್ಷಿಸುತ್ತಿವೆ. ಈ ತರಾತುರಿ ಏತಕ್ಕೆ? ಇದರಿಂದ ಸೃಜನಶೀಲತೆಗೆ ಧಕ್ಕೆ ಬರುತ್ತದೆ. ಪ್ರತಿಭೆ ಇದ್ದೇ ಇದೆ. ಕಲೆಯನ್ನು ನೋಡುವ ಪರಿ ಬದಲಾಗಿದೆ. ಒಂದು ಕಾಲದಲ್ಲಿ ಆರಾಧನೆ ಆಗಿದ್ದದ್ದು ಈಗ ಸಂಪಾದನೆ ಆಗಿದೆ. ಹಣವನ್ನು ಹಗುರವಾಗಿ ನೋಡುತ್ತಾರೆ. ಹಾಗೆ ನೋಡಿದರೆ ಕಳ್ಳನೂ ಕಷ್ಟಪಟ್ಟಿರುತ್ತಾನೆ, ಅಲ್ಲವೇ? 'ಇಂಡಸ್ಟ್ರಿ ಇದೆಯಲ್ಲ ಹಣ ಕೊಡಿ' ಅನ್ನುತ್ತಾರೆ, ಅದೇ ವಿಷಾದ. ಮನೋಭೂಮಿಕೆಯಲ್ಲಿ ಸಿದ್ಧತೆಯಿಲ್ಲ, ಪ್ರಾಮಾಣಿಕತೆಯಿಲ್ಲ.

ನನಗೆ ಕಲೆಯ ಬಗ್ಗೆ ಗೌರವವಿದೆ. ಅದರಿಂದ ನನಗೆ ಸಂತೋಷ ಸಿಗುತ್ತದೆ, ಹಾಗಾಗಿ ಪೋಷಿಸುತ್ತೇನೆ. ಒಮ್ಮೊಮ್ಮೆ, ಕಲಾವಿದ ತಾನೇ ಸರ್ವಸ್ವ ಎಂದು ಭಾವಿಸುತ್ತಾನೆ. ತಪ್ಪಲ್ಲವೇ? ಶರೀರದಲ್ಲಿ ಎಲ್ಲ ಅಂಗಗಳೂ ಮುಖ್ಯವಲ್ಲವೇ? ಎಲ್ಲ ಅಂಶಗಳೂ ಸೇರಿ ಕಲೆ ಆಗುತ್ತದೆ. ಎಲ್ಲರೂ ಒಟ್ಟಿಗೆ ಸೇರಿ ಆಸ್ವಾದಿಸುತ್ತಾರೆ. ನಾನೂ ಸಹ 12 ತಾಸು ದುಡಿದು ಸಂಪಾದಿಸುತ್ತೀನಿ, 'ಇವರು ಹಣ ಕೊಡಲ್ಲ', ಅಂದಾಗ ಬೇಸರವಾಗುತ್ತದೆ. ನಾನು ಪ್ರಾಯೋಜಕರನ್ನು ಹುಡುಕುವುದಿಲ್ಲ. ನನ್ನ ಕಷ್ಟದ ದುಡಿಮೆಗೆ ಮಹತ್ವ ಕೊಡಲಿ. ನನ್ನ ಮಿತಿಗಳಿಗೆ ಸ್ಪಂದಿಸುವವರು ಬೇಕು. ಹಾಗಂತ ಎಲ್ಲರೂ ಹಾಗಲ್ಲ. ಆದರೆ ಒಬ್ಬಿಬ್ಬರು ಆಕ್ಷೇಪಿಸಿದರೂ ನೋವಾಗುತ್ತದೆ.

ಈಗಿನ ಪ್ರೇಕ್ಷಕನೂ ಸಾಕಷ್ಟು ಬದಲಾಗಿದ್ದಾನೆ. ಅವನಿಗಾಗಿ ಕಲಾವಿದರೂ ಅನೇಕ ಮಾರ್ಪಾಟು ಮಾಡಿಕೊಳ್ಳುತ್ತಿದ್ದಾರೆ. ಹಿಂದೆ ಏಕವ್ಯಕ್ತಿ ಪ್ರದರ್ಶನ ಇರುತ್ತಿತ್ತು. ವೈಯಕ್ತಿಕವಾಗಿ ನನಗೂ ಅದೇ ಹಿಡಿಸುತ್ತದೆ. ಆದರೆ ಈಗ ಗುಂಪು ಗುಂಪಾಗಿ ಮಾಡುತ್ತಾರೆ, ಬೆಳಕು ಸಂಯೋಜನೆ, ವೇಷಭೂಷಣಕ್ಕೇ ಮಹತ್ವ ಕೊಡುತ್ತಾರೆ. ಹಾಗೆ ನೋಡಿದರೆ ಅಭ್ಯಾಸದ ಉಡುಪುಗಳಲ್ಲೇ ಎಷ್ಟೋ ಚೆನ್ನಾಗಿ ಕಾಣುತ್ತಾರೆಂಬುದು ಒಂದು ವಿಪರ್ಯಾಸ.

ಹೇಳುತ್ತಾ ಹೋದರೆ ಬಹಳಷ್ಟು ಸಮಸ್ಯೆಗಳಿವೆ. ಪ್ರತಿ ಸಂಸ್ಥೆಯಲ್ಲೂ ಅವರದೇ ಆದ ನಿಯಮಾವಳಿಗಳಿರುತ್ತವೆ. ಕಲಾವಿದ ಅದಕ್ಕೆ ಬದ್ಧನಾಗಿರಬೇಕು. ಆದರೆ ಪ್ರದರ್ಶನದ ಅವಕಾಶ ಕೊಟ್ಟಾಗಲೂ 'ಮಧ್ಯದ ಅವಧಿ ಕೊಡಿ' ಅಂತಾರೆ. ಒಳ ಉದ್ದೇಶ ಬೇರೆಯೇ ಇರುತ್ತದೆ. ಒಂದು ತಾಸಿನಲ್ಲಿ ಏನು ವ್ಯತ್ಯಾಸ ಆಗುತ್ತದೋ ಕಾಣೆ. ಈ 'ಅಹಂ'ಪೂರಿತ ವಾತಾವರಣ ಸೃಷ್ಟಿಯಾಗಿಬಿಟ್ಟಿದೆ. ಸಂಗೀತ ಕಾರ್ಯಕ್ರಮದಲ್ಲಿ, ಕೇಳುಗರಿಗೆ ಸಂಗೀತ ಅಷ್ಟಾಗಿ ತಿಳಿದಿರುವುದಿಲ್ಲ, ಹಾಗಾಗಿ 'ಸ್ವಲ್ಪ ವಿವರಣೆ ಕೊಡಿ' ಎನ್ನುತ್ತೇನೆ. ಅದನ್ನು ಅಲಕ್ಷಿಸುತ್ತಾರೆ. ಅದೇ ನೃತ್ಯದಲ್ಲಿ ಎಲ್ಲವೂ ತಾನಾಗೇ ತಿಳಿಯುವಾಗ, ಸುಮಾರು 10 ನಿಮಿಷ ವಿವರಣೆಗಾಗಿ ಮೀಸಲಿಡುತ್ತಾರೆ. ಎರಡೂ ವೈರುಧ್ಯಗಳೇ! ಅಲ್ಲದೆ, ತಾವೇ ನರ್ತಿಸಬೇಕು, ತಾವೇ ವಿವರಣೆ ಕೊಡಬೇಕು, ಅದೂ ಸಹ ಏದುಸಿರು ಬಿಡುತ್ತಾ! ಕಲಾವಿದರನ್ನು ಅವರ ಕಲೆಯಿಂದಲೇ ಗುರುತಿಸುವಾಗ ವಿನಾಕಾರಣ ಮಾತುಗಳೇಕೆ?

ಕಲೆ ಭಾಷೆಯನ್ನು ಮೀರಿದ್ದು ನಿಜ. ಸಂಗೀತದಲ್ಲಿ ರಾಗ ಹಿಡಿದು ಆಸ್ವಾದಿಸಿ ಆನಂದಪಡಬಹುದು. ಆದರೆ ನೃತ್ಯ ದೃಶ್ಯಾತ್ಮಕ. ಸಾಹಿತ್ಯಕ್ಕೆ ಅದು ಒಳಪಟ್ಟೂ ಸಹೃದಯನನ್ನು ತಲುಪದಿದ್ದರೆ ಮಾಡಿದ ಪ್ರಯೋಗ ವ್ಯರ್ಥವಲ್ಲವೇ? ಹಾಗಾಗಿ ಸಾಹಿತ್ಯ ಅರ್ಥ ವಾಗಬೇಕು. ಆಗ ಚಲನವಲನಕ್ಕೆ ಅರ್ಥ ಬರುತ್ತದೆ. ನನಗಂತೂ ಆಸ್ವಾದಿಸಲು ಭಾಷೆ ತಿಳಿದಿರುವುದು ಬಹಳ ಮುಖ್ಯ. ಅಲ್ಲದೇ, ಯಾವ ವರ್ಗದ ಪ್ರೇಕ್ಷಕನಿಗೆ ಈ ಪ್ರದರ್ಶನ ಎಂಬುದೂ ಗಮನದಲ್ಲಿರಿಸಬೇಕಾದ ಬಹು ದೊಡ್ಡ ಅಂಶ.

ಒಟ್ಟಾರೆ, ಮನೋಭಾವ ಬದಲಾಗಬೇಕು. ಪಾಠಗಳು ಬದಲಾಗುವುದಿಲ್ಲ. ಕಲೆಯನ್ನು ಜನ ಗಂಭೀರವಾಗಿ ತೆಗೆದುಕೊಳ್ಳಬೇಕು. ಅಂತಹ ಗಂಭೀರ ಚಿಂತಕರಿರುವವರೆಗೂ ಯಾವುದೇ ಚಿಂತೆಯಿಲ್ಲ.

**ಅನಂತರಾಮ್, ಹಿರಿಯ ಸಂಘಟಕರು/ ಅಧ್ಯಕ್ಷರು, ಬಿಟಿಎಂ ಕಲ್ಚರಲ್ ಅಕಾಡೆಮಿ, ಬೆಂಗಳೂರು**

1) ಸಂಶೋಧನೆ ಖಂಡಿತಾ ಬೇಕು. ಈಗೀಗಂತೂ ಕಲೆಯಲ್ಲಿ ಎಲ್ಲವೂ ಚರ್ವಿತ ಚರ್ವಣ; ಅದದನ್ನೇ ಮತ್ತೆ ಮತ್ತೆ ಪ್ರಯೋಗಿಸುತ್ತಾರೆ. ಹಾಗಾಗಿ ಮುಂದಿನದನ್ನು ಸುಲಭವಾಗಿ ನಿರೀಕ್ಷಿಸಬಹುದು. ಆದರೆ ಹೊಸದನ್ನು ಶಾಸ್ತ್ರೋಕ್ತವಾಗಿ ಪ್ರದರ್ಶಿಸಿದಾಗ ಜನಕ್ಕೂ ಇಷ್ಟವಾಗುತ್ತದೆ ಎಂದು ತಿಳಿಯುವುದೇ ಇಲ್ಲ. ಅಪರೂಪದ ಕೃತಿಗಳನ್ನು ಅಭಿನಯಕ್ಕೆ ತಂದಾಗ

ಚೆನ್ನಾಗಿರುತ್ತದೆ. ಆದರೆ ಅದಕ್ಕೆ ಪೂರಕ ಅಧ್ಯಯನ ಮಾಡಿರಬೇಕು. ಹೊಸ ಪ್ರಯೋಗಕ್ಕೆ ನನ್ನದೊಂದು ಸಲಹೆ ಏನೆಂದರೆ, ಹಿಂದಿನ ಸಾಂಪ್ರದಾಯಿಕ ನೃತ್ಯಬಂಧ ಇಟ್ಟುಕೊಂಡು, ಅದನ್ನೇ ಸಂಶೋಧನೆಯ ಹಿನ್ನೆಲೆಯಲ್ಲಿ ಪುನರ್‌ಸಂಯೋಜಿಸಬೇಕು. ಒಂದೇ ರಂಗದಲ್ಲಿ ಹಳತು, ಹೊಸತಿನ ಸಮನಾದ ಪ್ರದರ್ಶನವೂ ನಡೆಯಬೇಕು. ಆಗ ಸಂಪ್ರದಾಯ ಮತ್ತು ಸಂಶೋಧನೆಗಳನ್ನು ಒಟ್ಟಿಗೇ ನೋಡುವ ಅವಕಾಶ ಸಿಗುತ್ತದೆ. ಹೀಗೆ ಏನು ಹೊಸದನ್ನು ತರಲು ಸಾಧ್ಯ ಎಂದು ನೋಡಬೇಕು. ಸತತ ಪರಿಶ್ರಮ ಇರಬೇಕು. ಸಾಹಸಿಗಳಾಗಬೇಕು. ಡಾ.ಪದ್ಮಾ ಸುಬ್ರಹ್ಮಣ್ಯಂ ಅವರನ್ನು ಇಂದಿನ ಕಲಾವಿದರನೇಕರು ಪ್ರತ್ಯೇಕವಾಗಿಟ್ಟಿದ್ದಾರೆ. ಆದರೆ ಅವರು ಮಾಡುವುದನ್ನೂ ಸಹೃದಯರೆಲ್ಲಾ ಇಷ್ಟ ಪಡುತ್ತಾರೆ, ಅಲ್ಲವೆ? ಈ ಹಿನ್ನೆಲೆಯಲ್ಲಿ ಜನರ ಅಭಿಪ್ರಾಯ ತೆಗೆದುಕೊಳ್ಳುವುದೂ ಬಹಳ ಮುಖ್ಯ.

2) ಇಂದಿನ ನೃತ್ಯಶಾಲೆಗಳು ಪಾಠ ಕಲಿಸಿ, ಕಾರ್ಯಕ್ರಮ ಮಾಡಿಸಿ, ರಂಗಪ್ರವೇಶದಲ್ಲಿ ಕೊನೆಗೊಳ್ಳುವುದಕ್ಕೆ ಮಾತ್ರ ಸೀಮಿತವಾಗಿವೆ. ಹೊಸ ಪ್ರಯೋಗಗಳೇ ಕಾಣದಾಗಿದೆ. ಅಲ್ಲದೆ, ಪ್ರದರ್ಶನ ನೀಡುವ ರೀತಿಯಲ್ಲೂ ವ್ಯತ್ಯಾಸ ಆಗಿದೆ. ಬೆಳಕು, ಸಂಗೀತ, ವೇಷಗಳಿಗೇ ಆದ್ಯತೆ ಹೆಚ್ಚಾಗಿದೆ. ಹಿಂದೆ ಹಾಗಿರಲಿಲ್ಲ. ಸಾಮಾನ್ಯ ಉಡುಪುಗಳಲ್ಲೇ ಮಾಡುತ್ತಿದ್ದರು. ಬಾಲಸರಸ್ವತಿಯವರ ಚಿತ್ರ ನೋಡಿ, ಎಷ್ಟು ಸರಳ! ಆದರೆ ಅವರ ಅಭಿನಯ ಎಷ್ಟು ಅದ್ಭುತ! ಈಗ ತಾಂತ್ರಿಕತೆಯ ಮೊರೆ ಹೋಗಿದ್ದಾರೆ. ಕಲಿಯುವವರೂ ಹೆಚ್ಚಾಗಿದ್ದಾರೆ. ಹಿಂದೆ ಕಲೆಯ ತಳಹದಿಗೆ, ಮೂಲ ಪಾಠಗಳಿಗೆ ಮಹತ್ತ್ವ ಕೊಡುತ್ತಿದ್ದರು. ಈಗ ಅದು ಕಾಣುತ್ತಿಲ್ಲ. ಪ್ರದರ್ಶನಗಳಲ್ಲಿ ಅಬ್ಬರವೇ ಹೆಚ್ಚಾಗಿದೆ. ಸಮೂಹ ಸಂಯೋಜನೆಯ ನೃತ್ಯ ಮಾಡುವಾಗ ರಂಗದ ಅಳತೆಗೆ ತಕ್ಕಂತೆ ಅಳವಡಿಸಿಕೊಳ್ಳುವ ಬದ್ಧತೆ, ಯೋಚನೆಗಳೂ ಇಲ್ಲದಂತಾಗಿದೆ. ಚಿಕ್ಕ ವೇದಿಕೆಯಲ್ಲಿಯೂ ದೊಡ್ಡ ವೇದಿಕೆಯಷ್ಟೇ ಜನ ಇದ್ದರೆ, ನೋಡುವವರಿಗೂ ಮಾಡುವವರಿಗೂ ಕಷ್ಟವೇ ! ಇಷ್ಟಲ್ಲದೆ, ಚಿಕ್ಕ ಮಕ್ಕಳನ್ನು ಸ್ವತಂತ್ರರಾಗಿ ಬೆಳೆಯಲು ಬಿಡಬೇಕು ಎಂದೂ ಬಯಸುತ್ತೇನೆ.

**ಶ್ರೀಧರ್, ಹೆಸರಾಂತ ನೃತ್ಯ/ಚಲನಚಿತ್ರ ಕಲಾವಿದರು, ಬೆಂಗಳೂರು**

1) ಪ್ರದರ್ಶಕ ಕಲೆಗಳ ಮೂಲ ತಿಳುವಳಿಕೆ, ಜ್ಞಾನ. ಲಕ್ಷ್ಯ, ಲಕ್ಷಣ ಗೊತ್ತಿಲ್ಲದಿದ್ದರೆ, ಸತ್ವ ಇರುವುದಿಲ್ಲ. ಇಂದಿನ ಸಮಯದಲ್ಲಿ ನೃತ್ಯವನ್ನೇ ವೃತ್ತಿಯನ್ನಾಗಿಸಿಕೊಂಡವರು ಎಷ್ಟು ಜನ ಇದ್ದಾರೆ? ಹಿಂದೆ, ನಟುವನಾರ್‌ಗಳು ಎಲ್ಲವನ್ನೂ ತಿಳಿದಿದ್ದರು. ಅದು ಮೌಖಿಕ ಪರಂಪರೆಯಲ್ಲಿ ಬಂದಿತ್ತು. ಈಗ 300 ವರ್ಷಗಳಿಂದೀಚೆಗೆ ಎಲ್ಲವೂ ಕಳೆದು ಹೋಗಿದೆ. ಕ್ಲಿಷ್ಟವಾದದ್ದು ಕಾಲಘಟ್ಟದಲ್ಲಿ ಕಳೆದುಹೋದವು, ಕರಣಗಳೂ ಸಹ. ಈಗ, ಭಾರತೀಯ ಸಂಸ್ಕೃತಿ ಪುನರ್ನಿರ್ಮಾಣದಲ್ಲಿದೆ. ಆಗಿನ ನಟ್ಟುವನಾರ್‌ನ ಜ್ಞಾನಮಟ್ಟದಲ್ಲಿ ಇಂದಿನ ಪ್ರದರ್ಶಕ ಇದ್ದಾನಾ? ಇದು ಇಂದಿನ ಬಹು ಮುಖ್ಯ ಪ್ರಶ್ನೆ. ಇಂದಿನ ಕಲಾವಿದನು ಚರಿತ್ರೆ, ಸಂಗೀತ, ಅಧ್ಯಾತ್ಮ, ನಾಟ್ಯಶಾಸ್ತ್ರದ ಅಧ್ಯಾಯ ಹೀಗೆ ಎಲ್ಲವನ್ನೂ ಕಲಿತಿದ್ದಾನಾ? ಯಾವ ಅಳತೆಯಲ್ಲಿ ಅವನನ್ನು ನೋಡುವುದು? ವಾರಕ್ಕೆರಡು ದಿನ ಬಂದು ಕಲಿತವನು ಉತ್ತಮನೋ ಅಥವಾ ಜೀವನವಿಡೀ ಕಲೆಗಾಗಿ ಮುಡಿಪಾಗಿಟ್ಟಿರುವವರೋ? ಪ್ರಶ್ನೆಗಳು ಸಾಕಷ್ಟಿವೆ. ಒಟ್ಟಿನಲ್ಲಿ ಅಧ್ಯಯನ ಜೀವನದಲ್ಲಿ ಬಹಳ ಮುಖ್ಯ.



ಕೆಲವನ್ನು ಗುರುಗಳಿಂದ ಕಲಿತು, ಕೆಲವನ್ನು ಸ್ವತಃ ಅರಿತು, ಶಾಸ್ತ್ರ, ಇತಿಹಾಸ, ಆಧ್ಯಾತ್ಮಗಳ ಅಧ್ಯಯನ ಮಾಡಿ, ಅರಗಿಸಿಕೊಳ್ಳಬೇಕು. ಸಂಶೋಧನೆಯಿಂದ ಇವೆಲ್ಲದರ ಸಂಪರ್ಕ ಬರುತ್ತದೆ. ಅದರಿಂದ ಪ್ರದರ್ಶನ ಕಲೆ ಪ್ರಜ್ವಲಿಸುತ್ತದೆ. ಜ್ಞಾನದ ಪ್ರತಿಬಿಂಬ ಪ್ರದರ್ಶನದಲ್ಲಿ ಕಾಣುತ್ತದೆ. ಅಭಿನವಗುಪ್ತನ ಕೊಡುಗೆ ಸಂಶೋಧನೆಯಿಂದ ತಾನೇ ಆದುದು? ಬಾಲಸರಸ್ವತಿ ಯಾವ ಮಟ್ಟದಲ್ಲಿರುವ ಕಲಾವಿದೆಯೆಂದರೆ ಅವರ ಅಧ್ಯಯನ ಅವರ ಜೀವನದಲ್ಲೇ ನಡೆದಿದೆ; ಅವರ ಪರಂಪರೆಯಲ್ಲೇ ಅಧ್ಯಯನ ಇದೆ–ಅಭಿನಯ ಕಲಿಯಲು ಕೂಚುಪುಡಿ ಗುರುಗಳನ್ನು ಆಶ್ರಯಿಸಿದರು. ಅದೂ ಸಹ ಒಂದು ಸಂಶೋಧನೆಯ ಕ್ರಿಯೆ. ಆ ಮನೋಭಾವ ಎಲ್ಲರಲ್ಲೂ ಇರಬೇಕು. ಸಂಶೋಧನೆಯಲ್ಲಿ ಬಹು ಮುಖ್ಯವಾದ ವಾಕ್ಯ –'ಮನಃಸತ್ವ ಬೆಳೆಸಿಕೊಳ್ಳಬೇಕು'. ಸಂಶೋಧನೆಯಲ್ಲಿ ಪ್ರಯೋಗ, ಪ್ರಯೋಗದಲ್ಲಿ ಸಂಶೋಧನೆ ಹಾಸುಹೊಕ್ಕಾಗಿದೆ. ಅಧ್ಯಯನದಿಂದ ವಿಷಯದ ವಿಸ್ತಾರ, ವ್ಯಾಪ್ತಿ ಗೊತ್ತಾಗುತ್ತದೆ. ನಮ್ಮ ತಿಳುವಳಿಕೆ ಎಷ್ಟು ಸೀಮಿತ, ಜ್ಞಾನ ಎಷ್ಟು ಅಗಾಧವಾದದ್ದು ಎಂಬ ಅರಿವಾಗುತ್ತದೆ. ಇತರರಲ್ಲಿನ ಉತ್ತಮವಾದದ್ದನ್ನು ಗ್ರಹಿಸುವ ದೃಷ್ಟಿಕೋನ ಬೆಳೆಯುತ್ತದೆ.

2) ಹಿಂದೆ ನೃತ್ಯ ಅತ್ಯಂತ ಉನ್ನತ ಮಟ್ಟದಲ್ಲಿತ್ತು. ನಾವು ಆ ಮಟ್ಟ ತಲುಪುತ್ತೀವಾ, ಆ ಮಟ್ಟ ಏರಲು ಸಾಧ್ಯವಾ ಅನ್ನಿಸುತ್ತದೆ. ಹಿಂದಿನ ಶ್ರೇಷ್ಠತೆಯನ್ನು ನೋಡಲೂ ಆಗದು. ಆಗಿರುವ ಸಾಧನೆಗಳ ಪರಿಕಲ್ಪನೆ ಸಹ ನಮಗಿಲ್ಲ. 5 ದಶಕಗಳ ಹಿಂದಿನ ಸಾಧನೆಗಳ ಬಗ್ಗೆಯೇ ನಮಗೆ ತಿಳಿದಿಲ್ಲ. ಉದಯ್ ಶಂಕರ್ ಅವರ ಸಾಧನೆಯೇ ಗೊತ್ತಿಲ್ಲ. ಹಿಂದಿನವರಿಗೆ ನೃತ್ಯವೇ ಜೀವವಾಗಿತ್ತು, ವೃತ್ತಿಯಾಗಿತ್ತು. ತಕ್ಕ ಪೋಷಣೆಯೂ ಸಿಗುತ್ತಿತ್ತು. ಇಂದಿನ ಸೀಮಿತ ಪರಿಸ್ಥಿತಿಯಲ್ಲಿ, ಬದಲಾದ ವಾತಾವರಣದಲ್ಲಿ ಒಳ್ಳೆಯ ವಿಷಯ ತೆಗೆದುಕೊಂಡು ಮುಂದಿನ ಪೀಳಿಗೆಯವರಿಗೆ ಕೊಡುವುದು ನಮ್ಮ ಜವಾಬ್ದಾರಿ. ಈ ಕಾಲಗತಿಯಲ್ಲಿ ಅವಕಾಶ ಸಿಕ್ಕಾಗ ಕಲೆಯನ್ನು ಬೆಳೆಸುವಂಥ ಮನಸ್ಸು ಬೇಕು. ಭವಿಷ್ಯದ ಬೀಜ ನಮ್ಮ ಕೈಯಲ್ಲೇ ಇದೆ.

**ರಾಮಮೂರ್ತಿ ರಾವ್, ಭರತನಾಟ್ಯ ನೃತ್ಯಗುರು/ ಲೇಖಕರು, ಮೈಸೂರು.**

1) ಸಂಶೋಧನೆಯ ಅವಶ್ಯಕತೆ ಖಂಡಿತಾ ಇದೆ. ಯಾವುದೇ ಕ್ಷೇತ್ರದ ಬೆಳವಣಿಗೆ ಆಗೋದು ಸಂಶೋಧನೆಯಿಂದಲೇ. ಇಲ್ಲದಿದ್ದರೆ ನಿಂತ ನೀರಾಗುತ್ತದೆ. ಸಂಶೋಧನೆ ಇಲ್ಲದಿದ್ದರೆ ಜೀವನ ನಡೆಸಲಿಕ್ಕಾಗದು. ವಿಜ್ಞಾನ, ತಂತ್ರಜ್ಞಾನದಲ್ಲಿ ಹಿಂದೆ ಆದ ಸಂಶೋಧನೆಗಳ ಫಲ ಇಂದು ನಾವು ಅನುಭವಿಸುತ್ತಿದ್ದೇವೆ. ಆದರೆ, ಸಂಶೋಧನೆ ಕೇವಲ ಪದವಿಗಾಗಿ ಆಗಬಾರದು. ಆಗ ಅದು ವೈಯಕ್ತಿಕ ಬೆಳವಣಿಗೆಗೆ ಮಾತ್ರ ಆಗುತ್ತದೆ. ಒಂದು ಸಂಶೋಧನೆಯಿಂದ ಕ್ಷೇತ್ರಕ್ಕೆ ಏನು ಕೊಡುಗೆ ಕೊಡಲು ಸಾಧ್ಯ ಅನ್ನುವುದರ ಮೇಲೆ ಅದರ ಮೌಲ್ಯ ನಿಂತಿದೆ. ಉದಾಹರಣೆಗೆ, ಡಾ. ಪದ್ಮಾ ಸುಬ್ರಹ್ಮಣ್ಯಂ ಅವರ ಸಂಶೋಧನೆಯಿಂದ ಹೊಸ ಬೆಳವಣಿಗೆ ಆಗಿದೆ. ಅನೇಕರು ಕರಣಗಳನ್ನು ಬಳಸುತ್ತಿದ್ದಾರೆ. ಅದು ಶಾಸ್ತ್ರದ ಚೌಕಟ್ಟಿನಲ್ಲೇ ಇದೆ. ಶಿಲ್ಪ, ಗ್ರಂಥಗಳ ಅಧ್ಯಯನದಿಂದ ಹೊಸತನ ತಂದಿದ್ದಾರೆ. ಹಾಗೆಯೇ, ಸಂಶೋಧನೆಯು ಮುಂದಿನ ಪೀಳಿಗೆಗೆ ಅನುಕೂಲವಾಗುವಂತಿರಬೇಕು, ಮಾರ್ಗದರ್ಶನ ಮಾಡುವಂತಿರಬೇಕು. ಸಂಶೋಧನೆಯ ಫಲಿತಾಂಶ ನೃತ್ಯ ರಂಗದವರಿಗೆ ಸಿಗುವಂತಿದ್ದರೆ ಅಂತಹ ಪ್ರಯತ್ನ ಸ್ವಾಗತಾರ್ಹ, ಶ್ಲಾಘನೀಯ. ಕೆಲವರು ಕೇವಲ ಕುತೂಹಲಕ್ಕಾಗಿ ಸಂಶೋಧನೆ ಮಾಡುತ್ತಾರೆ. ಕುತೂಹಲದ ಜೊತೆ ಸೃಜನಶೀಲತೆಯೂ ಇದ್ದರೆ ಉಪಯೋಗವಾಗುತ್ತದೆ.



2) ಕಳೆದ 45 ವರ್ಷಗಳಿಂದ ನೃತ್ಯದ ಬದಲಾವಣೆಗಳನ್ನು ನೋಡುತ್ತಿದ್ದೇನೆ. ಅದಕ್ಕೂ ಹಿಂದಿನದಾದ ಅರಮನೆ, ದೇವಾಲಯಗಳಲ್ಲಿನ ನೃತ್ಯದ ಬಗ್ಗೆ ಹಿರಿಯರಿಂದ ಕೇಳಿದ್ದೇನೆ. ಬೇಕಾದಷ್ಟು ಬದಲಾವಣೆ ಆಗಿದೆ. ಒಳ್ಳೆಯದೇನೋ ಆಗಿದೆ. ಆದರೆ ಕಳೆದ 10 ವರ್ಷಗಳಲ್ಲಿ ಸಾಕಷ್ಟು ಕುಂಠಿತವಾಗಿದೆ ಅನ್ನಿಸುತ್ತಿದೆ. ಅದಕ್ಕೆ ಯಾರನ್ನೂ ಆಕ್ಷೇಪಿಸಲು ಆಗುವುದಿಲ್ಲ. ಈಗ ಕಲಿಯುವವರಿಗೆ ಹೆಚ್ಚಿನ ಸಮಯ ಸಿಗುತ್ತಿಲ್ಲ. ಎಲ್ಲರಿಗೂ ಶಾಲಾ, ಕಾಲೇಜು, ಉದ್ಯೋಗಗಳ ಒತ್ತಡ ಹೆಚ್ಚಾಗಿದೆ. ಅವುಗಳಿಗೇ ಪ್ರಥಮ ಆದ್ಯತೆ, ನೃತ್ಯ ನಂತರದ ಆಯ್ಕೆ. ಅದೇ ನಾವು ಕಲಿಯುತ್ತಿದ್ದಾಗ 3–6 ತಾಸು ಸತತ ಅಭ್ಯಾಸ ಮಾಡುತ್ತಿದ್ದೆವು. ಪರೀಕ್ಷೆ, ಪ್ರದರ್ಶನಗಳ ವೇಳೆ ಇನ್ನೂ ಹೆಚ್ಚು. ಈಗ ವರ್ಷ ವರ್ಷ ಪರೀಕ್ಷೆ ತೆಗೆದುಕೊಳ್ಳುವವರ ಸಂಖ್ಯೆಯೇನೋ ಬೆಳೆಯುತ್ತಿದೆ; ಆದರೆ ಗುಣಮಟ್ಟ ಕುಂಠಿತವಾಗಿದೆ. ಕಾರಣವೂ ಅದೇ, ಸಮಯ ಕೊಡುವುದಕ್ಕಾಗುತ್ತಿಲ್ಲ. ವಿಶ್ವವಿದ್ಯಾನಿಲಯಗಳಲ್ಲಿ ಪೂರ್ಣಾವಧಿ ಕೋರ್ಸ್‌ಗಳಿದ್ದರೂ ಅಲ್ಲಿ ಕಲಿಯುತ್ತಿರುವವರು ಬೆರಳೆಣಿಕೆಯಷ್ಟು ಜನ ಮಾತ್ರ.

ಇಂದು ನಮ್ಮ ನೃತ್ಯ ಅಂತರ್ ರಾಷ್ಟ್ರೀಯ ಮಟ್ಟದಲ್ಲಿ ವ್ಯಾಪ್ತಿ, ಮೌಲ್ಯ ಹೊಂದಿದೆ. ಆದರೆ ಅದಕ್ಕೆ ಬೇಕಾದ ಸರಕು ಸಾಗಾಣೆ ಸರಿಯಾಗಿ ಆಗುತ್ತಿಲ್ಲ– ಅಂದರೆ ತಕ್ಕ ಗುಣಮಟ್ಟ ಕಾಪಾಡಿಕೊಂಡು ಬರುತ್ತಿಲ್ಲ ಅನ್ನುವುದೇ ವಿಷಾದ.

ಹಿಂದೆ ಸಾತ್ವಿಕ ಮೌಲ್ಯ ಇತ್ತು. ಈಗ್ಗೆ ಸುಮಾರು 40 ವರ್ಷಗಳ ತನಕ ಕಲಾವಿದರಿಗೆ ಗೌರವ, ಪ್ರೋತ್ಸಾಹ ಸಿಕ್ಕವು. ಈಗ ಎಲ್ಲಾ ಗೊಂದಲಮಯವಾಗಿದೆ. ಇಂದು ಇದನ್ನು ವೃತ್ತಿಯಾಗಿ ತೆಗೆದುಕೊಳ್ಳುವವರು ಕಡಿಮೆ. ಸಾಂದರ್ಭಿಕವಾಗಿ ಕೆಲವರು ತೆಗೆದುಕೊಂಡಿದ್ದಾರೆ. ಉಳಿಸಿ, ಬೆಳೆಸುತ್ತೀನಿ ಅಂತ ಕಲಾವಿದರು ಮುಂದೆ ಬಂದಾಗ ಮುಂದುವರೆಯುತ್ತದೆ. ಆದರೆ ಎಷ್ಟೋ ಬಾರಿ ಹಾಗೆ ನಿಂತವರಿಗೆ ಪೂರಕ ಸಹಕಾರ ದೊರೆಯದೆ ಹಿನ್ನಡೆಯುವುದೂ ಉಂಟು. ಹಾಗಾಗಿ ಭವಿಷ್ಯ ಸ್ಪಷ್ಟವಾಗಿಲ್ಲ. ಸಮಕಾಲೀನದ ಕಾಂಟೆಂಪೊರೆರಿಯ ಗೀಳಿಗೆ ಇಂದಿನ ಯುವಪೀಳಿಗೆ ಬಿದ್ದಿದೆ. ಆದರೆ ಅದೆಷ್ಟಿದ್ದರೂ ಅದು ಟೆಂಪೊರರಿಯೇ. ಸಮಕಾಲೀನ ಎಂದರೆ, ಇಂದಿನದು. ಅಂದರೆ ಅದು ನಾಳೆಗಿಲ್ಲ. ಆದರೆ ಶಾಸ್ತ್ರೀಯತೆ ಶಾಶ್ವತ. ಅದಕ್ಕೆ ಅದರದೇ ಆದ ಮೌಲ್ಯ ಇದೆ. ಅದರಲ್ಲೇ ಹೊಸತನ ತರಬಹುದು ಹಾಗಿರುವಾಗ ಬೇರೇನೋ ಯಾಕೆ ಮಾಡುತ್ತಿದ್ದಾರೆ, ಅವರ ಗುರಿಯೇನು ಅರ್ಥವಾಗುತ್ತಿಲ್ಲ. ವಿಷಯಾಧಾರಿತವಾದ ಶಾಸ್ತ್ರೀಯ ನೃತ್ಯವೇ ಕಬ್ಬಿಣದ ಕಡಲೆಯಾಗಿರುವಾಗ, ಸಂವಹನ ಕಷ್ಟ ಇರುವಾಗ, ಇದರಲ್ಲಿ ಹೇಗೆ ಮಾಡುತ್ತಾರೆ ಗೊತ್ತಿಲ್ಲ. ಶಾಸ್ತ್ರಕ್ಕೂ ಇದಕ್ಕೂ ಏನು ಸಂಬಂಧ? ಶಾಸ್ತ್ರಗಳನ್ನಿಟ್ಟುಕೊಂಡು ಏನು ಮಾಡುವುದು?– ಇವೇ ಇಂದಿನ ಬಹು ದೊಡ್ಡ ಪ್ರಶ್ನೆಗಳಾಗಿವೆ.

**ನಂದಕುಮಾರ್ / ರಾಧಿಕಾ ನಂದಕುಮಾರ್, ಹೆಸರಾಂತ ಸಂಗೀತ–ನೃತ್ಯ ಕಲಾವಿದರು/ಸಂಶೋಧಕರು/ ಉಪನ್ಯಾಸಕರು, ಮೈಸೂರು.**

1) ಸಂಶೋಧನೆ ಎನ್ನುವುದು ಸಮ್ಯಕ್ ಶೋಧನ. ಯಾವ ರೀತಿಯ ಶೋಧನ ಎಂದು ಮೊದಲು ತಿಳಿಯಬೇಕು. ನೃತ್ಯದಲ್ಲಿ ಪ್ರದರ್ಶಕ ಅಂಶಗಳಂತೆ ಅಧ್ಯಯನ ಅಂಶಗಳೂ ಇವೆ. ಮಾನವನ ಕ್ರಿಯೆ ಯಾವಾಗ ಸಂಶೋಧನೆಯಾಗುತ್ತದೆ?– ಎಂದು ಮೊದಲು ನಮ್ಮನ್ನೇ ನಾವು ಕೇಳಿಕೊಳ್ಳುವುದಾದರೆ ಆಯಾ ಕಾಲಕ್ಕೆ, ಆ ಕ್ಷಣಕ್ಕೆ ಹುಟ್ಟಿಕೊಳ್ಳುವುದು ಒಂದು ಕ್ರಿಯೆಯೆಂದೇ ಕರೆಯಲ್ಪಡುತ್ತದೆ. ಅದಕ್ಕೆ ಜ್ಞಾನ, ಮನನ, ಪೂರ್ವಾರ್ಜಿತ ಸಂಸ್ಕಾರ, ಪೂರ್ವಾಜಿತ ಪ್ರತಿಭೆಗಳ ಸಂಗಮ ಇರಬೇಕು. ತನ್ಮೂಲಕ ಮಾನವಚಿತ್ತ ನಿರ್ದೇಶ ಮಾಡುವ ಕ್ರಿಯೆ ಆಗಬೇಕು.

ಮುಖ್ಯವಾಗಿ ಪರಿಕರದಲ್ಲಿ ಸಂಶೋಧನೆ ಆಗಬೇಕು. ಅದನ್ನು ತೆಗೆದುಕೊಂಡು ನಂತರ ಪರಿಪಾಕ ಮಾಡುವುದು ಮತ್ತು ಸಹಜ ಚಿತ್ತಗುಣಕ್ಕೆ ಸಮೀಕರಣ ಮಾಡುವುದು. ಸಂಸ್ಕಾರ, ಪ್ರತಿಭೆ ಸೇರಿ ಚಿಂತನ ಆಗುತ್ತದೆ. ಸೃಜನಶಕ್ತಿಯ ಮೊದಲ ಅಂಕುರ ಆಗುತ್ತದೆ. ಆಗ ನಿರ್ಣಯ ಆಗುತ್ತದೆ. ಚಿಂತನ, ಮನನ ಹೀಗೆ ಎರಡು–ಮೂರು ಹಂತಗಳ ಬೆಳವಣಿಗೆ ಆಗುತ್ತದೆ. ಹೀಗೇ ಹಂತಹಂತವಾಗಿ ಬೆಳೆದು ಒಂದು ಹಂತದಲ್ಲಿ ಸಂಶೋಧನೆ ನಿಲ್ಲುತ್ತದೆ. ಅಲ್ಲಿ ರಸಗ್ರಹಣ ಆಗುತ್ತದೆ. ಅಲ್ಲಿ ಯೋಚಿಸಲು ಪ್ರತ್ಯೇಕ ಇರುವುದಿಲ್ಲ. ಏಕೆ ಹೀಗಾಯಿತು, ಹೇಗೆ ಹೀಗಾಯಿತು ಪ್ರಶ್ನಿಸುವುದಿಲ್ಲ. ಭರತನಿಂದ ಹಿಡಿದು ಇತರ ಮೀಮಾಂಸಕರೂ ಪ್ರತಿ ಹಂತದಲ್ಲೂ ಸಂಶೋಧನೆ ಇರಬೇಕು ಎಂದೇ ಹೇಳುತ್ತಾರೆ. ಆದು ಒಮ್ಮೊಮ್ಮೆ ಪಕ್ವತೆಯಲ್ಲಿ, ಅದೃಷ್ಟದಲ್ಲಿ ನಿಲ್ಲುತ್ತದೆ.

2) ಭೂತ, ವರ್ತಮಾನ, ಭವಿಷ್ಯ ಎಂದಾಗ ಕಾಲ ಪ್ರಮಾಣ ಎಷ್ಟು ಎನಿಸುವುದು ಸಹಜ. ಬಹಳ ಹಿಂದೆ ಸಮಯವಿತ್ತು. ಪರಿಕರ ಇತ್ತು. ಆದರೆ ವರ್ತಮಾನದ ಹಿಂದಿನ ಭೂತ ಸಂಕುಚಿತಗೊಂಡಿದೆ; ಗೊಂದಲವಿದೆ. ಪ್ರದರ್ಶನ ಎಷ್ಟು ಹೊತ್ತು, ಅವಧಿ ಇಳಿಸಬೇಕಾ ಬೇಡವಾ, ಇತ್ಯಾದಿ. ಹಿಂದಿನದನ್ನು ಇನ್ನೂ ಸಂಶೋಧನೆಗೆ ಒಳಪಡಿಸಬೇಕಾಗಿದೆ. ಕಲೆಯ ಗುಣ ಈ ಕ್ಷಣಕ್ಕೆ ಸಲ್ಲುತ್ತದೆ. ಮೂರೂ ಕಾಲಕ್ಕೆ ಸಮೀಕರಣ ಮಾಡಲು ಘಟನೆ ಹೇಗಿತ್ತು ಎಂಬುದನ್ನು ಮೊದಲು ತಿಳಿಯಬೇಕು. ಉದಾ : ಹಿಂದೆ ಸುದೀರ್ಘವಾಗಿತ್ತು, ಕೂಲಂಕುಷವಾಗಿತ್ತು, ಏಕವ್ಯಕ್ತಿ ಪ್ರದರ್ಶನ ಇದ್ದರೂ ಅದು ದೊಡ್ಡ ಕಾರ್ಯಕ್ರಮದ ಒಂದು ಅಂಗವಾಗಿದ್ದಿತು. ಪ್ರಕೃತಿಯನ್ನು ಅನುಸರಿಸುತ್ತಿದ್ದರು. ತತ್ತ್ವದ ಅನುಕರಣೆ ಮಾಡುತ್ತಿದ್ದರು. ಅತಿರೇಕದಿಂದ ಮಾಡುತ್ತಿದ್ದರು. ಕಾರಣ ರೇಖೆಗಳು ದೂರದವರೆಗೂ ಕಾಣಲಿ ಎಂದು. ಈಗ ವರ್ತಮಾನ ಎಂದಾಗ, ನನ್ನ ವಯಸ್ಸು, ನನ್ನ ತಂದೆಯ ಅರ್ಧ ವಯಸ್ಸು ಮತ್ತು ನನ್ನ ಮಗನ ಅರ್ಧ ವಯಸ್ಸು ಸೇರಿ ಹೆಚ್ಚು ಕಡಿಮೆ ನೂರು ವರ್ಷಗಳಾಗುತ್ತವೆ. ಈ ಅವಧಿಯಲ್ಲಿ ಬಹಳ ಬದಲಾವಣೆ ಆಗುತ್ತದೆ; ಅಥವಾ ಎಲ್ಲವೂ ಕಲಸುಮೇಲೋಗರವಾಗಿದೆ. ಹಿಂದೆ ರಾಗರಂಜನೆ, ಭಾವ–ಸ್ಫೂರ್ತಿ ಇದ್ದವು. ಈಗ ಕಡಿಮೆ ಅವಧಿಯಲ್ಲಿ ನವಿರಾಗಿ ಮೂಡಿಬರುತ್ತದೆ. ಅನುಕರಣೆ ಸಹ ಯಾಂತ್ರಿಕವಾಗಿದೆ. ಫೆಸಿಲಿಟಿ ಬಂದು ರಿಫೈನ್‌ಮೆಂಟ್ ಬಂದುಬಿಟ್ಟಿದೆ. ಒಳಗಿನ ಸತ್ತ್ವ ಹೊರಟುಹೋಗಿದೆ. ತಲ್ಲೀನತೆ ಇಲ್ಲ. ಇದನ್ನು ಸಮಗ್ರವಾಗಿ ಹೇಳುವುದು ಕಷ್ಟವೇ ಹೌದು. ಒಟ್ಟಿನಲ್ಲಿ ನಮ್ಮ ಆಶಯ ಏನೆಂದರೆ, ಈ ರಿಫೈನ್‌ಮೆಂಟ್ ಅನ್ನುವುದು ಪ್ರಕೃತಿ ಸಹಜವಾಗಿರಲಿ. ಇಡೀ ವಾತಾವರಣವೇ ಪ್ಲಾಸ್ಟಿಕ್ ಆಗಿ ಮಾರ್ಪಟ್ಟರೆ, ಕಲೆ ಕೂಡ ಪ್ಲಾಸ್ಟಿಕ್ ಆಗುವುದೇ ಒಳ್ಳೆಯದು.

*Interviewer 3 : Megha Krishna, Bengaluru*

**Sridevi Unni, Senior Mohiniaattam Guru, Bengaluru.**



1) Until a certain age it is ok if the dancer does not go into research, but as the artiste grows. I admit Anubhava' is the main guru. Even though the elderly gurus may not have had academic qualification, they have a lot of experience. That is why one must go to experienced gurus to seek knowledge. But those who want to know with perfect meaning and basics they should have the depth of knowledge. This is possible only with research.

2) Earlier we had to just obey what the Gurus and they would not explain to us in detail. Therefore we were in the position



to put in our own imagination; hence there was scope for originality. Also, the dance then was very spontaneous. If the dancer had the extempore the dancer could do many variations on the stage. Even the orchestra was very interactive and supportive. Even now when the dancers like Padma Subrahmanyam, Chitra Vishvesharan and Vyjayanthi Mala come on stage, they make us forget ourselves and they communicate so well with their music ensemble itself.

Today the students expect a lot from the teachers. They are very inquisitive and want to know each and every detail. Today's dancing is fixed but they term it as 'Discipline'. Sometimes the orchestra is good but most of the times I can see a lot of tension, worry and concentration especially during a Bharatanatyam arangetram and the dancer refuses to communicate with the orchestra. I really can't understand why ? The Gurus and students are all worried about criticisms.

I feel that the dancers should just enjoy their dancing. Since I am a Mohiniattam artiste and it is in sopanama style, there is no fixing of movements and is more relaxed. I feel there is more lasya and melody.

Future may be a mixture of both. Lot of thing have changed and is changing, I can't really say what it will be in future.

**Kiran Subramanyam, and Sandhya Kiran, Bharathanatyam Dance Duos/ Gurus, Bengaluru.**



1) **Kiran :** There are so many unknown facts and all those can come out only through research. The need of research is more in these days than anythingelse.

1) **Sandhya :** Research is a very subjective term. What research means to me may not be research to someone else. My research may be through experiences of other people or trial and error method or a theoretical understanding. Whatever be the kind of research, I feel that an artiste should be thoroughly equipped before any work is done.

2) **Kiran :** Dance has survived only because of constant thinking and

constructive changes. It has a positive growth. Dance has been changing according to the relevance of that particular period. Although the roots are the same, we are relating it to the present day scenario.

2) **Sandhya :** My Guru used to say that classical dance is like the river Ganga. Ganga is as she was thousands of years ago, even though the waters are ever changing. Dance may not be how it used to be in the past but the foundation is the same and I am sure its going to change from here on. I think it is good. Because we can't be stuck in one point of time. Thoughts and demands of the spectators are changing. Only time will judge what will stay and what will not.

**Gayathri Keshavan, Senior Bharathanatyam Guru, Bengaluru**



1) He/She is not the reasearcher one who do the research for the sake of qualification alone. According to me it should be practical as well as study oriented. It is very essential for every performing artiste to give preference for both.

2) I won't be able to tell what happened before me; but if I have to speak from the 1960's onwards I feel that, dance then was very simple and beautiful. But today a lot of unnecessary changes have been brought in. However it is not right to say that it is wrong to bring in changes. If the approach is in the classical format, changes can be made according to the artiste's individuality.

At the sametime I really won't be able to say how the future will be. But If I do, it would be like comparison of ancient and modern as comparing to the architecture of the Mysore Palace and that of any American Building! If the architectural beauty is to be expressed then it is definitely- the Mysore Palace. Therefore anything ancient and classic will always be appreciated.

**Sai Venkatesh, Organiser/ Guru, Bengaluru.**

1) Definitely, 100% research is needed. However, the word 'Research' sometimes frightens the young artistes and may be it can be put across as Knowledge, Advanced Knowledge and In-depth Knowledge. But yes, every artiste must do studies and be updated because now there are a lot of opportunities to gain more knowledge through the help of technology and I feel every dancer must make use of it.

2) Dance is as it is. 'That thai tha ha' is still 'That thai tha ha', 'Pataka' is 'Pataka' and so on. The base is the same only the presentation is different. Only thing is that our updation is very poor and that is why we don't have young spectators today. Keeping the dance form in mind I think that innovations can be made.

**Nirupama Rajendra, Renowned Kathak/Bharatanatyam Artiste, Bengaluru**



1) Research helps the artiste to discover the issue; because of which a lot of reading will happen. However it is not a must because not every performing artiste will be interested in reading/writing, but practically they may be very good. In simple words I can say it is like, 'Karma Yoga' and 'Jnana Yoga'.

